ಪುಸ್ತಕ ಪ್ರಪಂಚ

ಸಂಪುಟ ೪೩ ೧೯೮೩ ಮೇ ಸಂಚಿಕೆ ೧೦



ವಿಷಯ ಸೂಚಿ

ಮುಖಚಿತ್ರ : ಆದಿಶಂಕರಾಚಾರ್ಯರು

ಸಂಪಾದಕೀಯ ಮಂಡಲಿ

ಪುಸ್ತಕ ಪ್ರಪಂಚ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಪ್ರಕಟಣೆ

ಸಂಪುಟ ೪೬ ಮೇ ೧೯೮೨ ಸಂಚಿಕೆ ೧೦


ಅತ್ಯಧಿಕ ಗ್ರಹಣಗಳ ವರ್ಷ ೧೯೮೨

ಗ್ರಹಣದ ಜ್ಯಾಮಿತಿ ಅತಿ ಸರಳ. ಸೂರ್ಯನನ್ನು ಭೂಮಿಗೆ ಜೋಡಿಸುವ ರೇಖೆಯ ಮೇಲೆ ಚಂದ್ರ ಬಂದಾಗ ಚಂದ್ರನ ನೆರಳು ಭೂಮಿಯ ಮೇಲೆ ಕವಿಯುತ್ತದೆ. ಈ ಘಟನೆ ಸೂರ್ಯಗ್ರಹಣ. ಸೂರ್ಯನನ್ನು ಭೂಮಿಗೆ ಜೋಡಿಸುವ ರೇಖೆಯ ವಿಸ್ತರಣೆ ಮೇಲೆ ಚಂದ್ರ ಬಂದಾಗ ಭೂಮಿಯ ನೆರಳು ಚಂದ್ರನ ಮೇಲೆ ಬೀಳುತ್ತದೆ. ಈ ಘಟನೆ ಚಂದ್ರಗ್ರಹಣ. ಆದ್ದರಿಂದ ಗ್ರಹಣದ ಪ್ರಮುಖ ಆವಶ್ಯಕತೆ ಈ ಮೂರು ಕಾಯಗಳ ಏಕರೇಖಸ್ಥಿತೆ ಎಂದಾಯಿತು.

ಸೂರ್ಯಗ್ರಹಣದ ವೇಳೆ ಚಂದ್ರನ ಸೂರ್ಯವಿಮುಖ ಪಾರ್ಶ್ವ—ಅಂದರೆ ಬೆಳಗದ ಭಾಗ—ಭೂಮಿಯತ್ತ ತಿರುಗಿದರೆ ಚಂದ್ರಗ್ರಹಣದ ವೇಳೆ ಚಂದ್ರನ ಸೂರ್ಯಾಭಿಮುಖ ಪಾರ್ಶ್ವ—ಅಂದರೆ ಬೆಳಗುವ ಭಾಗ—ಭೂಮಿಯತ್ತ ತಿರುಗಿರುತ್ತದೆ. ಮೊದಲನೆಯ ಘಟನೆ ಅಮಾವಾಸ್ಯೆ, ಎರಡನೆಯದು ಹುಣ್ಣಿಮೆ. ಎಂದೇ ಸೂರ್ಯಗ್ರಹಣ ಅಮಾವಾಸ್ಯೆಯಂದು ಮಾತ್ರ, ಅಂತೆಯೇ ಚಂದ್ರಗ್ರಹಣ ಹುಣ್ಣಿಮೆಯಂದು ಮಾತ್ರ ಸಂಭವಿಸುವುದಾಗಿದೆ.

ಹಾಗಾದರೆ ಎಲ್ಲ ಅಮಾವಾಸ್ಯೆಗಳಂದು ಸೂರ್ಯಗ್ರಹಣಗಳೂ ಎಲ್ಲ ಹುಣ್ಣಿಮೆಗಳಂದು ಚಂದ್ರಗ್ರಹಣಗಳೂ ಘಟಿಸುವುವೇ? ಅನುಭವ ಹೇಳುತ್ತದೆ ಇಲ್ಲ ಎಂದು. ಏಕೆ? ಈ ಪ್ರಶ್ನೆಗೆ ಉತ್ತರ ಅರಸಲು ಬಾನಿನತ್ತ ಗಮನ ಹರಿಸಬೇಕು.

ಆಕಾಶದ ಅಸೀಮ ವಿಸ್ತಾರದಲ್ಲಿ ಸ್ಥಿರ ನಕ್ಷತ್ರಚಿತ್ರಗಳು ಒಂದು ಬಗೆಯ ಹಿನ್ನೆಲೆಯನ್ನು ಒದಗಿಸುತ್ತವೆ. ಇವುಗಳ ಮುನ್ನೆಲೆಯಲ್ಲಿ ಸೂರ್ಯ ಚಂದ್ರರ ವಿವಿಧ ವರಿಸೆಗಳು ಪ್ರದರ್ಶಿತವಾಗುತ್ತವೆ. ಇವನ್ನು ದೀರ್ಘಕಾಲ ಅಭ್ಯಸಿಸಿದರೆ ಈ ಮುಂದಿನ ಚಿತ್ರ ಸ್ಫುಟವಾಗುತ್ತದೆ.




ಗ್ರಹಣದ ಜ್ಯಾಮಿತಿ, S ಸೂರ್ಯ. E ಭೂಮಿ. M_1, M_2 ಚಂದ್ರನ ಎರಡು ವಿಶಿಷ್ಟ ಸ್ಥಾನಗಳು. ಚಂದ್ರ M_1 ರಲ್ಲಿರುವಾಗ ಸೂರ್ಯಗ್ರಹಣ ಮತ್ತು ಅಮಾವಾಸ್ಯೆ, M_2 ರಲ್ಲಿರುವಾಗ ಚಂದ್ರಗ್ರಹಣ ಮತ್ತು ಹುಣ್ಣಿಮೆ.

ಸೂರ್ಯ ಮತ್ತು ಚಂದ್ರ ಸದಾ ನಮ್ಮ ಸುತ್ತ ಪರಿಭ್ರಮಣೆ ಮಾಡುತ್ತಿರುತ್ತವೆ. ಪರಿಭ್ರಮಣೆಯ ದಿಶೆ ಪಶ್ಚಿಮದಿಂದ ಪೂರ್ವಕ್ಕೆ. ಒಂದು ಪರಿಭ್ರಮಣೆ ಮುಗಿಸಲು ಬೇಕಾಗುವ ಅವಧಿ, ಸೂರ್ಯನಿಗೆ ಸುಮಾರು ೩೬೫ ದಿವಸಗಳು, ಚಂದ್ರ ಸುಮಾರು ೨೭ ದಿವಸಗಳು. ಸೂರ್ಯನ ಪಥಕ್ಕೆ ಕ್ರಾಂತಿವೃತ್ತವೆಂದೂ ಚಂದ್ರನ ಪಥಕ್ಕೆ ಚಾಂದ್ರ ಕಕ್ಷೆಯೆಂದೂ ಹೆಸರು. ಇವೆರಡರ ನಡುವಿನ ಬಾಗು, ಅಂದರೆ ಒಂದರ ತಳ ಇನ್ನೊಂದರ ತಳಕ್ಕೆ ಎಷ್ಟು ವಾಲಿಕೊಂಡಿದೆ ಎಂಬುದರ ಅಳತೆ, ಅತ್ಯಲ್ಪ—ಕೇವಲ ೫°೮'. ಈ ವೃತ್ತಗಳ ಕೇಂದ್ರದಲ್ಲಿರುವ ಭೂಮಿಯಿಂದ ಎರಡು ತ್ರಿಜ್ಯಗಳನ್ನು ಒಂದೇ ದಿಶೆಗೆ, ಆದರೆ ಒಂದೊಂದು ತ್ರಿಜ್ಯ ಒಂದೊಂದು ವೃತ್ತದ ಮೇಲಿರುವಂತೆ, ಎಳೆದುದಾದರೆ ಇವೆರಡರ ನಡುವಿನ ಕೋನ ೫°೮' ಎಂದರ್ಥ. ಕ್ರಾಂತಿವೃತ್ತ ಮತ್ತು ಚಾಂದ್ರಕಕ್ಷೆ ಎರಡು ಬಿಂದುಗಳಲ್ಲಿ ಛೇದಿಸುತ್ತವೆ. ಇವೇ ರಾಹು ಮತ್ತು ಕೇತು. ಒಟ್ಟಾಗಿ ಇವುಗಳಿಗೆ ಪಾತಬಿಂದುಗಳೆಂದು ಹೆಸರು. ಭೂಮಿಯನ್ನು ಕುರಿತಂತೆ ಇವು ಒಂದು ಜೊತೆ ವ್ಯಾಸೀಯ ವಿರುದ್ಧ ಬಿಂದುಗಳು : ರಾಹು, ಭೂಮಿ, ಕೇತು ಈ ಕ್ರಮದಲ್ಲಿ ಒಂದೇ ಗೆರೆಯ ಮೇಲಿವೆ ಎಂದರ್ಥ. ಈ ವರ್ಷ ರಾಹು ಮಿಥುನ ರಾಶಿಯಲ್ಲಿಯೂ ಕೇತು ಧನುರಾಶಿಯಲ್ಲಿಯೂ ಇವೆ. ಮಿಥುನ ಮತ್ತು ಧನು ಒಂದು ಜೊತೆ ವ್ಯಾಸೀಯ ವಿರುದ್ಧ ನಕ್ಷತ್ರರಾಶಿಗಳು.

ವಸ್ತುತಃ ಸೂರ್ಯ ೬೪೦ ಲಕ್ಷ ಚಂದ್ರರನ್ನು ನುಂಗಬಲ್ಲ ಅತಿಕಾಯ. ಆದರೆ ಭೂಮಿ—ಸೂರ್ಯ ಅಂತರ ಭೂಮಿ—ಚಂದ್ರ ಅಂತರದ ಸುಮಾರು ೩೯೦ ಮಡಿ ದೊಡ್ಡದು. ಹೀಗಾಗಿ ಮಹಾದೈತ್ಯ ಸೂರ್ಯನೂ ಅಂಗುಷ್ಠ ಮಹಾರಾಜ ಚಂದ್ರನೂ ಸಮವಿಸ್ತಾರದ ಬಿಲ್ಲೆಗಳಂತೆ ನಮಗೆ ಕಾಣುತ್ತವೆ.

ವಿಭಿನ್ನ ವೇಗಗಳಿಂದ ತಮ್ಮ ತಮ್ಮ ಕಕ್ಷೆಗಳ ಮೇಲೆ ಒಂದೇ ದಿಶೆಯಲ್ಲಿ ನಿತ್ಯ ಸಂಚಾರಿಗಳಾಗಿರುವ ಸೂರ್ಯ ಚಂದ್ರರು ಭೂಮಿಯಿಂದ ಕಾಣುವಂತೆ ಪ್ರತಿ ಪಕ್ಷಾಂತ್ಯದಲ್ಲಿಯೂ ನಿರ್ದಿಷ್ಟ ಸ್ಥಾನಗಳಲ್ಲಿರುತ್ತವೆ. ಉದಾಹರಣೆಗೆ ಒಂದು ಮುಹೂರ್ತದಲ್ಲಿ ಭೂಮಿ-ಚಂದ್ರ–ಮತ್ತು ಭೂಮಿ ಸೂರ್ಯ ಒಂದೇ ದಿಶೆಯಲ್ಲಿವೆಯೆಂದು ಭಾವಿಸೋಣ. ಆಗ ಸಹಜವಾಗಿ ಚಂದ್ರನ ಸೂರ್ಯವಿಮುಖ ಪಾರ್ಶ್ವ ಭೂಮಿಯತ್ತ ತಿರುಗಿರುತ್ತದೆ. ಅಂದು ಅಮಾವಾಸ್ಯೆ. ಆದರೆ ಚಂದ್ರನ ಸ್ಥಾನವೂ ಸೂರ್ಯನ ಸ್ಥಾನವೂ ಬೇರೆ ಬೇರೆ ವೃತ್ತಗಳಾಗಿರುವುದರಿಂದ ಭೂಮಿ—ಚಂದ್ರ—ಸೂರ್ಯ ಏಕರೇಖಸ್ಥವಾಗಿರುವುದಿಲ್ಲ. ಆದ್ದರಿಂದ ಅಂದು ಸೂರ್ಯಗ್ರಹಣ ಸಂಭವಿಸದು. ಈ ಘಟನೆ ಕಳೆದು ಒಂದು ಪಕ್ಷ ಮುಗಿಯುವಾಗ



E ಭೂಮಿ, N ರಾಹು, N′ ಕೇತು, ANN′A ಕ್ರಾಂತಿವೃತ್ತ (ಸೂರ್ಯನಕಕ್ಷೆ), N′BNN′ ಚಾಂದ್ರಕಕ್ಷೆ. ಕೋನ AEB=5°8′.

ಭೂಮಿ—ಸೂರ್ಯ ಮತ್ತು ಭೂಮಿ-ಚಂದ್ರ ರೇಖೆಗಳು ಎದುರುಬದಿರಾಗಿದ್ದು ಚಂದ್ರನ ಸೂರ್ಯಾಭಿಮುಖ ಪಾರ್ಶ್ವ ಭೂಮಿಯತ್ತ ತಿರುಗಿರುತ್ತದೆ. ಅಂದು ಹುಣ್ಣಿಮೆ. ಆದರೆ ಪುನಃ ಚಂದ್ರನ ಸ್ಥಾನವೂ ಸೂರ್ಯನ ಸ್ಥಾನವೂ ಬೇರೆ ಬೇರೆ ವೃತ್ತಗಳಲ್ಲಿರುವುದರಿಂದ ಸೂರ್ಯ–ಭೂಮಿ – ಚಂದ್ರ ಏಕರೇಖಸ್ಥವಾಗಿರುವುದಿಲ್ಲ. ಆದ್ದರಿಂದ ಅಂದು ಚಂದ್ರಗ್ರಹಣ ಸಂಭವಿಸದು. ಅಂದ ಮೇಲೆ ಎಲ್ಲ ಅಮಾವಾಸ್ಯೆಗಳಂದು ಸೂರ್ಯಗ್ರಹಣಗಳೂ ಅಂತೆಯೇ ಎಲ್ಲ ಹುಣ್ಣಿಮೆಗಳಂದು ಚಂದ್ರ ಗ್ರಹಣಗಳೂ ಘಟಿಸಬೇಕಾಗಿಲ್ಲ ಎಂದಾಯಿತು.

ಸೂರ್ಯಗ್ರಹಣಗಳು ಕೆಲವು ವಿಶಿಷ್ಟ ಅಮಾವಾಸ್ಯೆಗಳಂದು ಮಾತ್ರಸಂಭವಿಸುತ್ತವೆ. ಅದೇ ರೀತಿ, ಚಂದ್ರಗ್ರಹಣಗಳು ಕೆಲವು ವಿಶಿಷ್ಟ ಹುಣ್ಣಿಮೆಗಳಂದು ಮಾತ್ರ ಸಂಭವಿಸುತ್ತವೆ ಎಂಬ ಸಂಗತಿ ಇಲ್ಲಿವರೆಗಿನ ವಿವರಣೆಯಿಂದ ಅನುಗತವಾಗುತ್ತದೆ. ಹಾಗಾದರೆ ಈ ಅನುಕೂಲ ಅಮಾವಾಸ್ಯೆಗಳು ಅಥವಾ ಹುಣ್ಣಿಮೆಗಳು ಯಾವುವು ಎಂಬುದು ಮುಂದಿನ ಪ್ರಶ್ನೆ.

ಗ್ರಹಣದಲ್ಲಿ ಪ್ರಧಾನ ಪಾತ್ರ ಸೂರ್ಯನದು, ದ್ವಿತೀಯ ಪಾತ್ರ ಚಂದ್ರನದು. ಬೆಳಕಿನ ಆಕರ ಸೂರ್ಯ ಆಗಿರುವುದೊಂದೇ ಇದರ ಕಾರಣವಲ್ಲ. ಒಂದು ವರ್ಷದ ಅವಧಿಯಲ್ಲಿ ಸೂರ್ಯ ಯಾವುದೇ ಪಾತಬಿಂದುವಿನ ಸನಿಹದಲ್ಲಿರುವುದು ಒಂದು ತಿಂಗಳ ಕಾಲ ಮಾತ್ರ. ಆ ಸೀಮಿತ ಅವಧಿಯಲ್ಲಿ ಘಟಿಸುವ ಅಮಾವಾಸ್ಯೆಗಳು ಸೂರ್ಯಗ್ರಹಣಗಳಾಗಲು, ಅಂತೆಯೇ, ಹುಣ್ಣಿಮೆಗಳು ಚಂದ್ರಗ್ರಹಣಗಳಾಗಲು ಅರ್ಹತೆ ಪಡೆದಿರುತ್ತವೆ. ಅರ್ಥಾತ್ ಆಗ ಮಾತ್ರ ಸೂರ್ಯ–ಚಂದ್ರ–ಭೂಮಿ ಅಥವಾ ಸೂರ್ಯ–ಭೂಮಿ-ಚಂದ್ರ ಏಕರೇಖಸ್ಥವಾಗುವ ಸಂಭಾವ್ಯತೆ ಇರುವುದಾಗಿದೆ. ಚಂದ್ರನಾದರೋ ಪಕ್ಷಕ್ಕೊಮ್ಮೆ ಒಂದು ಪಾತಬಿಂದುವಿನಲ್ಲಿ ಇದ್ದೇ ಇರುತ್ತದೆ. ಆ ವೇಳೆಯಲ್ಲಿ ಸೂರ್ಯ ಪಾತಬಿಂದುವೊಂದರ ಆಸುಪಾಸಿನಲ್ಲಿ ಇರದಿದ್ದರೆ ಆಗ ಸಂಭವಿಸುವ ಹುಣ್ಣಿಮೆ ಅಮಾವಾಸ್ಯೆಗಳು ಗ್ರಹಣರಹಿತ ಶೂನ್ಯ ಘಟನೆಗಳಾಗುತ್ತವೆ.

ಸೂರ್ಯ ಚಂದ್ರರ ಕಕ್ಷಾವೇಗಗಳು, ಕಕ್ಷೆಗಳು, ಇವುಗಳ ನಡುವಿನ ಬಾಗು ಮುಂತಾದ ವಿವರಗಳೆಲ್ಲವೂ ಕರಾರುವಾಕ್ಕಾಗಿ ತಿಳಿದಿರುವುದರಿಂದ ಈ ಸಮಸ್ಯೆಗೆ ಗಣಿತದ ನಿಷ್ಕೃಷ್ಟ ವಿಧಾನವನ್ನು ಅನ್ವಯಿಸಿ ಗ್ರಹಣದ ಪೂರ್ವೋತ್ತರಗಳನ್ನು ನುಡಿಯುವುದು ಸಾಧ್ಯ. ಗಣಿತ ಹೇಳುವುದಿಷ್ಟು: ಯಾವುದೇ ಪಾತಬಿಂದುವಿನಿಂದ ಸೂರ್ಯನ ಕೋನದೂರ ೧೮° ೩೧'ಗಳಿಗಿಂತ ಜಾಸ್ತಿ ಇರುವಾಗ ಸೂರ್ಯಗ್ರಹಣ ಸಂಭವಿಸುವುದು ಅಶಕ್ಯ. ಇದು ೧೫° ೨೧'ಗಳಿಗಿಂತ ಕಡಿಮೆ

ಇರುವಾಗ ಸೂರ್ಯಗ್ರಹಣ ಖಂಡಿತವಾಗಿಯೂ ಸಂಭವಿಸುತ್ತದೆ. ಈ ಕೋನ ಮೌಲ್ಯಗಳಿಗೆ ಅನುಕ್ರಮವಾಗಿ ಸೂರ್ಯ ಗ್ರಹಣದ ಉಚ್ಚ ಪರಿಮಿತಿ ಮತ್ತು ನೀಚ ಪರಿಮಿತಿ ಎಂದು ಹೆಸರು. ಸೂರ್ಯನ ಸ್ಥಾನ ಇವೆರಡು ಪರಿಮಿತಿಗಳ ನಡುವೆ ಇರುವಾಗ ಸೂರ್ಯಗ್ರಹಣ ಸಂಭವಿಸಬಹುದು, ಸಂಭವಿಸದಿರಬಹುದು. ಚಂದ್ರಗ್ರಹಣವನ್ನು ಕುರಿತಂತೆ ಉಚ್ಚಪರಿಮಿತಿ ೧೨° ೧೫', ನೀಚಪರಿಮಿತಿ ೯° ೩೦'. ಅಂದರೆ ಯಾವುದೇ ಪಾತ ಬಿಂದುವಿನಿಂದ ಚಂದ್ರನ ಕೋನದೂರ ೧೨° ೧೫'ಗಳಿಗಿಂತ ಜಾಸ್ತಿ ಇರುವಾಗ ಚಂದ್ರಗ್ರಹಣ ಸಂಭವಿಸುವುದು ಅಶಕ್ಯ. ಅದು ೧೨° ೧೫' ಮತ್ತು ೯° ೩೦' ಅಂತರದಲ್ಲಿ ಇರುವಾಗ ಚಂದ್ರಗ್ರಹಣ ಸಂಭವಿಸಬಹುದು, ಸಂಭವಿಸದಿರಬಹುದು. ೯° ೩೦'ಗಳಿಗಿಂತ ಕಡಿಮೆ ಇರುವಾಗ ಚಂದ್ರಗ್ರಹಣ ಖಂಡಿತವಾಗಿಯೂ ಸಂಭವಿಸುತ್ತದೆ.

ಹಾಗಾದರೆ ಯಾವುದೇ ವರ್ಷ ಸಂಭವಿಸುವ ಗ್ರಹಣಗಳ ಸಂಖ್ಯೆ ಎಷ್ಟು? ಪುನಃ ಗಣಿತವೇ ಶರಣು. ಪ್ರತಿ ವರ್ಷವೂ ಕನಿಷ್ಠ ಪಕ್ಷ ೨ ಗ್ರಹಣಗಳಾದರೂ ಸಂಭವಿಸುವುದು ಶತಸ್ಸಿದ್ಧ. ಇವೆರಡೂ ಸೂರ್ಯ ಗ್ರಹಣಗಳೇ. ಗ್ರಹಣರಹಿತ ವರ್ಷಗಳೇ ಇರುವುದಿಲ್ಲ. ಅತ್ಯಂತ ಅನುಕೂಲ ಸನ್ನಿವೇಶ ಕೂಡಿಬಂದಾಗ ಒಂದು ವರ್ಷದಲ್ಲಿ ಘಟಿಸಬಹುದಾದ ಗ್ರಹಣಗಳ ಗರಿಷ್ಠ ಸಂಖ್ಯೆ ೭. ಈ ಪೈಕಿ ೫ ಸೂರ್ಯಗ್ರಹಣಗಳೂ ೨ ಚಂದ್ರಗ್ರಹಣಗಳೂ ಅಥವಾ ೪ ಸೂರ್ಯ ಗ್ರಹಣಗಳೂ ೩ ಚಂದ್ರಗ್ರಹಣಗಳೂ ಇರಬಹುದು. ಉಚ್ಚ ಸೌರಪರಿಮಿತಿಯನ್ನು ಸೂರ್ಯ ಪ್ರವೇಶಿಸುವಾಗಲೇ ವರ್ಷಾರಂಭವೂ ಆಗಿ ಆಗ ಸೂರ್ಯ ಗ್ರಹಣವೂ ಸಂಭವಿಸಿದರೆ ಆ ವರ್ಷ ೫ ಸೂರ್ಯಗ್ರಹಣಗಳೂ ೨ ಚಂದ್ರ ಗ್ರಹಣಗಳೂ ಘಟಿಸುವುದು ಸಾಧ್ಯ. ಹೀಗಲ್ಲದೇ ಉಚ್ಚ ಚಾಂದ್ರಪರಿಮಿತಿಯನ್ನು ಚಂದ್ರ ಪ್ರವೇಶಿಸುವಾಗಲೇ ವರ್ಷಾರಂಭವೂ ಆಗಿ ಆಗ ಚಂದ್ರ ಗ್ರಹಣವೂ ಸಂಭವಿಸಿದರೆ ಆ ವರ್ಷ ೪ ಸೂರ್ಯಗ್ರಹಣಗಳೂ ೩ ಚಂದ್ರ ಗ್ರಹಣಗಳೂ ಘಟಿಸುವುದು ಸಾಧ್ಯ.

೧೯೮೨ನೆಯ ಇಸವಿ ಎರಡನೆಯ ಸಾಲಿಗೆ ಸೇರಿರುವ ಅತ್ಯಧಿಕ ಗ್ರಹಣಗಳ ವರ್ಷ. ಈ ವರ್ಷ ೪ ಸೂರ್ಯಗ್ರಹಣಗಳೂ ೩ ಚಂದ್ರಗ್ರಹಣಗಳೂ ಘಟಿಸುತ್ತವೆ. ತಾರೀಕುಗಳಿವು: ೯-೧-೮೨ ಚಂದ್ರಗ್ರಹಣ, ೨೫-೧-೮೨ ಸೂರ್ಯ ಗ್ರಹಣ, ೨೧-೬-೮೨ ಸೂರ್ಯಗ್ರಹಣ, ೬-೭-೮೨ ಚಂದ್ರಗ್ರಹಣ, ೨೦-೭-೮೨ ಸೂರ್ಯಗ್ರಹಣ, ೧೫-೧೨-೮೨ ಸೂರ್ಯಗ್ರಹಣ, ೩೦-೧೨-೮೨ ಚಂದ್ರಗ್ರಹಣ. ಪ್ರಸಕ್ತ ಶತಮಾನದಲ್ಲಿ ೧೯೧೭ನೆಯ ಇಸವಿಗೂ ಈ ವೈಶಿಷ್ಟ್ಯ

ಪ್ರಾಪ್ತವಾಗಿತ್ತು. ಆ ವರ್ಷ ಕೂಡ ೪ ಸೂರ್ಯಗ್ರಹಣಗಳು ಮತ್ತು ೩ ಚಂದ್ರಗ್ರಹಣಗಳು ಘಟಿಸಿದ್ದುವು. ೧೯೩೫ ಇನ್ನೂ ವಿಶೇಷವಾದ ವರ್ಷ: ೫ ಸೂರ್ಯಗ್ರಹಣಗಳು ಮತ್ತು ೨ ಚಂದ್ರಗ್ರಹಣಗಳು ಸಂಭವಿಸಿದ್ದು ಆ ವರ್ಷದ ಏಕೈಕತೆ. ೧೯೩೫ರಂಥ ಅತಿ ವಿಶೇಷದ ವರ್ಷ ಇನ್ನೊಮ್ಮೆ ಬರಲು ಸೂರ್ಯ-ಭೂಮಿ-ಚಂದ್ರ ವ್ಯವಸ್ಥೆ ಈಗಿನ ಧಾಟಿಯಲ್ಲಿಯೇ ಕ್ರಿಸ್ತಶಕ ೨೨೦೬ನೆಯ ಇಸವಿಯತನಕ ಮುಂದುವರಿಯುತ್ತಿರಬೇಕು.

ಅನೇಕ ಶತಮಾನಗಳ ಕಾಲದಲ್ಲಿ ಸಂಭವಿಸಿದ ಗ್ರಹಣಗಳ ಕಾಲಾನುಕ್ರಮ ಯಾದಿಯನ್ನು ತಯಾರಿಸಿದರೆ ಅದರಲ್ಲಿ ಕೆಲವು ವಿಶಿಷ್ಟ ಲಕ್ಷಣಗಳು ಪ್ರಕಟ ವಾಗುತ್ತವೆ.

ಮೊದಲನೆಯದು, ಗ್ರಹಣಗಳ ಪುನರಾವರ್ತನೆ. ಕ್ರಿಸ್ತಪೂರ್ವ ೮ನೆಯ ಶತಮಾನದಲ್ಲಿ ಬ್ಯಾಬಿಲೋನಿಯಾದಲ್ಲಿದ್ದ ಕಾಲ್ಡೀಯನರು ಈ ಸೂಕ್ಷ್ಮವನ್ನು ಗುರುತಿಸಿದ ಮೊದಲಿಗರು. ಗ್ರಹಣಗಳು ೧೮ ವರ್ಷ ೧೦ ಅಥವಾ ೧೧ ದಿವಸಗಳ ಅವಧಿಯಲ್ಲಿ ತದ್ವತ್ತಾಗಿ ಪುನರಾವರ್ತಿಸುತ್ತವೆಂಬ ನಿಯಮವನ್ನು ಆವಿಷ್ಕರಿಸಿ ದುದರ ಜೊತೆಗೆ ಇದರ ಕಾರಣವನ್ನು ಕೂಡ ಅವರು ಶೋಧಿಸಿದರು.

ಸೂರ್ಯನನ್ನು ಕುರಿತಂತೆ ಚಂದ್ರ ತನ್ನ ಕಕ್ಷೆಯ ಮೇಲೆ ಒಂದು ಪರಿಭ್ರಮಣೆ ಪೂರ್ತಿಗೊಳಿಸಲು ತೆಗೆದುಕೊಳ್ಳುವ ಅವಧಿಗೆ ಸಂಯುತಿ ಮಾಸವೆಂದು ಹೆಸರು— ರೂಢಿಯಲ್ಲಿ ತಿಂಗಳು, ಒಂದು ಅಮಾವಾಸ್ಯೆಯಿಂದ ಮುಂದಿನ ಅಮಾವಾಸ್ಯೆ ತನಕದ ಅವಧಿ. ೨೨೩ ಸಂಯುತಿ ಮಾಸಗಳು ಸಲ್ಲುವಾಗ ನಕ್ಷತ್ರ ಪರದೆಯ ಮುನ್ನೆಲೆಯಲ್ಲಿ ಭೂಮಿಯನ್ನು ಕುರಿತಂತೆ ಸೂರ್ಯ ಚಂದ್ರರ ವಿನ್ಯಾಸಗಳು ಆ ಮೊದಲಿನವೇ ಆಗುತ್ತವೆಂದು ಕಾಲ್ಡೀಯನರು ಗಮನಿಸಿದರು. ೨೨೩ ಸಂಯುತಿ ಮಾಸಗಳು ೧೮ ವರ್ಷ ೧೦.೯೫ ದಿವಸಗಳಿಗೆ ಸಮ. ಈ ಸರಳ ಗಣಿತ ಸೂತ್ರದ ನೆರವಿನಿಂದ ಅವರು ಭವಿಷ್ಯ ಶತಮಾನಗಳಲ್ಲಿ ಘಟಿಸಲಿದ್ದ ಗ್ರಹಣಗಳ ಯಾದಿಯನ್ನು ತಯಾರಿಸಿದರು. ಉದಾಹರಣೆಗೆ, ೫-೨-೧೯೬೨ರಂದು ಪೂರ್ಣ ಸೂರ್ಯಗ್ರಹಣ ಸಂಭವಿಸಿತು. ಆದ್ದರಿಂದ ೧೬-೨-೮೦ರಂದು, ೨೬-೨-೯೮ ರಂದು ಇತ್ಯಾದಿ, ಪೂರ್ಣ ಸೂರ್ಯಗ್ರಹಣಗಳು ಸಂಭವಿಸಬೇಕೆಂದು ನಿರೀಕ್ಷಿಸ ಬಹುದು. ೧೬-೨-೮೦ ರಂದು ಇದು ಫಲಿಸಿದೆ. ೨೬-೨-೯೮ ರಂದು ಫಲಿಸಲಿದೆ.

ಗ್ರಹಣಯಾದಿಯಲ್ಲಿ ಎದ್ದು ಕಾಣುವ ಎರಡನೆಯ ಲಕ್ಷಣವೆಂದರೆ ಸೂರ್ಯ ಗ್ರಹಣಗಳ ಬಾಹುಳ್ಯ. ಸರಾಸರಿಯಲ್ಲಿ ಹೇಳುವುದಾದರೆ ಒಂದು ಶತಮಾನದಲ್ಲಿ ೨೩೮ ಸೂರ್ಯಗ್ರಹಣಗಳೂ ೧೫೪ ಚಂದ್ರಗ್ರಹಣಗಳೂ ಘಟಿಸುತ್ತವೆ. ಈ ಪೈಕಿ

೬೬ ಪೂರ್ಣ ಸೂರ್ಯಗ್ರಹಣಗಳು, ೭೧ ಪೂರ್ಣ ಚಂದ್ರಗ್ರಹಣಗಳು. ೧-೧-೧೯೦೧ ರಿಂದ ೩೧-೧೨-೨೦೦೦ದವರೆಗಿನ ಪ್ರಸಕ್ತ ಶತಮಾನದಲ್ಲಿ ೨೩೮ ಸೂರ್ಯಗ್ರಹಣಗಳೂ ೧೪೩ ಚಂದ್ರಗ್ರಹಣಗಳೂ ಸಂಭವಿಸುತ್ತವೆ.

ಇಲ್ಲಿವರೆಗಿನ ವಿವರಣೆಯಿಂದ ನಿಸರ್ಗ ಸೂರ್ಯಗ್ರಹಣ ಪಕ್ಷಪಾತಿ, ಚಂದ್ರಗ್ರಹಣವಿರೋಧಿ ಎಂಬ ಸಂಗತಿ ವೇದ್ಯವಾಗುತ್ತದೆ. ಸೂರ್ಯ–ಭೂಮಿ–ಚಂದ್ರ ಕಾಯಗಳ ಗತಿವೃತ್ತಾಂತ ತಿಳಿದವರಿಗೆ ಇದರಲ್ಲಿ ಆಶ್ಚರ್ಯವೇನೂ ಕಾಣುವುದಿಲ್ಲ. ಇದು ನಿಜವೇ ಇರಬಹುದು. ಆದರೆ ಅನುಭವ ಮಿಡಿಯುವ ಒಳದನಿ ಮಾತ್ರ ಬೇರೆಯೇ: ಚಂದ್ರಗ್ರಹಣ ಅಧಿಕ ಪರಿಚಿತ ಘಟನೆ, ಸೂರ್ಯಗ್ರಹಣ ಅತಿ ವಿರಳ ಅನುಭವ. ಉದಾಹರಣೆಗೆ ೧೯೮೨ರ ಈ ಅತ್ಯಧಿಕ ಗ್ರಹಣ ವರ್ಷದಲ್ಲಿಯೂ ಕರ್ನಾಟಕದಲ್ಲಿರುವ ನಮಗೆ ಒಂದು ಸೂರ್ಯಗ್ರಹಣ ಕೂಡ ದರ್ಶನವೀಯುವುದಿಲ್ಲ! ಈ ವಿಪರ್ಯಾಸದ ಅರ್ಥವೇನು?

ಈವರೆಗೆ ಹೇಳಿದ್ದು ಇಡೀ ಭೂಮಿಯನ್ನು ಕುರಿತಂತೆ ನಿಜ. ಒಬ್ಬ ವ್ಯಕ್ತಿಯ ಅಥವಾ ಒಂದು ಪ್ರದೇಶಕ್ಕೆ ಸೀಮಿತವಾಗಿರುವ ಜನಸಮುದಾಯದ ಅನುಭವ ತೀರ ಬೇರೆಯೇ ಆಗಿರುವುದು ಸಾಧ್ಯ. ಆದ್ದರಿಂದ ಈಗ ನಾವು ಆಕಾಶದ ಪಾರಲೌಕಿಕ ಔನ್ನತ್ಯದಿಂದ ಭೂಮಿಯ ಗಟ್ಟಿ ನೆಲಕ್ಕೆ ಇಳಿದು ಇದೇ ವಿಷಯವನ್ನು ಪುನಃ ಪರಿಶೀಲಿಸೋಣ. ಮೂರು ಮುಖ್ಯ ಸ್ಥಳೀಯ ಕಾರಣಗಳಿವೆ.

ಮೊದಲನೆಯದಾಗಿ, ಯಾವುದೇ ಗ್ರಹಣ ಘಟಿಸುವಾಗ ವ್ಯಕ್ತಿ ಅನುಕೂಲ ಭೌಗೋಲಿಕ ನೆಲೆಯಲ್ಲಿ ಇಲ್ಲದಿದ್ದರೆ ಅದು ಆತನಿಗೆ ಕಾಣಸಿಗದು. ಸೂರ್ಯಗ್ರಹಣದ ವೇಳೆ ಆತ ಭೂಮಿಯ ಇರುಳು ಪಾರ್ಶ್ವದಲ್ಲಿದ್ದರೆ, ಅಂತೆಯೇ ಚಂದ್ರಗ್ರಹಣದ ವೇಳೆ ಹಗಲು ಪಾರ್ಶ್ವದಲ್ಲಿದ್ದರೆ, ಅವನ್ನು ಆತ ನೋಡಲಾರ.

ಎರಡನೆಯದಾಗಿ, ಸೂರ್ಯಗ್ರಹಣದ ಅವಧಿ ಕಿರಿಯದು, ಚಂದ್ರಗ್ರಹಣದ ಅವಧಿ ಹಿರಿಯದು. ಉದಾಹರಣೆಗೆ ಪೂರ್ಣ ಸೂರ್ಯಗ್ರಹಣದಲ್ಲಿ ಪೂರ್ಣತೆಯ ಗರಿಷ್ಠ ಅವಧಿ ಕೇವಲ ೭ ಮಿ ೩೦ ಸೆ. ಪೂರ್ಣ ಚಂದ್ರಗ್ರಹಣದಲ್ಲಾದರೋ ಪೂರ್ಣತೆಯ ಗರಿಷ್ಠ ಅವಧಿ ೧೦೦ ಮಿನಿಟುಗಳಷ್ಟು ಹಿರಿಯದು.

ಮೂರನೆಯದಾಗಿ, ಭೂಮಿ ಚಂದ್ರನಿಗಿಂತ ಹಿರಿಗಾತ್ರದ್ದಾಗಿದ್ದು ಚಂದ್ರನಿಗೆ ಹತ್ತಿರವಾಗಿಯೂ ಇದೆ. ಹೀಗಾಗಿ ಭೂಮಿಯ ದೈತ್ಯ ಛಾಯೆ ಚಂದ್ರನನ್ನು ದೀರ್ಘಕಾಲ ಮರೆಮಾಡುವುದೂ ಈ ಕಾರಣದಿಂದ ಚಂದ್ರಗ್ರಹಣ ಬಹುಜನ ಗೋಚರವಾಗುವುದೂ ಸಾಧ್ಯ. ಚಂದ್ರನಾದರೋ ಸೂರ್ಯನಿಗಿಂತ ತೀರ ಕಿರಿದಾಗಿದ್ದು ಸೂರ್ಯನಿಂದ ಅತಿ ದೂರದಲ್ಲಿಯೂ ಇದೆ. ಹೀಗಾಗಿ ಚಂದ್ರನ ಪುಟ್ಟ

ನೆರಳು ಭೂಮಿಯ ಕೆಲವೇ ಪ್ರದೇಶಗಳ ಮೇಲೆ ಬೀಳುತ್ತದೆ, ಅಲ್ಲಿಯೂ ಅತಿ ಹ್ರಸ್ವ ಕಾಲ ಮಾತ್ರ. ಎಂದೇ ಕೇವಲ ಕೆಲವು ಪ್ರದೇಶಗಳವರಿಗೆ ಅತ್ಯಲ್ಪ ಕಾಲ ಮಾತ್ರ ಸೂರ್ಯಗ್ರಹಣ ಗೋಚರವಾಗುವುದಾಗಿದೆ. ಭೂಮಿಯ ಮೇಲಿನ ಒಂದು ನಿರ್ದಿಷ್ಟ ಪ್ರದೇಶದಲ್ಲಿರುವವರಿಗೆ ಸರಾಸರಿಯಲ್ಲಿ, ೩–೪ ಶತಮಾನಗಳ ಅವಧಿಯಲ್ಲಿ ಒಂದು ಪೂರ್ಣ ಸೂರ್ಯಗ್ರಹಣ ಮಾತ್ರ ಕಾಣುತ್ತದೆ ಅಷ್ಟೆ. ಆದರೆ ಅದೇ ಮಂದಿಗೆ ಕೇವಲ ೧೮ ವರ್ಷಗಳ ಅವಧಿಯಲ್ಲಿ ೩–೪ ಪೂರ್ಣಚಂದ್ರ ಗ್ರಹಣಗಳು ಗೋಚರಿಸುತ್ತವೆ. ಹೀಗಿದೆ ಗೋಚರ ಸೂರ್ಯಗ್ರಹಣಗಳ ತೀವ್ರ ಅಭಾವ ಹಾಗೂ ಗೋಚರ ಚಂದ್ರಗ್ರಹಣಗಳ ಅತಿ ಸಮೃದ್ಧಿ.

ಎರಡು ಅಪೂರ್ವ ಖಗೋಳಿಯ ಘಟನೆಗಳು ೧೯೮೦ಕ್ಕೆ ವಿಶೇಷ ಮಹತ್ತ್ವ ನೀಡಿವೆ: ನವಗ್ರಹಯುತಿ, ಗ್ರೀಷ್ಮ ಗ್ರಹಣ ಸಂಭವನೀಯತೆ. ನಿಷ್ಕೃಷ್ಟ ಗಣಿತ ಗಣನೆಗಳು ಮುನ್ನುಡಿದಿರುವ ರೀತಿಯಲ್ಲೇ ಇವು ಸಂಭವಿಸಿವೆ ಅಥವಾ ಸಂಭವಿಸುತ್ತವೆ. ಇವುಗಳಿಂದ ಭೂಮಿಗಾಗಲಿ ಜನರಿಗಾಗಲಿ ಒಳಿತೂ ಇಲ್ಲ, ಕೆಡುಕೂ ಇಲ್ಲ. ಆಕಾಶದ ಊಹಾತೀತ ವಿಸ್ತಾರದಲ್ಲಿ ಕಿರು ಅಲೆಯನ್ನು ಕೂಡ ಇವು ಉತ್ಪಾದಿಸವು. ಅಂದ ಮೇಲೆ ಭೌತವಲ್ಲದ ಅಥವಾ ಸ್ಪಷ್ಟವಾಗಿ ಹೇಳುವುದಾದರೆ, ದೈವಿಕವಾದ ಯಾವುದೋ ಅಜ್ಞಾತ ಕಾರಣವನ್ನು ಇವುಗಳಿಗೆ ಆರೋಪಿಸಿ ತನ್ಮೂಲಕ ಒಟ್ಟು ಪ್ರಪಂಚದ ಇಲ್ಲವೇ ಬಿಡಿ ವ್ಯಕ್ತಿಗಳ ಹಿತಾಹಿತಗಳನ್ನು ಕಣಿ ನುಡಿಯುವುದು ಶುದ್ಧಾಂಗ ಅವೈಜ್ಞಾನಿಕ, ಅಸಂಬದ್ಧ, ಅವಿವೇಕ. ಸಾಧ್ಯವಾದರೆ ಈ ವಿಶೇಷ ಖಗೋಳಿಯ ಘಟನೆಗಳನ್ನು ವೈಜ್ಞಾನಿಕವಾಗಿ ಗ್ರಹಿಸಿ ಅರ್ಥವಿಸಿ ಪ್ರಜ್ಞಾವಂತರಾಗೋಣ; ಇದು ಸಾಧ್ಯವಾಗದಿದ್ದರೆ ಮೂಢನಂಬಿಕೆಯನ್ನಾಗಲಿ ಅವಿದ್ಯೆಯನ್ನಾಗಲಿ ಪ್ರಸರಿಸದಿರೋಣ.

ಜಿ. ಟಿ. ನಾರಾಯಣರಾವ್

ಅಯ್ಯೋ!, ನನಗೆಲ್ಲಿಯ ಒಳ್ಳೆಯದಾಗಿದೆ ಎಂದು ಹೇಳುತ್ತ ಒಳ್ಳೆಯದನ್ನು ಸುಲಭವಾಗಿ ಟೀಕಿಸಬೇಡ. ಹನಿಹನಿಯಾಗಿ ಬಿದ ನೀರಿನಿಂದ ಕೂಡಾ ಹಳ್ಳವು ತುಂಬುತ್ತದೆ. ಜೀವನದಲ್ಲಿ ನಿನಗಾಗಿರುವ ಒಳ್ಳೆಯದನ್ನೆಲ್ಲ ಕೂಡಿ ನೆನೆದುಕೊಂಡರೆ, ನೀನೂ ಸುಖದ ಸುಪ್ಪತ್ತಿಗೆಯಲ್ಲಿರುವಂತೆ ಭಾಸವಾಗುವನು.

—ಬುದ್ಧ

ಜಗತ್ತಿನ ಮಕ್ಕಳ ರಕ್ಷಕಿ

ಲಂಡನ್ನಿನ ಪೌರಸಭಾಧ್ಯಕ್ಷ ಭವನದ ನ್ಯಾಯಾಲಯದಲ್ಲಿ, 'ರಾಷ್ಟ್ರೀಯ ರಕ್ಷಣೆಗೆ ಅಪಾಯವನ್ನುಂಟುಮಾಡಿದ ಅಪಾದನೆಯ ವಿಚಾರಣೆ'ಯಲ್ಲಿ ಆಕರ್ಷಕ ರೂಪದ ಮಹಿಳೆಯೊಬ್ಬಳು ತನ್ನ ಗೆಳೆಯರಿಗೆಲ್ಲಾ ಆಶ್ಚರ್ಯವನ್ನುಂಟು ಮಾಡಿದಳು. ೧೯೧೯ರ ಮ[illegible]ರಂದು ವಿಚಾರಣೆಯ ಬಿಡುವಿನ ಕಾಲದಲ್ಲಿ ನಲವತ್ತೆರಡು ವರ್ಷ ವಯಸ್ಸಿನ ತೆಳ್ಳನೆಯ, ನೀಳಕಾಯದ, ಬಂಗಾರ ವರ್ಣದ ಕೂದಲುಗಳುಳ್ಳ ಎಗ್ಲಾಂಟೈನ್ ಜೆಬ್‌ಳು, ಗಡಸುಮುಖದ ಪಿಯಾರ್ನಿಗೆ ಅಷ್ಟನಿಂತು ಅವನನ್ನು ತೀವ್ರವಾದ ಚರ್ಚೆಗೆ ಎಳೆದಳು.

ಮೊದಲನೆ ಜಾಗತಿಕ ಮಹಾಯುದ್ಧದ ನಂತರದಲ್ಲಿ ನ್ಯಾಯಾಲಯ ಎಗ್ಲಾಂಟೈನಳಿಗೆ ಸಮನ್ಸ್ ನೀಡಿರುವುದರ ಬಗ್ಗೆ ಪಿಯಾರ್ನಿಯಿಂದ ಅಪರಾಧಗಳ ಪಟ್ಟಿಯನ್ನು ಕೇಳಿತು. ಸೆನ್ಸಾರ್ ಮಂಡಳಿಯ ಒಪ್ಪಿಗೆ ಇಲ್ಲದೆ, ಆಕೆ ಕೃಶವಾದ ಆಸ್ಟ್ರೇಲಿಯನ್ ಹುಡುಗನೊಬ್ಬನ ಫೋಟೋವನ್ನುಳ್ಳ ಕರಪತ್ರವನ್ನು ಪ್ರಕಟಿಸಿ ಹಂಚಿದಳು. ಅದು ಸೋತ ರಾಷ್ಟ್ರಗಳ ಮೇಲೆ ಮಿತ್ರರಾಷ್ಟ್ರಗಳು ಆಹಾರದ ನಿರ್ಬಂಧವನ್ನು ಹೇರಿದುದರ ಪರಿಣಾಮವಾಗಿ ಯುರೋಪಿನಲ್ಲಿ ಹಸಿವಿಗೆ ತುತ್ತಾದ ನಾಲ್ಕು ದಶಲಕ್ಷ ಮಕ್ಕಳಲ್ಲಿ ಒಂದು ಮಗುವಿನ ಫೋಟೋ.

ಚುರುಕುಬುದ್ಧಿಯ ಎಗ್ಲಾಂಟೈನಾ ಆಹಾರ ನಿರ್ಬಂಧ ಪರಿಣಾಮಗಳನ್ನು ಖಂಡಾಂತರ ಪತ್ರಿಕೆಗಳು ಹಾಗೂ ರೆಡ್‌ಕ್ರಾಸ್ ಸಂಸ್ಥೆಯ ಎಚ್ಚರಿಕೆಯ ಸುದ್ದಿಗಳಿಂದ ಬಹಿರಂಗಪಡಿಸಿದ್ದಳು. ವಿಯೆನ್ನಾದಲ್ಲಿ ತಾವು ಸಾಕಲಾರದೆ ಮಕ್ಕಳನ್ನು ಅವರ ತಾಯಿಯರು ದುಃಖದಿಂದ ಕೊಲ್ಲುತ್ತಿದ್ದ ಘೋರವಾದ ಸುದ್ದಿಯನ್ನು ತಿಳಿದಿದ್ದಳು. ಅತೀವ ಅನುಕಂಪದಿಂದ ಆಕೆ ಅಸಾಧ್ಯವಾದುದನ್ನು—ಮಕ್ಕಳನ್ನು ಉಳಿಸುವುದನ್ನು—ಸಾಧಿಸಲು ನಿರ್ಧರಿಸಿದಳು. ತನ್ನಲ್ಲಿದ್ದ ಹತ್ತು ಪೌಂಡು ಹಾಗೂ ಸೋದರಿ ಡೊರೋತಿಯೊಂದಿಗೆ ಆಕೆ 'ಕ್ಷಾಮ ಪರಿಹಾರ' ನಿಧಿಯನ್ನು ಸಂಗ್ರಹಿಸತೊಡಗಿದಳು ಮತ್ತು ಇದಕ್ಕಾಗಿ ಕರಪತ್ರವನ್ನು ಪ್ರಕಟಪಡಿಸಿದ್ದಳು. ಈ ಕರಪತ್ರವೇ ಆಕೆಯನ್ನು ನ್ಯಾಯಾಲಯಕ್ಕೆ ಬರುವಂತೆ ಮಾಡಿದ್ದಿತು.

೧೯೭೯ರ ಸೆಪ್ಟಂಬರ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸಿಕದಲ್ಲಿ ಪ್ರಕಟವಾದ ಜಾನೆಟ್ ಗ್ರಹಾಂ ಅವರ 'ಸೇವಿಯರ್ ಟು ದಿ ವರ್ಲ್ಡ್ಸ್ ಚಿಲ್ಡ್ರನ್' ಲೇಖನದ ಸರಳಾನುವಾದ.

ಸ್ವಲ್ಪವೂ ಕರುಣೆ ಇಲ್ಲದೆ, ಆಕೆಯ ವಿರುದ್ಧ ವಿಚಾರಣೆ ನಡೆಸಬಯಸಿರುವ ಆ ವ್ಯಕ್ತಿಯ ಬಳಿ ಆಕೆ ಏನನ್ನು ಚರ್ಚಿಸುತ್ತಿರಬಹುದೆಂದು ಆಕೆಯ ಗೆಳೆಯರಿಗೆ ಆಶ್ಚರ್ಯವಾಯಿತು. ಎಗ್ಲಾಂಟೈನ್ ವಿಜಯದ ಮುಖದಲ್ಲಿ ಅವರೆಡೆಗೆ ತಿರುಗಿ ಹೇಳಿದಳು. "ನನ್ನ ಮಕ್ಕಳ ಸೇವಾನಿಧಿಗೆ ಅವನು ಕಾಣಿಕೆ ಕೊಡುವುದಾಗಿ ಹೇಳುತ್ತಿದ್ದಾನೆ" ಎಂದಳು—"ಅವರ ವಿಚಾರಣೆ ಮುಗಿದನಂತರ" ಎಂದೂ ಸೇರಿಸಿದಳು.

ಎಗ್ಲಾಂಟೈನಳ ಪ್ರಕಟಣೆಯ ಅಪರಾಧದ ರುಜುವಾತಿನೊಂದಿಗೆ ವಿಚಾರಣೆ ಮುಗಿಯಿತು. ಅದಕ್ಕಾಗಿ ಆಕೆ ತೆರಬೇಕಾದ ದಂಡ ಐದು ಪೌಂಡುಗಳು. ಇದಾದ ನಾಲ್ಕು ದಿನಗಳ ನಂತರ 'ಮಕ್ಕಳ ರಕ್ಷಣಾನಿಧಿಯ ಪ್ರಥಮ ಸಭೆ' ಲಂಡನ್ ನಗರದ ವಿಶಾಲವಾದ ಆಲ್ಬರ್ಟ್‌ಹಾಲ್‌ನಲ್ಲಿ ನಡೆಯಿತು. ಅಲ್ಲಿ ಸೇರಿದ್ದ ಜನಸಂಖ್ಯೆ ಎಷ್ಟೊಂದು ಹೆಚ್ಚಾಗಿತ್ತೆಂದರೆ, ಅದನ್ನು ಚದುರಿಸಲು ಪೋಲೀಸರನ್ನು ಕರೆಸಬೇಕಾಯಿತು.

ಆದರೂ ಆಕೆಯ ಗೆಳೆಯರು "ಆಕೆಯ ಮಕ್ಕಳ ರಕ್ಷಣಾನಿಧಿ ಸೋಲನ್ನು ಅನುಭವಿಸುತ್ತದೆ ಎಂದು ತಿಳಿದಿದ್ದರು. ಜನರ ಮನವೊಲಿಸುವ ಆಕೆಯ ಅದ್ಭುತ ಚಾತುರ್ಯದಲ್ಲಿ ಅವರಿಗೆ ನಂಬಿಕೆ ಇರಲಿಲ್ಲ. ಆಲ್ಬರ್ಟ್‌ಹಾಲ್ ಸಭೆಯನಂತರದ ಒಂಬತ್ತೇ ದಿನಗಳಲ್ಲಿ ಅವರ ಮೊದಲ ರಕ್ಷಣಾನಿಧಿ ವಿಯೆನ್ನಾಗೆ ಹೊರಟಿತು. ಹಸಿದ ಮಕ್ಕಳಿಗೆ ಕೊನೆಗೊಮ್ಮೆ ಹಾಲು ದೊರಕಿತು.

ಎಗ್ಲಾಂಟೈನಳು ಸಾರ್ವಜನಿಕ ಭಾಷಣಗಳನ್ನು ಇಷ್ಟಪಡದೆ ಇದ್ದರೂ ಹಣಕ್ಕಾಗಿ ಬೇಡಿಕೆ ಸಲ್ಲಿಸುತ್ತಾ, ದೇಶದ ತುಂಬೆಲ್ಲಾ ಸಂಚಾರ ಮಾಡಿ ಭಾಷಣಗಳನ್ನು ಮಾಡಿದಳು. ಕೇವಲ ಎರಡು ವರ್ಷಗಳಲ್ಲಿ ಎಗ್ಲಾಂಟೈನ್, ಡೊರೊತಿ ಮತ್ತು ಅವರ ಸಹಾಯಕರು ಸುಮಾರು ಒಂದು ದಶಲಕ್ಷ ಡಾಲರುಗಳಿಗೂ ಹೆಚ್ಚು ಹಣವನ್ನು ಸಂಗ್ರಹಿಸಿದರು.

ಯುದ್ಧಾನಂತರದ ದಿನಗಳಲ್ಲೂ ಸಹ, ಜನರು ಎಗ್ಲಾಂಟೈನ್ ಮತ್ತು ಆಕೆಯ ಸಹಾಯಕರನ್ನು ಜರ್ಮನ್ ಪ್ರೇಮಿಗಳೆಂದೂ ಬೋಲ್ಷೆವಿಕರೆಂದೂ ನಿಂದೆಗೆ ಗುರಿಮಾಡಿದರು. ಆದರೆ ಅವರ ಮೊದಲಿನ ಬೆಂಬಲಿಗರಲ್ಲಿ ಒಬ್ಬನಾಗಿದ್ದ ಜಾರ್ಜ್ ಬರ್ನಾರ್ಡ್‌ಷಾ ವಾದಕ್ಕೆ ಎಡೆಯಿಲ್ಲದಂತೆ ಉತ್ತರ ನೀಡಿದನು. ಶತ್ರುಗಳಿಗಾಗಿ ಸಂಗ್ರಹಿಸುತ್ತಿರುವ ನಿಧಿಗೆ ಬೆಂಬಲಿಗನಾಗಿರುವುದಕ್ಕಾಗಿ ಟೀಕೆಗೆ ಒಳಗಾದ ಅವನು "ಏಳುವರ್ಷದ ಒಳಗಿನ ಶತ್ರುಗಳಾರೂ ನನಗಿಲ್ಲ"ವೆಂದು ಉತ್ತರಿಸಿದ.

ಇಂದು 'ಮಕ್ಕಳ ರಕ್ಷಣಾನಿಧಿ' ಜಗತ್ತಿನ ದೊಡ್ಡ 'ಅಂತರ ರಾಷ್ಟ್ರೀಯ ಮಕ್ಕಳ ಧರ್ಮಸಂಸ್ಥೆ'ಯಾಗಿದೆ. ಇದು ಸುಮಾರು ೨೫೦ ಕ್ಕೂ ಹೆಚ್ಚು ದೇಶದ ಮಕ್ಕಳ ಕಲ್ಯಾಣಕ್ಕಾಗಿ ಪ್ರತಿ ವರ್ಷ ಸುಮಾರು ೬೦ ಕೋಟಿ ರೂಪಾಯಿಗಳಿಗೂ ಹೆಚ್ಚು ಖರ್ಚು ಮಾಡುತ್ತಿದೆ. ಈ ಸಂಸ್ಥೆಯ ಸುಮಾರು ಎರಡು ಸಾವಿರ ಕ್ಷೇತ್ರ ಕೆಲಸಗಾರರು ವಿವಿಧ ದೇಶಗಳಲ್ಲಿ ತಾಯಿ-ಮಕ್ಕಳಿಗೆ ಆಸ್ಪತ್ರೆಗಳನ್ನು ನಡೆಸುತ್ತಿದ್ದಾರೆ ೧೫೦ ಕ್ಕೂ ಹೆಚ್ಚು ಯೋಜನೆಗಳನ್ನು ಇದು ರೂಪಿಸಿದೆ. ನಿಷ್ಪಕ್ಷಪಾತವಾದ ಸಹಾಯ ಇದರ ಪ್ರಮುಖ ನೀತಿ.

ಫ್ಲಾರೆನ್ಸ್ ನೈಟಿಂಗೇಲ್ ಹಾಗೂ ಎಲಿಜಬೆತ್ ಫ್ರೈಗೆ ಹೋಲಿಸಲ್ಪಡುವ ಈ ಸಮಾಜ ಸುಧಾರಕಿ, ಎಗ್ಲಾಂಟೈನಳು ವಿಶ್ವಸಂಸ್ಥೆಯ ಜನರಲ್ ಸೆಕ್ರೆಟರಿ ಕರ್ಟ್‌ವಾಲ್ಡ್‌ಹೈಂ ಹೇಳುವಂತೆ-"ಸಮಗ್ರ ಜನಾಂಗದ ಒಟ್ಟು ಮೌಲ್ಯಗಳು ಹಾಗೂ ಭಾವನೆಗಳ ಮೇಲೆ ಗಾಢವಾದ ಪ್ರಭಾವ ಬೀರಿದ್ದಾಳೆ." ಇಡೀ ಜಗತ್ತೇ ಆಕೆಗೆ ಒಂದು ಪ್ಯಾರಿಷ್ (ಬಡವರ ನೆಲೆ) ಆಗಿದ್ದಿತು.

ಈಕೆಯ ಕಾರ್ಯದಿಂದ ಸ್ಫೂರ್ತಿಗೊಂಡ ಸ್ವೀಡನ್, ಸ್ವಿಡ್ಜರ್‌ಲ್ಯಾಂಡ್, ಫ್ರಾನ್ಸ್ ಮತ್ತು ಇತರ ಅನೇಕ ದೇಶಗಳು ತಮ್ಮದೇ ಆದ ಮಕ್ಕಳ ರಕ್ಷಣಾನಿಧಿಗಳನ್ನು ಪ್ರಾರಂಭಿಸಿದುವು. ೧೯೨೦ರಲ್ಲಿ ಜಿನೀವಾದಲ್ಲಿ ಕೇಂದ್ರ ಕಛೇರಿಯನ್ನುಳ್ಳ 'ಅಂತರರಾಷ್ಟ್ರೀಯ ಮಕ್ಕಳ ರಕ್ಷಣಾ ಸಂಸ್ಥೆ'ಯನ್ನು ಎಗ್ಲಾಂಟೈನ್ ಪ್ರಾರಂಭಿಸಿದಳು. ಇಂದು ಅದು 'ಅಂತರ ರಾಷ್ಟ್ರೀಯ ಮಕ್ಕಳ ಕಲ್ಯಾಣ ಕೇಂದ್ರ'ವೆಂದು ಪುನರ್ ನಾಮಕರಣಗೊಂಡಿದೆ. ಅದು ಸುಮಾರು ೮೦ ದೇಶಗಳಲ್ಲಿನ ಮಕ್ಕಳ ಕಲ್ಯಾಣ ಸಂಘಟನೆಗಳ ಮೂಲಕ ಜಗತ್ತಿನ ಮಕ್ಕಳ ಕಲ್ಯಾಣಕ್ಕೆ ಅನೇಕ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿದೆ.

ಈ ಅಂತರರಾಷ್ಟ್ರೀಯ ಪ್ರಯತ್ನಗಳಿಗೆ ಏಕೀಕೃತ ಸ್ವರೂಪ ನೀಡುವುದು ಅವಶ್ಯಕವೆಂದು ಎಗ್ಲಾಂಟೈನ್ ಯೋಚಿಸಿದಳು. ಇದಕ್ಕಾಗಿ ಮಕ್ಕಳ ಹಕ್ಕುಗಳನ್ನು ಕುರಿತ ಐದು ಅಂಶಗಳ ಕರಡನ್ನು ತಯಾರು ಮಾಡಿದಳು. ಇದರಲ್ಲಿ ತನ್ನ ಮುಂದಿನ ಪ್ರಜೆಗಳಿಗಾಗಿ ರಾಷ್ಟ್ರ ಮಾಡಬೇಕಾದ ಕರ್ತವ್ಯಗಳ ಸ್ಥೂಲ ವಿವರಣೆಯನ್ನು ನೀಡಿದ್ದಾಳೆ. ೧೯೨೪ರಲ್ಲಿ 'ಲೀಗ್ ಆಫ್ ನೇಷನ್ಸ್' ಈ ತತ್ವಗಳನ್ನು ಸ್ವೀಕರಿಸಿತು. ೧೯೫೯ರಲ್ಲಿ ವಿಶ್ವಸಂಸ್ಥೆ ತನ್ನ 'ಜಿನೀವಾ ಪ್ರಕಟಣೆ'ಯಲ್ಲಿ ಈ ಅಂಶಗಳನ್ನು ಸೇರಿಸಿಕೊಂಡು ಅವಳ ಹೆಸರನ್ನು ಶಾಶ್ವತಗೊಳಿಸಿತು.

ಎಗ್ಲಾಂಟೈನಳು ಕಳೆದ ಸಂತಸದಾಯಕ ಬಾಲ್ಯ, ಎಲ್ಲಾ ಮಕ್ಕಳ ಬಾಲ್ಯವೂ ಸುಖದಾಯಕವಾಗಬೇಕೆಂಬ ಹಂಬಲವನ್ನು ಆಕೆ ಬೆಳೆಸಿಕೊಳ್ಳಲು

ಕಾರಣವಾಗಿರಬೇಕು. ಕಾರ್ಮಿಕರ ಹಿತಕ್ಕಾಗಿ ದುಡಿಯುತ್ತಿದ್ದ ಆಕೆಯ ತಾಯಿಯ ಮಾನವೀಯ ಗುಣಗಳು ಎಗ್ಲಾಂಟೀನಳಲ್ಲಿ ರಾಷ್ಟ್ರಮಟ್ಟದಲ್ಲಿ ಬೆಳೆದವು.

ಎಗ್ಲಾಂಟೀನ್ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ಇತಿಹಾಸವನ್ನು ಅಭ್ಯಸಿಸಿ, ಅನಂತರ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿ ತರಬೇತಿ ಪಡೆದಳು. ಆಕೆಯು ಚುರುಕುತನ ಮತ್ತು ಹಾಸ್ಯಪ್ರವೃತ್ತಿಯುಳ್ಳವಳಾಗಿ ಆಕೆಯ ಶಿಷ್ಯರು ಆಕೆಯನ್ನು ಬಹಳವಾಗಿ ಪ್ರೀತಿಸುತ್ತಿದ್ದರು. ಆದರೆ ದೊಡ್ಡ ತರಗತಿಗಳು, ಆಡಳಿತವರ್ಗದ ಅತಿಯಾದ ಶಿಸ್ತು, ಕಂಠಪಾಠವನ್ನು ಪ್ರೋತ್ಸಾಹಿಸುತ್ತಿದ್ದ ನೀರಸ ಶಿಕ್ಷಣ ಪದ್ಧತಿಗಳು ಆಕೆಗೆ ಉಪಾಧ್ಯಾಯ ವೃತ್ತಿಯಲ್ಲಿ ಅಸಮಾಧಾನವನ್ನುಂಟುಮಾಡಿದವು.

ಉಪಾಧ್ಯಾಯ ವೃತ್ತಿಯಲ್ಲಿನ ಹೆಚ್ಚಿನ ಆಯಾಸ, ಬಹಳ ದಿನಗಳಿಂದ ಇದ್ದ ರೋಗದ ಮುನ್ಸೂಚನೆ ಇವುಗಳಿಂದ ಆಕೆ ಉಪಾಧ್ಯಾಯ ವೃತ್ತಿಯನ್ನು ತ್ಯಜಿಸಿ, ಕೇಂಬ್ರಿಡ್ಜ್‌ನಲ್ಲಿ ತನ್ನ ತಾಯಿಯೊಂದಿಗೆ ವಾಸಿಸತೊಡಗಿದಳು. ಕಾಲೇಜಿನ ಉಪನ್ಯಾಸಕನೊಬ್ಬನನ್ನು ತಾನು ಪ್ರೀತಿಸುತ್ತಿದ್ದುದರಿಂದ, ವಿವಾಹಕ್ಕಾಗಿ ಬಂದ ಅನೇಕ ಬೇಡಿಕೆಗಳನ್ನು ಆಕೆ ತಿರಸ್ಕರಿಸಿದಳು. ಆದರೆ ಆ ಉಪನ್ಯಾಸಕನ ವಿವಾಹ ಬೇರೊಬ್ಬ ಮಹಿಳೆಯೊಂದಿಗೆ ನಿಶ್ಚಯವಾಯಿತು. ಇದರಿಂದ ಬೇಸರಗೊಂಡ ಆಕೆ ಕೇಂಬ್ರಿಡ್ಜ್‌ನ ಬಡ ಜನರ ಸೇವೆಗಾಗಿ ತನ್ನನ್ನು ತಾನು ಅರ್ಪಿಸಿಕೊಂಡಳು.

ಬಾಲ್ಕನ್ ಯುದ್ಧದಲ್ಲಿ ಕಷ್ಟಕ್ಕೊಳಗಾದವರ ಸಹಾಯಕ್ಕಾಗಿ ಆಕೆ ಮೊನಾಸ್ಟೈರ್‌ಗೆ ಹೋಗಿದ್ದಳು. ಅಲ್ಲಿ ಆಕೆ ಕಂಡ, “ತಂದೆತಾಯಿಗಳು ಸತ್ತ ಅಥವಾ ಕಳೆದುಹೋದ, ಒಣಗಿದ ರೊಟ್ಟಿಯ ಚೂರಿಗಾಗಿ ಕರುಣಾಜನಕವಾಗಿ ಕಾಯುತ್ತಿದ್ದ, ಭಯ, ಹಸಿವೆ, ಕಾಯಿಲೆಗಳಿಂದ ನಡುಗುತ್ತಿದ್ದ ಬಡಕಲು ದೇಹದ ಮಕ್ಕಳು” ಆಕೆಯ ಮೇಲೆ ವಿಚಿತ್ರ ಪರಿಣಾಮ ಬೀರಿದವು. ಮುಂದಿನ ದಿನಗಳಲ್ಲೂ ಆ ಚಿತ್ರ ತನ್ನ ಮುಂದೆ ಪದೇ ಪದೆ ಬರುತ್ತಿದೆಂದು ಆಕೆ ಹೇಳುತ್ತಾಳೆ. ಇದು ಮೊದಲ ಜಾಗತಿಕ ಮಹಾಯುದ್ಧದ ನಂತರ ಮಕ್ಕಳ ರಕ್ಷಣಾ ನಿಧಿಯನ್ನು ಪ್ರಾರಂಭಿಸಲು ಪ್ರೇರಣೆ ನೀಡಿತು.

ಜನರ ಮನಸ್ಸನ್ನು ಒಲಿಸುವಲ್ಲಿ ಎಗ್ಲಾಂಟೀನಳು ಅದ್ಭುತ ಚಾತುರ್ಯವನ್ನು ಹೊಂದಿದ್ದಳು. ಅನೇಕ ಜನರು ಇವಳೊಂದಿಗಿನ ಕ್ಷಣಮಾತ್ರದ ಭೇಟಿಯಿಂದ ತಮ್ಮ ಜೀವನದ ದಿಕ್ಕುಗಳನ್ನೇ ಬದಲಾಯಿಸಿಕೊಂಡರು. ಆಕೆಯಿಂದ

ಪ್ರಭಾವಿತನಾಗಿ ಲಂಡನ್ನಿನಲ್ಲಿನ ತನ್ನ ಉತ್ತಮ ವೈದ್ಯಕೀಯ ವೃತ್ತಿಯನ್ನು ತೊರೆದು, ಜಿನೀವಾದಲ್ಲಿ ವೈದ್ಯಕೀಯ ಕಾರ್ಯನಿರ್ವಾಹಕರಾದ ಡಾ। ಹೆಕ್ಸರ್ ಆಕೆಯ ಈ ಚಾತುರ್ಯದ ಬಗ್ಗೆ ಹೀಗೆ ಹೇಳುತ್ತಾರೆ, "ಆಕೆ ಮಾತನಾಡುವಾಗ ಆಕೆ ಹೇಳುತ್ತಿರುವುದೊಂದನ್ನು ಉಳಿದು, ಉಳಿದೆಲ್ಲವೂ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವಂತಾಗಿ, ಆಕೆ ಏನನ್ನು ಹೇಳುತ್ತಾಳೋ ಅದನ್ನು ಮಾತ್ರ ನೋಡುವಂತೆ ಪ್ರೇರಣೆಯಾಗುತ್ತದೆ."

ಆಕೆಯಲ್ಲಿನ ಸೂಕ್ಷ್ಮ ವಿವೇಚನಾಶಕ್ತಿ ಮತ್ತು ಧೈರ್ಯ ಇತರರಲ್ಲಿ ಸ್ಫೂರ್ತಿ ಮೂಡುವಂತೆ ಮಾಡುತ್ತಿದ್ದವು. ವ್ಯಾಪಾರಿಗಳಂತೆ ಜಾಹಿರಾತಿನ ಮಹತ್ವವನ್ನು ಆಕೆ ಅರಿತಿದ್ದಳು. 'ಮಕ್ಕಳ ರಕ್ಷಣಾನಿಧಿ'ಯನ್ನು ಕುರಿತು ದೊಡ್ಡ ದೊಡ್ಡ ಜಾಹಿರಾತುಗಳನ್ನು, ಕೆಲವೊಮ್ಮೆ ದಾನವಾಗಿ, ಪ್ರಕಟಿಸುತ್ತಿದ್ದಳು.

ಆಕೆಯ ಎಣಿಕೆಯಂತೆ, ಆಕೆಯ ಜಾಹಿರಾತುಗಳು ತತ್‍ಕ್ಷಣ ಕೆಲಸ ಮಾಡಲಾರಂಭಿಸಿದುವು. ಸೋಹೋದಲ್ಲಿನ, ಆಕೆಯ ಹಳೆಯ ಬಾಡಿಗೆಯ ಮನೆಗೆ ಪತ್ರಗಳ ಪ್ರವಾಹ, ದಿನಕ್ಕೆ ೧೭ ಸಾವಿರಕ್ಕೂ ಹೆಚ್ಚು, ಹರಿದು ಬರತೊಡಗಿತು.

'ಮಕ್ಕಳ ರಕ್ಷಣಾನಿಧಿ' ಕೇವಲ ತುರ್ತು ಸಮಯಗಳಿಗೆ ಮಾತ್ರ ಮೀಸಲಾಗಿರದೆ, ಶಾಶ್ವತವಾಗಿರಬೇಕೆಂಬ ಕನಸನ್ನು ಆಕೆ ಕಾಣುತ್ತಿದ್ದಳು. ಬಾಲ ಕೇಂದ್ರಗಳು, ಮಕ್ಕಳ ಆಸ್ಪತ್ರೆಗಳು, ಕ್ರೀಡಾಂಗಣಗಳು ಅದರ ವ್ಯಾಪ್ತಿಯಲ್ಲಿ ಸೇರಬೇಕೆಂದು ಆಕೆ ಬಯಸುತ್ತಿದ್ದಳು.

ಅಂತರರಾಷ್ಟ್ರೀಯ ಮಕ್ಕಳ ಕೇಂದ್ರದ ಅಂದಿನ ಖಜಾಂಚಿ-ಡಬ್ಲ್ಯು. ಎ. ಮೆಕೆಂಜಿ ದಾನ ನೀಡುವುದನ್ನು ಹೆಚ್ಚು ವ್ಯಕ್ತಿಗತಗೊಳಿಸಲು ವಿಶಿಷ್ಟ ಮಾರ್ಗವೊಂದನ್ನು ಅನುಸರಿಸಿದನು. ಇದರ ಪ್ರಕಾರ ಒಬ್ಬ ವ್ಯಕ್ತಿ ಒಂದು ಮಗು ಅಥವಾ ಒಂದು ಕುಟುಂಬಕ್ಕೆ ಆಗಾಗ್ಗೆ ಹಣ ಕಳುಹಿಸುವುದು ಹಾಗೂ ಪತ್ರಗಳು ಮತ್ತು ಫೋಟೋಗಳ ಮೂಲಕ ಅವರ ಸಂಬಂಧ ಪಡೆಯುವುದು. ಇದನ್ನು ಬಳಕೆಗೆ ತಂದಂದಿನಿಂದ, ಈಗ ಇತರ ಅನೇಕ ದತ್ತಿಗಳು ಇದನ್ನು ಅನುಕರಿಸುತ್ತಿವೆ. ಇದು ಅಂತರರಾಷ್ಟ್ರೀಯ ದಾನದ ಮಟ್ಟದಲ್ಲಿ ಹೃದಯಸ್ಪರ್ಶಿಯಾದುದಾಗಿದೆ.

ಎಗ್ಲಾಂಟೈನಳಿಗೆ ಆಗಲೇ ಐವತ್ತನೆ ವಯಸ್ಸಿನಲ್ಲಿ ಆರೋಗ್ಯ ಕೆಡಲಾರಂಭಿಸಿತು. ಕಾಯಿಲೆ, ನೋವುಗಳಲ್ಲಿಯೂ ಸಹ ಆಕೆ ನಿಧಿಸಂಗ್ರಹಕ್ಕಾಗಿ ಸಂಚಾರವನ್ನು ಕೈಗೊಂಡಳು. ಹೆಚ್ಚಿನ ಶ್ರಮ ಹಾಗೂ ನಿಧಿಯ ಬಗೆಗಿನ ಹೆಚ್ಚಿನ

ಚಿಂತೆ ಇವು ಆಕೆಯನ್ನು ಸಾವಿನ ದವಡೆಗೆ ಹತ್ತಿರವಾಗಿಸುತ್ತಿದ್ದವು. ಇವನ್ನರಿತಿದ್ದರೂ ಎಗ್ಲಾಂಟೀನ್ ವಿಶ್ರಾಂತಿ ತೆಗೆದುಕೊಳ್ಳಲು ಇಚ್ಛಿಸಲಿಲ್ಲ. ತನ್ನ ಐವತ್ತೆರಡನೆ ವಯಸ್ಸಿನಲ್ಲಿ, ತಾನು ಸಾಯುವುದಕ್ಕೆ ಸ್ವಲ್ಪ ಕಾಲದ ಹಿಂದೆ ತನ್ನ ಸೋದರಿ ಡೊರೋತಿಗೆ ಬರೆದ ಪತ್ರದಲ್ಲಿ ಆಕೆ ಶಾಶ್ವತ ನಿಧಿಯ ಬಗ್ಗೆ ಆಶಯವನ್ನು ವ್ಯಕ್ತಪಡಿಸಿದ್ದಳು. "ಅದರ ಭವಿಷತ್ತಿನ ಬಗ್ಗೆ ದೇವರಲ್ಲಿ ನಂಬಿಕೆ ಇಡುತ್ತೇನೆ" ಎಂದಿದ್ದಳು.

ತುರ್ತುಸೇವೆಗಾಗಿ ಪ್ರಾರಂಭಿಸಿದ ಆಕೆಯ ಮಕ್ಕಳ ರಕ್ಷಣಾನಿಧಿ ಶಾಶ್ವತ ಅಸ್ತಿತ್ವವನ್ನು ಪಡೆದ ಒಂಬತ್ತು ವರ್ಷಗಳಲ್ಲಿ ಲಕ್ಷಾಂತರ ಮಕ್ಕಳನ್ನು ಸಾವು ಮತ್ತು ರೋಗಗಳಿಂದ ರಕ್ಷಿಸಿದೆ. ಅನೇಕ ಮಕ್ಕಳು ಸಂತಸದಾಯಕ ಮತ್ತು ಫಲದಾಯಕ ಬದುಕನ್ನು ಪಡೆಯಲು ಸಹಾಯ ಮಾಡಿದೆ. "ಅಸಾಧ್ಯವಾದುದೇನೂ ಇಲ್ಲವೆಂದು ಆಕೆ ನಂಬಿದ್ದಳು, ಅದನ್ನು ಸಾಧಿಸಿ ತೋರಿಸಿದಳು. "ಎಗ್ಲಾಂಟೀನ್ ಜೆಬ್‌ಳು ಸಂತರೆಂದು ಕರೆಯಲ್ಪಡಬಹುದಾದ ಕೆಲವೇ ಜನರ ಗುಂಪಿಗೆ ಸೇರುತ್ತಾಳೆ" ಎಂದು ವಿಸ್ಕೌಂಟ್ ಸೆಸಿಲ್ ಬರೆಯುತ್ತಾರೆ.

ಜಿ. ಕುಮಾರ ಬಸಾಪುರ



ವ್ಯಕ್ತಿತ್ವವನ್ನು ಉತ್ತಮಗೊಳಿಸಲು ಉತ್ಕರ್ಷಕ್ಕಿಂತ ದುಃಖವೇ ಹೆಚ್ಚು ಕಾರಣವಾಗಿರುತ್ತದೆ. ದುಃಖಕ್ಕಿಂತ ಉತ್ತಮ ಶಿಕ್ಷಕನು ಜೀವನದಲ್ಲಿ ನಮಗೆ ದೊರೆಯಲಿಕ್ಕಿಲ್ಲ. ಈ ದುಃಖದ ಶಿಕ್ಷಣದಿಂದಲೇ ನಮ್ಮ ಹೃದಯ ಪರಿಪಕ್ವವಾಗಿ ಸಾಕ್ಷಾತ್ಕಾರವನ್ನು ಪಡೆಯಬಲ್ಲದು.

—ವಿವೇಕಾನಂದ

ರೇಬಿಸ್ ರೋಗವನ್ನು ಜಯಿಸಬೇಕಾಗಿದೆ

ರಾಮಮೂರ್ತಿಸ್ವಾಮಿ ಒಬ್ಬ ಅಗಸ. ಒಂದು ದಿನ ಬೊಂಬಾಯಿಯ ಆಸ್ಪತ್ರೆಯೊಂದಕ್ಕೆ ಚಿಕಿತ್ಸೆಗಾಗಿ ಬಂದ. ತನಗೆ ತಲೆ ನೋವು ಮತ್ತು ತೋಳಿನಲ್ಲಿ ಚುಚ್ಚಿದಂತೆ ಆಗುತ್ತಿದೆ ಎಂದು ಅವನು ಹೇಳಿದ. ಚಿಕಿತ್ಸೆಗೆ ತೊಡಗಿದ ಡಾಕ್ಟರಿಗೆ ಮತ್ತೊಂದು ವಿವರವನ್ನೂ ಹೇಳಿದ. ಉತ್ತರ ಪ್ರದೇಶ ರಾಜ್ಯದಲ್ಲಿ ಇರುವ ತನ್ನ ಹಳ್ಳಿಗೆ ಹೋಗಿದ್ದಾಗ ಬೀದಿ ನಾಯಿಯೊಂದು ತನ್ನ ತೋಳನ್ನು ಕಚ್ಚಿತ್ತು. ಈಗ ಅದೇ ತೋಳಿನಲ್ಲಿ ನೋವಾಗುತ್ತಿರುವುದು ಎಂದು. ರಾಮಮೂರ್ತಿಸ್ವಾಮಿ ಹೇಳಿದ ವಿಷಯದಿಂದ ಆತಂಕಗೊಂಡರು ಡಾಕ್ಟರು. ದುರ್ದೈವದಿಂದ ಆ ಹಳ್ಳಿಯ ವೈದ್ಯರ ಹತ್ತಿರ ರೇಬಿಸ್ ನಿರೋಧಕ ಚುಚ್ಚುಮದ್ದು ಇರಲಿಲ್ಲ. ಬೊಂಬಾಯಿ ತಲುಪಿದ ಕೂಡಲೆ ವೈದ್ಯರಲ್ಲಿಗೆ ಹೋಗುವಂತೆ ಆ ಹಳ್ಳಿಯ ವೈದ್ಯರು ರಾಮಮೂರ್ತಿಸ್ವಾಮಿಗೆ ಹೇಳಿದ್ದರು. ಅದರಂತೆ ಸ್ವಾಮಿ ಈಗ ಆಸ್ಪತ್ರೆಗೆ ಬಂದಿದ್ದ. ಆತನನ್ನು ತಕ್ಷಣ ಒಳರೋಗಿಯನ್ನಾಗಿ ಆಸ್ಪತ್ರೆಗೆ ಸೇರಿಸಿಕೊಂಡು ಚಿಕಿತ್ಸೆ ಪ್ರಾರಂಭಮಾಡಿದರು. ಆತನ ದೇಹಸ್ಥಿತಿಯ ಬದಲಾವಣೆಗಳ ಬಗ್ಗೆ ತೀವ್ರ ನಿಗಾ ಇಡಲಾಯ್ತು. ಆದರೆ ರಾಮಮೂರ್ತಿಸ್ವಾಮಿ ಚಿಕಿತ್ಸೆಗೆ ತಡಮಾಡಿ ಬಂದಿದ್ದ. ಮಾರನೆಯ ದಿನ ಅವನನ್ನು ಪರೀಕ್ಷಿಸಿದ ಡಾಕ್ಟರು ನಿರಾಸೆಯ ನಿಟ್ಟುಸಿರೆಳೆದರು. ಆತನ ಆಯುಸ್ಸು ತುಂಬಿಬಂದಿತ್ತು. ರಾಮಮೂರ್ತಿಸ್ವಾಮಿಯಲ್ಲಿ ಈಗ ರೇಬಿಸ್ ರೋಗ ಪೀಡಿತನ ಲಕ್ಷಣಗಳು ಸ್ಪಷ್ಟವಾಗಿ ಕಾಣತೊಡಗಿದ್ದವು. ಅವನ ಉಸಿರಾಟ ಸರಾಗವಾಗಿರಲಿಲ್ಲ, ಏನನ್ನಾದರೂ ನುಂಗಲು ಯತ್ನಿಸಿದರೆ ಗಂಟಲಿನ ಸ್ನಾಯುಗಳ ಸೆಳೆತದಿಂದಾಗಿ ವಿಪರೀತ ನೋವಾಗುತ್ತಿತ್ತು. ಕೆಲಗಂಟೆಗಳ ನಂತರ ಮೈಯ ಸೆಳೆತ ಆರಂಭವಾಯ್ತು. ಕೈಕಾಲುಗಳನ್ನು ಒದರಲು ಆರಂಭಿಸಿದ. ಮುಂದೆ ಆತ ಬದುಕಿದ್ದ ಎರಡು ದಿನಗಳೂ ನರಕಯಾತನೆಯನ್ನು ಅನುಭವಿಸಿದ. ಕೊನೆಗೆ ರಾಮಮೂರ್ತಿಸ್ವಾಮಿ ಕಡೆಯುಸಿರು ಎಳೆದಾಗ, ಈ ಕ್ರೂರಹಿಂಸೆಯು, ನೋವಿನಿಂದ ಆತ ಮುಕ್ತನಾದ ಎನ್ನುವಂತಿತ್ತು. ರೇಬಿಸ್ ಪೀಡಿತರು ಕೊನೆಯ ಘಳಿಗೆಗಳಲ್ಲಿ ಅನುಭವಿಸಬೇಕಾದ ಯಾತನೆಯನ್ನು ನೆನೆದರೆ ಆ ಹಿಂಸೆಗಿಂತಲೂ ಸಾವೇ ಹಿತಕರ ಎನಿಸುವುದು.

ಫೆಬ್ರವರಿ ೧೯೮೧ರ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾದ ಡಾ|| ಶಿವಾನಂದ ಕಾರ್ಕಳ್ ಅವರ "ಸಡೆನ್ ಸಾ ಅನ್ ಆಲ್ ಔಟ್ ಅಟ್ಯಾಕ್ ಆನ್ ರೇಬಿಸ್" ಲೇಖನದ ಭಾವಾನುವಾದ.

ನಮ್ಮ ದೇಶದಲ್ಲಿ ಪ್ರತಿ ವರ್ಷವೂ ರೇಬಿಸ್‌ನಿಂದ ಸಾಯುವ ಸಾವಿರಾರು ಜನರಲ್ಲಿ ರಾಮು ತಾಯಿಯ ಉದಾಹರಣೆಯೂ ಒಂದು. ವಿಶ್ವ ಆರೋಗ್ಯ ಸಂಸ್ಥೆಯ ಅಧಿಕೃತ ಅಂದಾಜಿನಂತೆ ಭಾರತದಲ್ಲಿ ಪ್ರತಿವರ್ಷ ರೇಬಿಸ್‌ನಿಂದ ಸಾಯುವವರ ಸಂಖ್ಯೆ ಒಂದುಸಾವಿರ. ಆದರೆ ಯಾವ ಚಿಕಿತ್ಸೆಯೂ ಇಲ್ಲದೆ, ದಾಖಲೆಗಳಲ್ಲಿ ನಮೂದಾಗದೆ ಸಾಯುವವರ ಸಂಖ್ಯೆ ವರ್ಷಕ್ಕೆ ಕನಿಷ್ಟ ಹತ್ತು ಸಾವಿರ ಎಂದು ಪರಿಣತರ ಅಂದಾಜು. ರೇಬಿಸ್ ರೋಗದಿಂದ ಸಾಯುವವರ ಸಂಖ್ಯೆ ಪ್ರಪಂಚದ ಎಲ್ಲಾ ದೇಶಗಳಿಗಿಂತಲೂ ಭಾರತದಲ್ಲೇ ಹೆಚ್ಚು. ಇಡೀ ದೇಶದಲ್ಲಿ ಹುಚ್ಚುನಾಯಿಗಳ ಕಡಿತಕ್ಕೆ ಸಿಕ್ಕಿ ಘಾಸಿಗೊಂಡವರಿಗೆ ರೇಬಿಸ್ ರೋಗ ನಿರೋಧಕ ಚುಚ್ಚುಮದ್ದನ್ನು ನೀಡುವ ಕೇಂದ್ರಗಳ ಸಂಖ್ಯೆ ಸುಮಾರು ೧೫೦೦. ಇವುಗಳಲ್ಲಿ ಚಿಕಿತ್ಸೆ ಪಡೆಯುವ ಜನರ ಸಂಖ್ಯೆ ಪ್ರತಿ ವರ್ಷ ಸುಮಾರು ೭ ಲಕ್ಷ.

ರೇಬಿಸ್ ರೋಗಕ್ಕೆ ಕಾರಣ ಬಂದೂಕಿನ ಗುಂಡಿನ ಆಕಾರದ ಒಂದು ವೈರಸ್ ಜೀವಾಣು. ಇದು ರೋಗಿಯ ಜೊಲ್ಲಿನಲ್ಲಿ ಇರುತ್ತದೆ. ರೇಬಿಸ್ ರೋಗ ಪೀಡಿತವಾದ ಪ್ರಾಣಿ ಮತ್ತೊಂದು ಪ್ರಾಣಿ ಅಥವಾ ಮನುಷ್ಯನನ್ನು ಕಚ್ಚಿದಾಗ ಗಾಯದ ಮೂಲಕ ಈ ವೈರಸ್‌ಗಳು ಆ ಇನ್ನೊಂದು ದೇಹವನ್ನು ಪ್ರವೇಶಿಸುತ್ತವೆ. ಪಾದದ ಚರ್ಮ ಒಡೆದಾಗ ಆ ಬಿರುಕುಗಳ ಮೂಲಕವೂ ರೋಗಾಣು ಪ್ರವೇಶ ಮಾಡುವ ಸಾಧ್ಯತೆ ಇದೆ. ಆದರೆ ಇದು ತೀರಾ ಅಪರೂಪ. ರೇಬಿಸ್ ಪೀಡಿತ ಪ್ರಾಣಿ ಮನುಷ್ಯನನ್ನು ನೆಕ್ಕಿದಾಗಲೂ ಈ ರೋಗ ಹರಡುವ ಸಂಭವವೂ ಉಂಟು.

ದೇಹ ಪ್ರವೇಶಮಾಡಿದ ವೈರಸ್ ರೋಗಾಣು ಒಂದು ನಿರ್ದಿಷ್ಟ ಅವಧಿಯ ತನಕ ತನ್ನ ಇರುವಿಕೆಯನ್ನು ತೋರದೆ ಹುದುಗಿರುತ್ತದೆ. ಈ ಅವಧಿ ಕೆಲ ದಿನಗಳಿಂದ ಹಿಡಿದು ಕೆಲ ತಿಂಗಳವರೆಗೂ ಆಗಬಹುದು. ರೋಗದ ಯಾವುದೇ ಲಕ್ಷಣಗಳೂ ಈ ಅವಧಿಯಲ್ಲಿ ಕಾಣಬರುವುದಿಲ್ಲ. ಈಸಮಯದಲ್ಲಿ ವೈರಸ್‌ಗಳು ತಮ್ಮ ಬಲವನ್ನು ವೃದ್ಧಿಸಿಕೊಂಡು ಧಾಳಿಗೆ ಅಣಿಯಾಗುವುವು. ನಂತರ ಒಂದು ದಿನ ಗಾಯದ ಸ್ಥಳದಲ್ಲಿ ಚುಚ್ಚಿದಂತಹ ನೋವು ಅನುಭವವಾಗುವುದು. ರೇಬಿಸ್ ರೋಗಾಣುಗಳು ನರಗಳ ಮೇಲೆ ತಮ್ಮ ಆಕ್ರಮಣ ಪ್ರಾರಂಭವಾಗಿದುದರ ಗುರುತು ಇದು. ಸ್ವಲ್ಪೇ ಸಮಯದ ನಂತರ ರೋಗಾಣುಗಳು ಬೆನ್ನು ಹುರಿಯ ಮೂಲಕ ಮಿದುಳನ್ನು ತಲುಪುವ ತಮ್ಮ ನಿರ್ದಯ ಯಾತ್ರೆಯನ್ನು ಆರಂಭಿಸುತ್ತವೆ. ಈ ಹಂತ ತಲುಪಿದ ರೋಗಿಯನ್ನು ಉಳಿಸಿಕೊಳ್ಳುವುದು ಅಸಾಧ್ಯ.

ಮಿದುಳಿನಲ್ಲಿರುವ ನರಕೋಶಗಳನ್ನು ಈ ವೈರಸ್‌ಗಳು ಆವರಿಸಿಕೊಂಡ ಕೂಡಲೆ ಕಾಣುವ ಲಕ್ಷಣಗಳು ತಲೆನೋವು, ಮನಸ್ಸಿನ ಭ್ರಮೆ ಮತ್ತು ಅಸಹನೆ. ನರಮಂಡಲದ ಸಂವೇದನೆಯ ಶಕ್ತಿ ಅತಿಸೂಕ್ಷ್ಮವಾಗುತ್ತದೆ. ಬೆಳಕು ತೋರಿಸಿದರೆ, ಮುಟ್ಟಿದರೆ, ಕೊನೆಗೆ ಸ್ವಲ್ಪ ಜೋರಾಗಿ ಗಾಳಿ ಬೀಸಿದರೂ ಸಹ ರೋಗಿಯ ನರಮಂಡಲ ತೀವ್ರವಾಗಿ ಉದ್ರೇಕಿತವಾಗಿ, ಕೈಕಾಲುಗಳ ಸೆಳೆತ ಬರುತ್ತದೆ. ಸ್ವಲ್ಪ ಸಮಯದ ನಂತರ ಗಂಟಲಿನ ಸ್ನಾಯುಗಳು ಸಂಕುಚಿತವಾಗುವುದರಿಂದ ರೋಗಿಗೆ ದ್ರವಪದಾರ್ಥಗಳನ್ನು ನುಂಗಲೂ ಸಹ ಕಷ್ಟವಾಗುತ್ತದೆ. ಕೊನೆ ಕೊನೆಗೆ ಈ ಸ್ನಾಯುಗಳು ಎಷ್ಟೊಂದು ಕುಗ್ಗುವುವೆಂದರೆ ರೋಗಿ ನೀರನ್ನೂ ಕುಡಿಯಲಾರ. ಅವನು ನೀರನ್ನು ಕಂಡರೇ ಭಯ ಪಡತೊಡಗುವನು. ಈ ಕಾರಣದಿಂದಲೇ ಈ ರೋಗಕ್ಕೆ 'ಹೈಡ್ರೋ ಫೋಬಿಯ' ಅಂದರೆ 'ನೀರಿನ ಭಯ'ದ ರೋಗ ಎಂತಲೂ ಹೆಸರು ಬಂದಿದೆ. ಮುಂದಿನ ಹಂತದಲ್ಲಿ ರೋಗಿಗೆ ಎಚ್ಚರ ತಪ್ಪುವುದು. ಸ್ನಾಯುಗಳ ಸೆಳೆತದಿಂದ ಉಸಿರಾಟಕ್ಕೂ ಅಡಚಣೆಯಾಗುವುದು. ಕೊನೆಗೆ ರೋಗಿ ಸಾವನ್ನು ಅಪ್ಪುವನು.

ಹಲವಾರು ಶತಮಾನಗಳಷ್ಟು ಹಿಂದಿನ ಭಾರತದ, ಗ್ರೀಸಿನ, ಈಜಿಪ್ತದ, ರೋಮನರ ವೈದ್ಯಕೀಯ ಗ್ರಂಥಗಳಲ್ಲಿ ಈ ಮಾರಕ ರೇಬಿಸ್ ರೋಗದ ಉಲ್ಲೇಖವಿದೆ. ರೇಬಿಸ್ ಎಂಬ ಹೆಸರನ್ನು ಕೊಟ್ಟವರೂ ರೋಮನ್ನರೇ. ಲ್ಯಾಟಿನ್ ಭಾಷೆಯಲ್ಲಿ 'ರೇಬಿಸ್' ಎಂದರೆ ಅಸಂಬದ್ಧವಾಗಿ ಕೂಗಾಡು, ಬಗುಳು ಎಂದು ಅರ್ಥ. ರೇಬಿಸ್ ರೋಗಪೀಡಿತರು ಕೊನೆಘಳಿಗೆಗಳಲ್ಲಿ ಕಿರುಚಾಡುವುದೂ ನಾಯಿಯಂತೆ [illegible] ಮಾಡುವುದರಿಂದ ಇದಕ್ಕೆ ರೇಬಿಸ್ ಎಂದು ಹೆಸರಿಟ್ಟರು. ಮೊದಲು [illegible] ಯಸಾದ ಔಷಧವೇ ಇರಲಿಲ್ಲ. ೧೯ನೆಯ ಶತಮಾನದ ಕೊನೆಯಲ್ಲಿ ಫ್ರಾನ್ಸ್‌ದೇಶದ ಸುಪ್ರಸಿದ್ಧ ವಿಜ್ಞಾನಿ ಲೂಯಿಪಾಶ್ಚರ್ ಈ ರೋಗಕ್ಕೆ ಚುಚ್ಚುಮದ್ದನ್ನು ಕಂಡುಹಿಡಿದನು. ರೇಬಿಸ್ ರೋಗಪೀಡಿತವಾದ ಮೊಲವೊಂದರ [illegible] ನ್ನು ತುರಿಯ ಪೊರೆ (ಟಿಸ್ಸ್ಯೂ)ಯಿಂದ ಈ ಚುಚ್ಚುಮದ್ದನ್ನು ತಯಾರಿಸಲಾ[illegible]. ಜುಲೈ ೬, ೧೮೮೫ರಲ್ಲಿ ೯ ವರ್ಷದ ಜೋಸೆಫ್ ಮಯಿಸ್ಟರ್ ಎಂಬ ಬಾಲಕನಿಗೆ ಹುಚ್ಚು ಹಿಡಿದ ತೋಳವೊಂದು ೧೪ ಕಡೆ ಕಚ್ಚಿತ್ತು. ಆ ಬಾಲಕನಿಗೆ ರೇಬಿಸ್ ನಿರೋಧಕ ಚುಚ್ಚುಮದ್ದನ್ನು ನೀಡಿ [illegible] ಬಾಲಕನ ಪ್ರಾಣ ಉಳಿಯಿತು. ಬಾಲಕನು ರೇಬಿಸ್ ರೋಗದಿಂದ ಪಾರಾದ. ಹೀಗೆ ರೇಬಿಸ್ ನಿರೋಧಕ ಚುಚ್ಚುಮದ್ದು ಬಳಕೆಗೆ ಬಂತು.

ಇಂದು ಭಾರತದಲ್ಲಿ [illegible] ಸಿದ ಪಾಶ್ಚರ್ ಪದ್ಧತಿಯಲ್ಲಿ ರೇಬಿಸ್

ನಿರೋಧಕ ಚುಚ್ಚುಮದ್ದನ್ನು ತಯಾರಿಸಿ ಉಪಯೋಗ ಮಾಡಲಾಗುತ್ತಿದೆ. ಈ ಚುಚ್ಚುಮದ್ದಿನ ಬಳಕೆಯಲ್ಲಿ ಇರುವ ಸಮಸ್ಯೆ ಎಂದರೆ ಹುಚ್ಚುನಾಯಿಯ ಕಡಿತಕ್ಕೆ ಒಳಗಾದವರು ೭ ರಿಂದ ೨೧ ದಿವಸಗಳವರೆಗೂ ಪ್ರತಿದಿನ ತಪ್ಪದೆ ಇವನ್ನು ಚುಚ್ಚಿಸಿಕೊಳ್ಳಬೇಕು. ಇದು ಸ್ವಲ್ಪ ನೋವನ್ನು ಉಂಟುಮಾಡುವ ಚುಚ್ಚುಮದ್ದೂ ಹೌದು. ಆದರೆ ಬಿಡದೆ ತೆಗೆದುಕೊಂಡರೆ ಮಾತ್ರ ಈ ಔಷಧಿ, ಶರೀರದಲ್ಲೇ ರೇಬಿಸ್ ರೋಗದ ವೈರಸ್ಸುಗಳನ್ನು ಗೆಲ್ಲಬಲ್ಲ ಪ್ರತಿರೋಧಕ ಶಕ್ತಿಯ ಕಣಗಳನ್ನು ನಿರ್ಮಾಣಮಾಡುತ್ತದೆ. ದೂರದ ಮೂಲೆಯಲ್ಲಿರುವ ಹಳ್ಳಿಯವರು ಹುಚ್ಚುನಾಯಿಯ ಕಡಿತಕ್ಕೆ ಹೀಗೆ ಕ್ರಮವಾಗಿ ಒಂದೆರಡು ವಾರಗಳ ಚಿಕಿತ್ಸೆಗಾಗಿ ದಿನಂಪ್ರತಿ ಬರುವುದು ಕಷ್ಟದ ಕೆಲಸವೇ ಸರಿ. ಕೃಷಿಯ ಕೆಲಸಗಳಿಗೂ ಅವರಿಗೆ ತೊಂದರೆಯಾಗುತ್ತದೆ. ಆದರೂ ರೇಬಿಸ್ ರೋಗಕ್ಕೆ ಕ್ರಮಬದ್ಧ ಚಿಕಿತ್ಸೆ ಅನಿವಾರ್ಯ.

ಹುಚ್ಚುನಾಯಿಯ ಕಡಿತಕ್ಕೆ ಸಿಕ್ಕಿದವರಲ್ಲಿ ಶೇ. ೫೦ ಜನರು ಮಾತ್ರ ರೇಬಿಸ್ ಸೋಂಕಿಗೆ ಒಳಗಾಗುವರೆಂದು ಒಂದು ಅಂದಾಜು. ಆದರೆ ಯಾರಿಗೆ ಈ ರೋಗ ಬರುವುದೆಂದು ಮುಂಚಿತವಾಗಿಯೇ ತಿಳಿದುಕೊಳ್ಳಲು, ಖಚಿತವಾದ ಯಾವ ಪರೀಕ್ಷೆಯೂ ಇಲ್ಲ. ಆದ್ದರಿಂದಲೇ ಹುಚ್ಚುನಾಯಿಯಿಂದ ಕಡಿಸಿಕೊಂಡ ಪ್ರತಿಯೊಬ್ಬರೂ ನಿರೋಧಕ ಚುಚ್ಚುಮದ್ದನ್ನು ತೆಗೆದುಕೊಳ್ಳಲೇಬೇಕು. ಬೊಂಬಾಯಿಯ ಹಾಫ್‌ಕಿನ್ಸ್ ಸಂಸ್ಥೆಯ ಮುಖ್ಯಾಧಿಕಾರಿಗಳಲ್ಲಿ ಒಬ್ಬರಾದ ಜೀವಾಣು ವಿಜ್ಞಾನಿ ಡಾಕ್ಟರ್ ಎ. ಎಸ್. ಡಿ. ನಾನಾವತಿ ಅವರದು ಒಂದು ಸಲಹೆ. ಹುಚ್ಚುನಾಯಿ ಕಡಿದ ಜಾಗವನ್ನು ತಕ್ಷಣ ಸಾಬೂನಿನಿಂದ ಚೆನ್ನಾಗಿ ಉಜ್ಜಿ ತೊಳೆಯುವುದರಿಂದ ರೇಬಿಸ್ ಅಂಟುವ ಸಾಧ್ಯತೆ ಅರ್ಧದಷ್ಟು ಕಡಿಮೆಯಾಗುವುದು. ಆದರೆ ಗಾಯಕ್ಕೆ ಯಾವುದೇ ಮುಲಾಮನ್ನು ಸವರುವುದು ಸಲ್ಲದು. ಇದರಿಂದ ಒಳಿತಿಗಿಂತಲೂ ಅನಾಹುತವಾಗುವ ಸಂಭವವೇ ಹೆಚ್ಚು.

ರೇಬಿಸ್ ರೋಗದ ವೈರಸ್‌ಗಳಿಂದ ಪೀಡಿತವಾದ ಪ್ರಾಣಿಗಳು ಎರಡು ವಿಧದಲ್ಲಿ ವರ್ತಿಸುತ್ತವೆ. ಒಂದು ವಿಧದಲ್ಲಿ ಈ ಪ್ರಾಣಿಗಳು ಹೆದರಿಕೆ ಹುಟ್ಟಿಸುವಂತೆ ಉಗ್ರವಾಗಿ ವರ್ತಿಸುತ್ತವೆ. ವಿನಾಕಾರಣ ಬೇರೆ ಪ್ರಾಣಿ ಅಥವಾ ಮನುಷ್ಯನ ಮೇಲೆ ಆಕ್ರಮಣ ನಡೆಸುತ್ತವೆ. ಸ್ವಭಾವತಃ ಶಾಂತವಾಗಿರುವ ಪ್ರಾಣಿಗಳೂ ಕೂಡ ಇರಿಸುಮುರಿಸಾದಂತೆ ವರ್ತಿಸುತ್ತವೆ. ಇದಕ್ಕೆ ಫ್ಯೂರಿಯಸ್ ರೇಬಿಸ್ ಅಂದರೆ ಉಗ್ರರೇಬಿಸ್ ಎಂದು ಕರೆಯುತ್ತಾರೆ.

ಇನ್ನೊಂದು ವಿಧವಾದ ರೇಬಿಸ್ ಪೀಡಿತ ಪ್ರಾಣಿಗಳು ಯಾವುದೇ ಉತ್ಸಾಹ,

ಚಟುವಟಿಕೆ ಇಲ್ಲದೆ ಇರುತ್ತವೆ. ಅವಕ್ಕೆ ರೇಬಿಸ್ ಬಂದಿದೆಯೆಂದು ಪತ್ತೆ ಹಚ್ಚುವುದೂ ಕಠಿಣ. ಇದಕ್ಕೆ ಡಂಬ್ ರೇಬಿಸ್ ಅಂದರೆ 'ಮೂಕ ರೇಬಿಸ್' ಎಂದು ಕರೆಯುತ್ತಾರೆ. ಎರಡೂ ರೇಬಿಸ್‌ಗಳೂ ಮಾರಕ.

ಬೊಂಬಾಯಿ ನಗರದಲ್ಲಿ ಒಂದು ಮನೆಯವರು ನಾಯಿ ಸಾಕಿದ್ದರು. ಅದು ಮನೆಯವರೆಲ್ಲರಿಗೂ ಅಚ್ಚುಮೆಚ್ಚಿನ ನಾಯಿ. ಒಂದು ದಿನ ಇದ್ದಕ್ಕಿದ್ದಂತೆ ಅದು ಎಲ್ಲರನ್ನೂ ಕಚ್ಚಲು ತೊಡಗಿತು. ಹತ್ತಿರ ಯಾರನ್ನು ಬರಗೊಡಿಸಲಿಲ್ಲ. ಇದರಿಂದ ಪೇಚಾಟಗೊಂಡ ಮನೆಯ ಯಜಮಾನರು ಪಶುವೈದ್ಯರೊಬ್ಬರನ್ನು ಈ ನಾಯಿಯ ಪರೀಕ್ಷೆಗೆ ಕರೆತಂದರು. ಪಶುವೈದ್ಯರು ಬಂದು ಪರೀಕ್ಷಿಸಿ ನಾಯಿಯನ್ನು ಪ್ರತ್ಯೇಕವಾಗಿ ಇಡಲು ತಿಳಿಸಿದರು. ಒಂದೆರಡು ದಿನಗಳಲ್ಲಿ ಮೊದಲು ನಾಯಿಯ ಕೆಳದವಡೆ, ನಂತರ ಅದರ ಹಿಂದಿನೆರಡು ಕಾಲುಗಳಿಗೂ ಪಾರ್ಶ್ವವಾಯು ತಗುಲಿತು. ಅದರ ತೆರೆದ ಬಾಯಿಯಿಂದ ಜೊಲ್ಲು ಸುರಿಯತೊಡಗಿತು. ಒಂದು ವಾರದಲ್ಲಿ ಆ ನಾಯಿ ಸತ್ತೇಹೋಯ್ತು. ಅದನ್ನು ಸಾಕಿದ್ದ ಮನೆಯ ಪ್ರತಿಯೊಬ್ಬರೂ ರೇಬಿಸ್ ನಿರೋಧಕ ಚುಚ್ಚುಮದ್ದನ್ನು ತೆಗೆದುಕೊಳ್ಳಬೇಕಾಯ್ತು.

ಸಾಕುಪ್ರಾಣಿಗಳಿಗೆ ರೇಬಿಸ್ ಸೋಂಕು ಬರದಂತೆ ನಿರೋಧಕ ಚುಚ್ಚುಮದ್ದು ಕೊಡುವ ವ್ಯವಸ್ಥೆ ಇದೆ. ಆದರೂ ಇದು ನೂರಕ್ಕೆ ನೂರರಷ್ಟು ಸುರಕ್ಷಿತವೆಂದು ಹೇಳಲಾಗದು. ಕಾಕರ್ ಸ್ಪ್ಯಾನಿಯಲ್ ಜಾತಿಯ ಸಾಕುನಾಯಿಯೊಂದಕ್ಕೆ ರೇಬಿಸ್ ನಿರೋಧಕ ವ್ಯಾಕ್ಸೀನನ್ನು ಕೊಡಲಾಗಿತ್ತು. ಕೆಲದಿನಗಳ ನಂತರ ಬೀದಿ ನಾಯಿಯೊಂದು ಈ ಸಾಕುನಾಯಿಯನ್ನು ಕಚ್ಚಿತು. ಇದರ ಯಜಮಾನ ತನ್ನ ನಾಯಿಗೆ ಹೇಗೂ ರೇಬಿಸ್‌ನಿರೋಧಕ ಚುಚ್ಚುಮದ್ದನ್ನು ಕೊಡಿಸಿವೆಯಲ್ಲಾ ಎಂದು ನಿಶ್ಚಿಂತನಾಗಿದ್ದ. ಬೀದಿನಾಯಿಯಿಂದ ಕಡಿಸಿಕೊಂಡ ಎರಡು ವಾರಗಳ ನಂತರ ಈ ನಾಯಿ ಇದ್ದಕ್ಕಿದ್ದಂತೆ ಸತ್ತುಹೋಯ್ತು. ಸಾಯುವುದಕ್ಕೆ ಕೇವಲ ಎರಡು ಗಂಟೆಗಳ ಮುಂಚಿತವಾಗಿ ಅದು ರೇಬಿಸ್ ಪೀಡಿತ ಲಕ್ಷಣಗಳನ್ನು ತೋರಿಸಿತ್ತು. ಪರೀಕ್ಷಾನಂತರ ಅದಕ್ಕೆ ರೇಬಿಸ್ ಬಂದಿದ್ದುದು ಖಚಿತವಾಯ್ತು. ಆದ್ದರಿಂದ ಮುಂಜಾಗರೂಕತೆಯ ಕ್ರಮವಾಗಿ ಮನೆಯವರೆಲ್ಲ ನಿರೋಧಕ ಚುಚ್ಚುಮದ್ದನ್ನು ತೆಗೆದುಕೊಂಡರು.

ಭಾರತದಲ್ಲಿ ರೇಬಿಸ್ ರೋಗದ ಮೂಲ ಬೀದಿ ನಾಯಿಗಳು. ಪ್ರಪಂಚದ ಬೇರೆ ದೇಶಗಳಲ್ಲಿ ವಿವಿಧ ಪ್ರಾಣಿಗಳು ಈ ರೋಗವಾಹಕಗಳಾಗಿವೆ. ತೋಳ, ನರಿ, ಮುಂಗುಸಿ, ಮೊಲ, ಕಾಡುಬೆಕ್ಕು, ರಕೂನ್ ಎಂಬ ಮಾಂಸಾಹಾರಿ

ಪ್ರಾಣಿ, ಬಾವಲಿ ಇವು ರೇಬಿಸ್ ರೋಗದ ವೈರಸ್‌ಗಳನ್ನು ತಮ್ಮ ದೇಹದಲ್ಲಿ ಕೊಂಡೊಯ್ಯಬಲ್ಲವು. ಇಲ್ಲಿ ಪ್ರಾಣಿಗಳು ಒಟ್ಟುಗೂಡಿದರೂ ನಮ್ಮ ದೇಶದ ಬೀದಿ ನಾಯಿಗಳಷ್ಟು ಅನಾಹುತವನ್ನು ತಂದು ಒಡ್ಡಲಾರವು. ಭಾರತದಲ್ಲಿ ಇರುವ ಬೀದಿನಾಯಿಗಳ ಸಂಖ್ಯೆ ಸುಮಾರು ಐದುಕೋಟಿ. ಪ್ರಪಂಚದ ಬೇರೆ ಯಾವ ದೇಶದಲ್ಲೂ ಇಷ್ಟೊಂದು ಬೀದಿನಾಯಿಗಳಿಲ್ಲ. ಇವು ರೇಬಿಸ್ ರೋಗಾಣು ಗಳಿಗೆ ಒಳ್ಳೆಯ ಆಶ್ರಯತಾಣಗಳಾಗಿ, ರೋಗ ಮನುಷ್ಯರಲ್ಲಿ ಹರಡಲು ಕಾರಣವಾಗಿವೆ. ಇವುಗಳಿಂದಲೇ ರೇಬಿಸ್ ರೋಗದ ಭೀಕರತೆ ಹೆಚ್ಚಿದೆ.

ಡಾ. ಸಾಸಾನಿಯವರು ಹೇಳುವಂತೆ ಬೊಂಬಾಯಿ ನಗರ ಒಂದರಲ್ಲೇ ಇರುವ ಬೀದಿನಾಯಿಗಳ ಸಂಖ್ಯೆ ಸುಮಾರು ೭ ಲಕ್ಷ. ನಾಯಿಗಳನ್ನು ಹಿಡಿಯುವ, ಕಾರ್ಪೊರೇಷನ್ನಿನ ೧೦ ತಂಡಗಳು ದಿನವಿಡೀ ಕೆಲಸಮಾಡಿ ತಮ್ಮ ವ್ಯಾನು ಗಳಿಗೆ ತುಂಬುವ ನಾಯಿಗಳ ಸಂಖ್ಯೆ ಕೇವಲ ೧೧ ಸಾವಿರ. ಸರ್ಕಾರವೂ ರೇಬಿಸ್ ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಲು, ಒಂದೇ ಮನಸ್ಸಿನಿಂದ ಚುರುಕಾಗಿ ಕಾರ್ಯನಿರ್ವಹಣೆ ಮಾಡುತ್ತಿಲ್ಲ ಎಂಬ ಆರೋಪವೂ ಇದೆ. ರಾತ್ರಿಯ ಕಾವಲುಗಾರನೊಬ್ಬ ಹುಚ್ಚುನಾಯಿಯ ಕಡಿತದಿಂದ ರೇಬಿಸ್ ಪೀಡಿತನಾಗಿ ಸತ್ತುಹೋದ. ಆ ಬೀದಿಯಲ್ಲಿ ವಾಸಿಸುತ್ತಿದ್ದ ಮಹನೀಯರೊಬ್ಬರು ಈ ದುರ್ಘಟನೆಯನ್ನು ತಿಳಿಸಿ ಅಲ್ಲಿನ ಬೀದಿನಾಯಿಗಳನ್ನು ಹಿಡಿದು ಒಯ್ಯುವಂತೆ ವಿನಂತಿ ಮಾಡಿದರು. "ಆ ಬೀದಿನಾಯಿಗಳನ್ನು ಕೂಡಲೆ ಹಿಡಿಯುವ ಬದಲು ಈ ದೂರು ಕೊಟ್ಟವನು ನಾನೇ ಎಂದು ಖಾತ್ರಿ ಮಾಡಿಕೊಳ್ಳಲು ಪೌರರಕ್ಷಣೆಯ ಹೊಣೆ ಹೊತ್ತ ನಾಲ್ಕಾರು ಜನ ಪದೇ ಪದೇ ನಮ್ಮಲ್ಲಿ ಬಂದು ಹೋದರು. ನಾಯಿಗಳನ್ನು ಹಿಡಿಯುವ ಕೆಲಸ ಮಾತ್ರ ಆಗಲೇ ಇಲ್ಲ" ಎಂದು ಆ ಮಹನೀಯರು ಹೇಳುತ್ತಾರೆ. ಇತರ ರೋಗಗಳಿಗೆ ಹೋಲಿಸಿದರೆ ರೇಬಿಸ್‌ನಿಂದ ಸಾಯುವವರ ಸಂಖ್ಯೆ ಕಡಿಮೆ ಇರುವುದು ಬಹುಶಃ ಸರ್ಕಾರದ ಈ ನಿರಾತಂಕ ಮನೋಭಾವಕ್ಕೆ ಕಾರಣ ಇರಬಹುದು. ಏಕೆಂದರೆ ಪ್ರತಿವರ್ಷ ದೇಶದಲ್ಲಿ ಕ್ಷಯ ರೋಗದಿಂದ ಸಾಯುವವರ ಸಂಖ್ಯೆ ಸುಮಾರು ೫ ಲಕ್ಷ. ರೇಬಿಸ್‌ನಿಂದ ಸಾಯುವವರು ಸುಮಾರು ೧೧ ಸಾವಿರ ಮಾತ್ರ. ಆದರೆ ರೇಬಿಸ್ ಪೀಡಿತರನ್ನು ಉಪಚರಿಸುವುದು ತುಂಬಾ ಖರ್ಚಿನ ದಾರಿ. ಕ್ರಮವಾಗಿ [illegible] ರೋಗದ ಚಿಕಿತ್ಸೆಗೆ ಬೇಕಾದ ವ್ಯಾಕ್ಸೀನ್ (ಚುಚ್ಚುಮದ್ದು) ತಯಾರಿಸಲು [illegible] ದೊಡ್ಡ [illegible] ಬೇಕು. ಚಿಕಿತ್ಸೆ, ಉಪಚಾರಕ್ಕೆ ಸೂಕ್ತ ಸಿಬ್ಬಂದಿಬೇಕು. ಈ ರೋಗವನ್ನು ಸಂಪೂರ್ಣ ನಿರ್ಮೂಲನಮಾಡಿದರೆ ಈ ಎಲ್ಲಾ [illegible]ನ್ನೂ

ಸಿಬ್ಬಂದಿಯನ್ನು ಬೇರೆ ಆವಶ್ಯಕವಾದ ಕಡೆಯಲ್ಲಿ ಉಪಯೋಗಿಸಿಕೊಳ್ಳಬಹುದಲ್ಲ ಎಂದು ಡಾ. ನಾನಾವತಿಯವರು ವಿವರಿಸುತ್ತಾರೆ.

ಭಾರತದ ೧೯ ವ್ಯಾಕ್ಸೀನ್ ತಯಾರಿಕೆಯ ಕೇಂದ್ರಗಳಲ್ಲಿ ತಯಾರಿಸುವ ರೇಬಿಸ್ ನಿರೋಧಕ ಚುಚ್ಚುಮದ್ದಿನ ಪ್ರಮಾಣ, ಪ್ರಪಂಚದ ಎಲ್ಲಾ ದೇಶಗಳಲ್ಲಿ ತಯಾರಾಗುವ ಚುಚ್ಚುಮದ್ದಿನ ಒಟ್ಟು ಪ್ರಮಾಣಕ್ಕಿಂತಲೂ ಹೆಚ್ಚು. ಹೆಚ್ಚು ಹೆಚ್ಚು ಚುಚ್ಚುಮದ್ದಿನ (ವ್ಯಾಕ್ಸೀನ್) ಉತ್ಪಾದನೆಯಿಂದ ಮಾತ್ರ ರೇಬಿಸ್ ರೋಗದ ಪಿಡುಗನ್ನು ಹತೋಟಿಗೆ ತರಲು ಸಾಧ್ಯ ಎಂಬುದು ತಪ್ಪು ಕಲ್ಪನೆ ಎನ್ನುತ್ತಾರೆ ಡಾ. ಕೆ. ಹೆಚ್. ದವೆ ಇವರು ಹಾಫ್‌ಕಿನ್ಸ್ ಔಷಧ ಉತ್ಪಾದನಾ ಕೇಂದ್ರದ ನಿರ್ದೇಶಕರು. ಈ ಕೇಂದ್ರ ಮುಂಬಾಯಿಯಲ್ಲಿದೆ. “ನಾಯಿ ಅಥವಾ ಇನ್ನಾವುದೇ ಪ್ರಾಣಿಯನ್ನು ಮನೆಯಲ್ಲಿ ಸಾಕಿಕೊಳ್ಳಲು ಪರವಾನಿಗೆಯನ್ನು ಕಡ್ಡಾಯಮಾಡುವುದು ಮತ್ತು ಚಿತ್ರಹಿಂಸೆ ಇಲ್ಲದೆ ಎಲ್ಲಾ ಬೀದಿ ನಾಯಿಗಳನ್ನೂ ಮುಗಿಸುವುದು ಇವು ಹೆಚ್ಚು ಪರಿಣಾಮಕಾರಿ ಕ್ರಮಗಳು” ಎನ್ನುತ್ತಾರೆ ಡಾ. ದವೆ.

ಈಗ್ಗೆ ಸುಮಾರು ೧೫೦ ವರ್ಷಗಳ ಹಿಂದೆಯೇ ಸ್ಕ್ಯಾಂಡಿನೇವಿಯ ದೇಶಗಳಲ್ಲಿ ಬೀದಿನಾಯಿಗಳನ್ನು ನಿರ್ಮೂಲಮಾಡುವ ಕಾರ್ಯಕ್ರಮ ಯಶಸ್ವಿಯಾಯ್ತು. ೧೯೫೦ರ ದಶಕದಲ್ಲಿ ಮಲೇಷ್ಯಾ ದೇಶದಲ್ಲಿ ರೇಬಿಸ್ ರೋಗವನ್ನು ಸಂಪೂರ್ಣವಾಗಿ ತಡೆಗಟ್ಟಲಾಯ್ತು. ಆ ದೇಶದಲ್ಲಿ ಬೀದಿನಾಯಿಗಳ ನಿರ್ಮೂಲ ಮತ್ತು ಸಾಕುಪ್ರಾಣಿಗಳಿಗೆ ನಿರೋಧಕ ಚುಚ್ಚುಮದ್ದನ್ನು ಹಾಕಿಸಲೇಬೇಕೆಂದು ಕಡ್ಡಾಯಮಾಡಿದ್ದು ಈ ಸಾಧನೆಗೆ ಕಾರಣ “ನಾವೂ ಈ ಬಗ್ಗೆ ಜಾಗೃತರಾಗಿ ಇಂತಹ ನಿಯಮ ಜಾರಿಗೆ ತಂದು ಕಾರ್ಯಪ್ರವೃತ್ತರಾದರೆ ರೇಬಿಸ್‌ನಿಂದ ಪಾರಾಗುವುದು ಸಾಧ್ಯ. ಅದರಿಂದ ಈ ರೋಗದ ಚಿಕಿತ್ಸೆಗಾಗಿ ವೆಚ್ಚಮಾಡುತ್ತಿರುವ ಅಪಾರ ಹಣದ ಉಳಿತಾಯವೂ ಆಗುತ್ತದೆ. ಅಮೂಲ್ಯ ಜೀವಗಳ ರಕ್ಷಣೆಯೂ ಆಗುತ್ತದೆ. ನಾವು ಈ ನಿರ್ಧಾರಗಳನ್ನು ತಕ್ಷಣವೇ ತೆಗೆದುಕೊಳ್ಳಬೇಕು ತಡಮಾಡಿದಷ್ಟೂ ಹಾನಿ ಹೆಚ್ಚು” ಎಂಬುದು ಡಾ. ದವೆಯವರ ಅಭಿಮತ.

ವಿ. ಎಸ್. ಸೂರ್ಯನಾರಾಯಣ

ದುಷ್ಟರ ಸಂಗ ಮಾಡಲು ಬೇಡ. ಶ್ರೇಷ್ಠರ ಸಂಗ ಬಿಡಬೇಡಾ.

—ಪುರಂದರದಾಸರು

ಚದರಿಕೆ

‘ಚದರಿಕೆ’ ಎನ್ನುವ ಪದವೂ ನಮ್ಮಲ್ಲಿ ಅನೇಕರಿಗೆ ಹೊಸದಾಗಿ ಕಾಣಬಹುದು. ‘ಸದ್ಯ, ನೋಡ ಚದರುತ್ತಿದೆಯಪ್ಪಾ!’ ಎಂದು ಉತ್ಸಾಹದಿಂದ ಮನೆಬಿಟ್ಟು ಹೊರಗೆ ಹೊರಟವರು ದಾರಿಯಲ್ಲಿ ಹಾವಾಡಿಗನ ಆಟ ನೋಡುತ್ತಾ ನಿಂತು, ನಂತರ ಗುಂಪು ಚದುರಿದಾಗ ತಾವೂ ಮುನ್ನಡೆದು, ವಾಕಿಂಗ್ ಮುಗಿಸಿ ಮನೆಗೆ ಬಂದು ಚದರಿ ಬಿದ್ದಿದ್ದ ಪುಸ್ತಕಗಳನ್ನು ಜೋಡಿಸಿ ಎತ್ತಿಟ್ಟುಕೊಂಡು, ಒಂದನ್ನು ಹಿಡಿದುಕೊಂಡು ಓದುತ್ತಾ ಕುಳಿತಾಗಲೂ ‘ಚದರುವಿಕೆ’ ಎನ್ನುವ ಪದ ನೋಡಿ ‘ಏನೇನೋ ವಿಚಿತ್ರವಾದ ಭಾಷೆ ಬರೆಯುತ್ತಾರೆ ಈ ವಿಜ್ಞಾನಿಗಳು!’ ಎಂದು ಗೊಣಗಿಕೊಳ್ಳಬಹುದು ಬಹು ಮಂದಿ! ಆದರೂ ಚದರುವ ಕ್ರಿಯೆ ನಮ್ಮ ನಿತ್ಯ ಜೀವನದಲ್ಲಿ ಚಿರಪರಿಚಿತ, ನಾವದನ್ನು ಗಮನಿಸದಿದ್ದರೂ ವಿಜ್ಞಾನದಲ್ಲಂತೂ ಚದರುವಿಕೆ ವಿಶೇಷ ಪ್ರಾಮುಖ್ಯ ಪಡೆದಿದೆ.

ನಮ್ಮ ಮಿದುಳಿಗೆ ಪ್ರಪಂಚದೊಡನೆ ಸಂಬಂಧ ಕಲ್ಪಿಸುವ ಪಂಚೇಂದ್ರಿಯಗಳ ಪೈಕಿ ಪ್ರಮುಖವಾದವು ಕಣ್ಣು, ಕಿವಿ ಮತ್ತು ಚರ್ಮ. ಕಣ್ಣುಗಳನ್ನು ಪ್ರಚೋದಿಸಿ ವಸ್ತುಗಳ ಅರಿವುಂಟುಮಾಡುವುದು ಬೆಳಕು. ಬೆಳಕು ಎಂದರೆ ಏನು ಎನ್ನುವುದು ಬಹುಜನಕ್ಕೆ ಸರಿಯಾಗಿ ತಿಳಿಯದಿರಬಹುದು. ಆದರೂ ಬೆಳಕು ವಸ್ತುಗಳಿಂದ ಚದರಿಸಲ್ಪಡುತ್ತದೆ ಎಂದು ಎಲ್ಲರಿಗೂ ಅನುಭವವಿದೆ. ಬೆಳಕಿನ ಕಿರಣವೊಂದು ಕತ್ತಲ ಕೋಣೆಯಲ್ಲಿರುವ ಕನ್ನಡಿಯ ಮೇಲೆ ಬಿದ್ದರೆ ಅದು ಕನ್ನಡಿಯೊಳಗೆ ತೂರಿಹೋಗದೇ ವಾಪಸ್ಸಾಗುತ್ತದೆ ಎಂದು ಎಲ್ಲರಿಗೂ ಗೊತ್ತು. ಇದು ‘ಪ್ರತಿಫಲನ’. ಕನ್ನಡಿಯ ನುಣುಪಾದ ಮೈಗೆ ಬದಲಾಗಿ ಕೊಂಚ ಒರಟಾಗಿರುವ ಪದಾರ್ಥವನ್ನು ಇಟ್ಟರೆ (ಉದಾ: ಬೆಳ್ಳಿ ಅಥವಾ ಸ್ಟೀಲ್ ತಟ್ಟೆ) ಪ್ರತಿಫಲನ ಅಷ್ಟು ಸ್ಪಷ್ಟವಾಗಿ ತೋರಿಬರುವುದಿಲ್ಲ. ಬಿದ್ದ ಕಿರಣ ಪ್ರತಿಫಲನವಾಗುವಾಗ ಎಲ್ಲಾ ಕಡೆಗೂ ‘ಚದರಿ’ ಹೋದಂತೆ ಕಾಣಬರುತ್ತದೆ. ತಟ್ಟೆಗಿಂತಲೂ ಇನ್ನೂ ಒರಟಾಗಿರುವ ಪದಾರ್ಥವನ್ನಿಟ್ಟರೆ ‘ಚದರಿಕೆ’ ಇನ್ನೂ ಹೆಚ್ಚಾಗಿರುತ್ತದೆ. ಸಣ್ಣ ಕಿರಣಕ್ಕೆ ಬದಲಾಗಿ ದೊಡ್ಡ ಕಿಟಕಿಯನ್ನು ತೆಗೆದೇ ಬೆಳಕು ಬಿಟ್ಟರೆ ಅಲ್ಲಿಂದ ಬರುವ ಬೆಳಕು ಚದರುವುದು ಇನ್ನೂ ಹೆಚ್ಚು. ಅದ್ದರಿಂದಲೇ ಯಾವ ಜಾಗದಲ್ಲಿ ನಿಂತರೂ ಕೋಣೆಯ ಪದಾರ್ಥಗಳೆಲ್ಲಾ ಕಾಣುತ್ತವೆ. ಕೋಣೆಯಿಂದ ಹೊರಗಿನ ಪ್ರಪಂಚದಲ್ಲೂ ನಮಗೆ ಪದಾರ್ಥಗಳು ಕಾಣಿಸುವುದು ಈ ರೀತಿಯ ಬೆಳಕಿನ ಚದರಿಕೆಯಿಂದಲೇ.

ನಮ್ಮ ಎರಡನೆಯ ಜ್ಞಾನೇಂದ್ರಿಯವಾದ ಕಿವಿಗೆ ಪ್ರಪಂಚದ ಇರವನ್ನು ಅರಿಯಗೊಡುವುದು ಶಬ್ದ. ಬೆಳಕಿನಂತೆ ಶಬ್ದವೂ ಸರಳರೇಖೆಗಳಲ್ಲಿ ಸಂಚರಿಸಬಲ್ಲುದು (ಶಬ್ದ ಬಂದ ದಿಕ್ಕಿನ ಕಡೆ ನಾವು ಸರಿಯಾಗಿ ತಿರುಗಿ ನೋಡುತ್ತೇವೆ). ಬೆಳಕಿನಂತೆಯೇ ಶಬ್ದವೂ ಪದಾರ್ಥಗಳಿಂದ ಪ್ರತಿಫಲನಗೊಳ್ಳುತ್ತದೆ. ಬೆಟ್ಟದಿಂದ, ಬಾವಿಯಾಳದಿಂದ, ಬರಿದಾದ ದೊಡ್ಡ ಸಭಾಮಂದಿರದಿಂದ ನಾವು ಕಿರುಚಿದಂತೆಯೇ 'ಪ್ರತಿಧ್ವನಿ' ಬರುವುದು ಈ ಕಾರಣದಿಂದಲೇ. ಬೆಳಕಿಗೂ ಶಬ್ದಕ್ಕೂ ಇರುವ ಈ ಹೋಲಿಕೆಯನ್ನೇ ಇನ್ನೂ ಯೋಚಿಸಿದರೆ ಶಬ್ದವೂ ಚದರಿಕೆಗೆ ಒಳಗಾಗಬೇಕು. ಪ್ರಯೋಗಗಳಿಂದ ಇದನ್ನು ದೃಢೀಕರಿಸಬಹುದು. ಬಾಗಿಲ ಹಿಂದೆ ನಿಂತುಕೊಂಡು ನಾವು ಮಾತನಾಡಿದರೂ ಆಚೆಯಿರುವವರಿಗೆ ಕೇಳಿಬರುವುದು ಏಕೆಂದರೆ, ನೀರಿನ ಅಲೆಗಳು ಬಂಡೆಯೊಂದರಿಂದ ಚದರಿಸಲ್ಪಟ್ಟು ಅದನ್ನು ಸುತ್ತಿಕೊಂಡು ಮುಂದುವರೆಯುವಂತೆಯೇ, ಶಬ್ದದ ಅಲೆಗಳೂ ಬಾಗಿಲನ್ನು ಬಳಸಿಕೊಂಡು ಹೊರಬರುವುದರಿಂದ. ಶಬ್ದಕ್ಕೆ ಚದರಿಕೆಯಿಲ್ಲದಿದ್ದರೆ ನಮ್ಮ ವಾಸ್ತವಪ್ರಜ್ಞೆಗೆ ಎಷ್ಟೋ ಧಕ್ಕೆ ಬಂದಿರುತ್ತಿತ್ತು.

ನಮ್ಮ ಮೂರನೆಯ ಜ್ಞಾನೇಂದ್ರಿಯವಾದ ಚರ್ಮ ಸ್ಪರ್ಶದ ಮೂಲಕ ಪದಾರ್ಥಗಳ ಅರಿವು ಕೊಡುತ್ತದೆ. ಪದಾರ್ಥಗಳ ಗಾತ್ರ, ರಚನೆ (ಗಟ್ಟಿ, ಮೃದು ಇತ್ಯಾದಿ) ಇವನ್ನು ಕುರುಡರು ತಡವಿ ನೋಡಿಯೇ ತಿಳಿಯುತ್ತಾರಲ್ಲವೇ? ಉಳಿದವರಾದ ನಾವು ಕಣ್ಣಿದ್ದರೂ ಒಂದು ರೀತಿಯಲ್ಲಿ ಕುರುಡರೇ! ಎಷ್ಟೇ ಚುರುಕು ಕಣ್ಣಿನವರಾದರೂ ನಿಂತಿರುವ ನೆಲದ ಕೆಳಗೆ ಏನಿದೆಯೆಂದು ಕಾಣಬಲ್ಲರೇ? ಆದರೆ, ಕುರುಡರ ತಂತ್ರವನ್ನೇ ಉಪಯೋಗಿಸುವ ವಿಜ್ಞಾನಿಗಳು ನೆಲದ ಕೆಳಗಿರುವುದನ್ನೂ ಅರಿಯಬಲ್ಲರು! ಕುರುಡರು ಚರ್ಮದಿಂದ ಅರಿವು ಪಡೆದರೆ, ವಿಜ್ಞಾನಿಗಳು ಚರ್ಮಕ್ಕಿಂತಲೂ ಸೂಕ್ಷ್ಮಗ್ರಾಹಿಗಳಾದ ಸಲಕರಣೆಗಳಿಂದ ಅರಿಯುತ್ತಾರೆ. ನೆಲದಲ್ಲಿ ಒಂದು ಕಡೆ ಒಂದು ಸ್ಫೋಟವನ್ನು ಉಂಟುಮಾಡಿ ಆ ಜಾಗದಿಂದ ದೂರದಲ್ಲಿ ಅಲ್ಲಲ್ಲಿ ಮೊದಲೇ ಇಟ್ಟಿದ್ದ ಸಲಕರಣೆಗಳು ದಾಖಲು ಮಾಡಿಕೊಂಡ ಕಂಪನದ ಶಕ್ತಿ, ಲಕ್ಷಣಗಳನ್ನು ಅಭ್ಯಸಿಸಿ ನೆಲದ ಕೆಳಗೆ ಕಲ್ಲಿದೆಯೋ, ಕಲ್ಲಿದ್ದಲಿದೆಯೋ ಎಂದು ತಿಳಿಯಬಲ್ಲರು! ಸ್ಫೋಟದಿಂದ ಉಂಟಾದ ಕಂಪನ ಎಲ್ಲಾ ದಿಕ್ಕುಗಳಿಗೂ ಹರಡುವಾಗ ಮಣ್ಣಿನ ಕೆಳಗಿನ ಭೂಮಿಯೊಳಗೂ ಪ್ರಸರಿಸುತ್ತದೆ. ಅಲ್ಲಿ ಇರುವ ಕಲ್ಲು, ಕಬ್ಬಿಣ ಇತ್ಯಾದಿಗಳು ತಮತಮಗೆ ವಿಶಿಷ್ಟವಾದ ರೀತಿಯಲ್ಲಿ ಈ ಕಂಪನಗಳನ್ನು ಚದರಿಸುತ್ತವೆ. ಚದರಿಸಲ್ಪಟ್ಟು ಪುನಃ ಮೇಲಕ್ಕೆ ಬಂದ ಕಂಪನಗಳು ನೆಲದಮೇಲಿಟ್ಟಿರುವ

ಸಲಕರಣೆಗಳನ್ನು ಪ್ರಭಾವಿತಗೊಳಿಸಿ, ಆ ಮೂಲಕ ತಮ್ಮ ಶಕ್ತಿಯನ್ನು ದಾಖಲುಮಾಡಿ ಹೋಗುತ್ತವೆ. ಇಂತಿಂತಹ ಪದಾರ್ಥಗಳು ಇಂತಿಂತಹ ರೀತಿಯಲ್ಲಿ ಕಿರಣಗಳನ್ನು ಚೆಲ್ಲುತ್ತವೆ ಎಂದು ಮೊದಲೇ ನಮಗೆ ಗೊತ್ತಿರುವುದರಿಂದ ಒಂದು ಸ್ಥಳದಲ್ಲಿ ಕಂಡುಬಂದ ಗುಣ, ಲಕ್ಷಣಗಳನ್ನು ಅಭ್ಯಸಿಸಿದಾಗ ಆ ಜಾಗದ ಬಳಿಯಿರುವ ಮುಖ್ಯ ಪದಾರ್ಥಗಳಿವೆಂದು ಹೇಳಬಹುದು. ಗಣಿಗಳ ಪತ್ತೆ, ಖನಿಜಗಳ ಶೋಧನೆ, ತೈಲಾನ್ವೇಷಣೆ ಇತ್ಯಾದಿಗಳಲ್ಲಿ ಬಹುವಾಗಿ ಉಪಯೋಗಿಸಲ್ಪಡುತ್ತಿರುವ, ಪ್ರಪಂಚದಲ್ಲೆಲ್ಲಾ ಪ್ರಖ್ಯಾತವಾಗಿರುವ ಆರ್ಥಿಕ ಚಟುವಟಿಕೆಗಳ ಜನಕ ಎಂದರೆ ಹೀಗೆ 'ಅಲೆ'ಯ ಚಮತ್ಕಾರ!

ಬೆಳಕು ಎಲ್ಲಾ ಪದಾರ್ಥಗಳಲ್ಲಿ ತೂರಿಕೊಂಡು ಹೋಗುತ್ತದೆ. ಹಾಗೆ ಹೋದಾಗ ಬೇರೊಂದು ಪಥದಿಂದ ಬರುತ್ತದೆ (ವಕ್ರೀಭವನ). ಸಾಮಾನ್ಯವಾಗಿ ನೇರವಾಗಿಯೂ ಅಗಲವಾಗಿ ಹರಡಿಕೊಳ್ಳುವುದೂ ಉಂಟು. ಇದೂ ಒಂದು ರೀತಿಯ ಚಮತ್ಕಾರವೇ. ವಸ್ತುಗಳೆಲ್ಲಾ ಪರಮಾಣುಗಳಿಂದ ಆಗಿವೆ. ಪರಮಾಣುಗಳಲ್ಲಿ ವಿದ್ಯುತ್ಕಣಗಳಿವೆ ಎಂದು ನಮಗೆ ತಿಳಿದಿರುವುದರಿಂದಲೂ ಬೆಳಕು ಎಂದರೆ ವಿದ್ಯುತ್ಕಾಂತೀಯ ಅಲೆಗಳು ಎಂದು ಗೊತ್ತಾಗಿಯೂ ನೂರು ವರ್ಷಗಳಾಗಿರುವುದರಿಂದಲೂ ಬೆಳಕಿನ ಚಮತ್ಕಾರಕ್ಕೆ ಕಾರಣ ಈ ವಿದ್ಯುದಲೆ-ವಿದ್ಯುತ್ಕಣಗಳು ಒಂದರೊಡನೊಂದು ಹೇಗೆ ವ್ಯವಹರಿಸುತ್ತವೆ ಎನ್ನುವುದೇ. ಈ ವ್ಯವಹಾರಗಳು ಹೇಗಿರಬೇಕು ಎಂದು ಹೇಳಬಲ್ಲ ಲೆಕ್ಕಾಚಾರಗಳು ಈಗಾಗಲೇ ಬಹಳ ನಿಖರವಾಗಿದ್ದು ಬೆಳಕಿನ ಚಮತ್ಕಾರಗಳ ಎಲ್ಲಾ ವಿವರಗಳನ್ನೂ ವಿವರಿಸಬಲ್ಲವು. ಲೆಕ್ಕಾಚಾರಗಳ ಮೂಲ ಚಿತ್ರ ನೀರಿನ ಅಲೆಗಳು ಬಂಡೆಯೊಂದರಿಂದ ಚದುರಿಸಲ್ಪಡುವಂತಹುದೇ!

ಇದೇ ತೃಪ್ತಿಕರವೆಂದರೆ ಇನ್ನೂ ಸಂತೋಷದ ವಿಷಯವೆಂದರೆ ಇದೇ ಶಾಸ್ತ್ರದಿಂದಲೇ ಬೆಳಕಿನ ಇನ್ನೂ ಅನೇಕ ಘಟನೆಗಳನ್ನು ವಿವರಿಸಲಾಗಿರುವುದು. ಆಕಾಶ ಮತ್ತು ಸಾಗರಗಳ ನೀಲಿ ಬಣ್ಣ, ಬೆಳಕು ಸಣ್ಣ ಕಣಗಳಿಂದ ಚದುರುವಾಗಿನ ಒಂದು ವಿಶಿಷ್ಟ ರೂಪ. ಏಳು ಬಣ್ಣದ ಕಾಮನ ಬಿಲ್ಲು ಉಂಟಾಗುವುದೂ ಸೂರ್ಯನ ಬೆಳಕು ಮಳೆಹನಿಗಳ ಮೂಲಕ ಹಾಯ್ದು ಬರುವಾಗ ಚದರುವ ವಿಶಿಷ್ಟತೆಯಿಂದ. ಬೆಳಕು ಅಶ್ರಗವೊಂದರ ಮೂಲಕ ಹಾಯ್ದು ಬರುವಾಗ ಏಳು ವರ್ಣಗಳ 'ರೋಹಿತ'ವಾಗುವುದನ್ನು ವರ್ಣಪಟಲ ಪ್ರಯೋಗಶಾಲೆಯಲ್ಲಿ ತೋರಿಸಬಹುದು. ಸೂರ್ಯನ ಬೆಳಕು ನಿಜವಾಗಿ ಅನೇಕ ರೀತಿಯ (ಅಲೆಯುದ್ದಗಳ) ವಿದ್ಯುತ್ಕಾಂತೀಯ ಅಲೆಗಳ ಸಮೂಹ. ಈ ಸಮೂಹ

ಗಾಳಿಯಲ್ಲಿ ಒಟ್ಟಿಗೇ ಪ್ರವಹಿಸಿದರೂ ಗಾಜು ಮುಂತಾದ ಪದಾರ್ಥಗಳ ಮೂಲಕ ಹಾಯುವಾಗ ಅಲ್ಲಿನ ಪರಮಾಣುಗಳ ಜೊತೆ ತಮ್ಮ ಅಲೆಯುದ್ದಕ್ಕೆ ತಕ್ಕಂತೆ ವ್ಯವಹರಿಸುತ್ತವೆ. ವಿವಿಧ ಅಲೆಯುದ್ದದ ಅಲೆಗಳು ವಿವಿಧ ಶಕ್ತಿಯಿಂದ ಚದರಿಸಲ್ಪಡುತ್ತವೆ. ಆದ್ದರಿಂದಲೇ ಬಣ್ಣಗಳು ಬೇರೆಬೇರೆಯಾಗಿ ಹೊರ ಬರುತ್ತವೆ.

ರೋಹಿತದ ಈ ತಂತ್ರವನ್ನು ಇನ್ನೂ ಪರಿಷ್ಕರಿಸಿರುವ ವಿಜ್ಞಾನಿಗಳು ಇದನ್ನು ಸಾಧನವಾಗಿ ಬಳಸಿ ಸಣ್ಣ ಕಣಗಳ ಮತ್ತು ಅಣುಗಳ ರಚನೆಗಳನ್ನೂ ಅರಿಯಬಲ್ಲರು. ಶುದ್ಧ ವರ್ಣದ ಒಂದು ಬೆಳಕಿನ ಕಿರಣವನ್ನು ಅನಿಲ ಅಥವಾ ದ್ರವ ರೂಪದಲ್ಲಿರುವ ಪದಾರ್ಥವೊಂದರೊಳಗೆ ಹಾಯಿಸಿ ಅದು ಹೇಗೆ ಚದರಿಸಲ್ಪಡುತ್ತದೆ ಎಂದು ನೋಡಿಯೇ ಆ ಪದಾರ್ಥದ ಅಣುಗಳ ಬೆಸುಗೆ ಯಾವ ರೀತಿ ಇದೆ ಎಂದು ಹೇಳುವ ಸಾಮರ್ಥ್ಯ ಪಡೆದಿದ್ದಾರೆ. ಈ ವಿಧಾನವನ್ನು ರಸಾಯನ ವಿಜ್ಞಾನದಲ್ಲಿ ಬಹಳವಾಗಿ ಉಪಯೋಗಿಸುತ್ತಾರೆ. ವಾತಾವರಣದಲ್ಲಿಯ (ನೀರು ಮತ್ತು ಗಾಳಿಯಲ್ಲಿಯ) ಕಲ್ಮಷಗಳನ್ನು ಕಂಡುಹಿಡಿಯುವುದರಲ್ಲಿ, ಕಾರ್ಖಾನೆಗಳಲ್ಲಿ ಪದಾರ್ಥಗಳ ಶುದ್ಧತೆಯ ವಿಶ್ಲೇಷಣೆಯಲ್ಲಿ ಇದು ಸಾಮಾನ್ಯವಾಗಿದೆ. ಇತ್ತೀಚೆಗೆ ಪಾಶ್ಚಾತ್ಯ ದೇಶಗಳಲ್ಲಿ ಪೋಲೀಸ್ ತನಿಖೆಗಳಲ್ಲೂ ನಿಖರತೆ ನೀಡುವ ಅಗತ್ಯ ಕ್ರಮಗಳಲ್ಲಿ ಒಂದಾಗುತ್ತಿದೆ.

ಬೆಳಕನ್ನು ಚದರಿಸಿದಾಗ ಅದು ಹೇಗೆ ದಿಕ್ಕು ಬದಲಿಸುತ್ತದೆ, ಹೇಗೆ ಹರಡಿಕೊಳ್ಳುತ್ತದೆ ಎನ್ನುವುದೇ ಇಷ್ಟು ಸಹಾಯಕರವಾದರೆ, ಅದು ಪೂರ್ಣವಾಗಿ ವ್ಯಕ್ತಿತ್ವವನ್ನೇ ಬದಲಿಸಿಕೊಳ್ಳಬಹುದು ಎನ್ನುವ ವಿಷಯ ಮತ್ತೆಷ್ಟು ಉಪಯೋಗಕಾರಿ ಎಂದು ಹೇಳಬೇಕಿಲ್ಲ. ಇಂತಹ ವ್ಯಕ್ತಿತ್ವ ಬದಲಾವಣೆ ಸಾಧ್ಯ ಎಂದೂ ತಿಳಿದಿರಲಿಲ್ಲ, ನಮ್ಮ ದೇಶದ (ಹಾಗೂ ಕರ್ನಾಟಕದ) ವಿಜ್ಞಾನಿ ಸರ್ ಸಿ. ವಿ. ರಾಮನ್‌ರು ಕಂಡುಹಿಡಿಯುವವರೆಗೂ! ಒಂದು ವರ್ಣದ ಬೆಳಕು ಪರಮಾಣುಗಳಿಂದ ಚದರಿಸಲ್ಪಡುವಾಗ ಕೆಲವೊಮ್ಮೆ ಬೇರೆಯ ವರ್ಣವೇ ಆಗಿ ಹೋಗುತ್ತದೆ ಎನ್ನುವುದನ್ನು ತೋರಿಸಿದರು ರಾಮನ್. ಇದಕ್ಕಾಗಿ ಅವರಿಗೆ ೧೯೩೦ರಲ್ಲಿ ಭೌತಶಾಸ್ತ್ರದ ನೊಬೆಲ್ ಬಹುಮಾನ ಸಿಕ್ಕಿತು. ಈಗ 'ರಾಮನ್ ಪರಿಣಾಮ' ಎಂದು ಪ್ರಖ್ಯಾತವಾಗಿರುವ ಈ ವಿಶಿಷ್ಟ ಚದರುವಿಕೆ ಅಣು ಮತ್ತು ಪರಮಾಣುಗಳ ಬಾಂಧವ್ಯ ಮತ್ತು ರಚನೆ ತಿಳಿಯುವಲ್ಲಿ ಅತ್ಯವಶ್ಯ ಸಾಧನವಾಗಿದೆ.

ಇದುವರೆಗೂ ಬೆಳಕು, ಶಬ್ದ, ಕಂಪನ ಇತ್ಯಾದಿ ಶಕ್ತಿಯ ಸ್ವರೂಪಗಳು

ಚದರುವುದನ್ನೇ ಕುರಿತು ಮಾತನಾಡಿದ್ದೇವೆ. ಅಂದ ಮಾತ್ರಕ್ಕೆ ಚದುರಿಕೆ ಶಕ್ತಿ ಪ್ರಸಾರಕ್ಕೇ ಸೀಮಿತವಾಗಿದೆಯೆಂಬ ಅಭಿಪ್ರಾಯ ನಿಮಗೆ ಬಂದಿದ್ದರೆ ಅದು ತಪ್ಪು. ಪದಾರ್ಥಗಳೂ ಚದರುತ್ತವೆ ಎನ್ನುವುದು ಸಾಮಾನ್ಯ ಅನುಭವದಿಂದ ಗೊತ್ತು (ಮೋಡಗಳು ಚದರುವುದು). ಹಾಗೆಯೇ ವಸ್ತುಕಣಗಳೂ ಚದುರಿಸಲ್ಪಡಬಲ್ಲುವು. ಕಣಗಳು ಸಣ್ಣಗಾದ ಹಾಗೆಲ್ಲಾ ಅವುಗಳ ಅಣು, ಪರಮಾಣುಗಳ ಅಂಶ ಪ್ರಮುಖವಾಗತೊಡಗುತ್ತದೆ. ಅಂತಹ ಸಣ್ಣ ಕಣಗಳನ್ನು ವಸ್ತುವಿನ ಮೇಲೆ ಎಸೆದರೆ ಅವು ವಸ್ತುವಿನ ಮೇಲ್ಮೈ ಮೇಲೆ ಮಾತ್ರ ತಾಗುವ ಬದಲು ಒಳಗೂ ತೂರಿಹೋಗಿ ಅಲ್ಲಿನ ಪರಮಾಣುಗಳ ಪ್ರಭಾವಕ್ಕೆ ಒಳಗಾಗಬಲ್ಲುವು. ಆಗ ಅವುಗಳಿಂದ ಚದುರಿಸಲ್ಪಟ್ಟು ದಿಕ್ಕು ಬದಲಾಯಿಸಿ ಮುಂದುವರಿಯುವುದು ಸಾಮಾನ್ಯ. ಆದ್ದರಿಂದ ಸಣ್ಣ ಕಣಗಳು ಬಾಗುವ, ಚದರುವ ರೀತಿಯನ್ನು ಅಭ್ಯಸಿಸಿದರೆ ಆಗ ಅವುಗಳ ಮೇಲೆ ಪ್ರಭಾವ ಬೀರುವ ಶಕ್ತಿಗಳು ಎಂತಹವು, ಯಾವ ಗುಣ, ಲಕ್ಷಣಗಳನ್ನು ಹೊಂದಿವೆ ಎನ್ನುವುದನ್ನು ಬಹುಮಟ್ಟಿಗೆ ನಿರ್ಧರಿಸಬಹುದು. ಸೂಕ್ಷ್ಮದರ್ಶಕಗಳಿಗೂ ಕಾಣಬರದ ಅಣು, ಪರಮಾಣುಗಳ ಬಗ್ಗೆ ನಮಗೆ ತಿಳಿದುಬಂದಿರುವುದು ಬಹಳ ಮಟ್ಟಿಗೆ ಇಂತಹ ಚದುರಿಕೆಯ ವಿಶ್ಲೇಷಣೆಯಿಂದಲೇ!

ಪರಮಾಣುಗಳಲ್ಲಿ ವಿದ್ಯುತ್ಕಣಗಳಿವೆ ಎಂದೇನೋ ೧೮೯೭ರಲ್ಲೇ ತಿಳಿದಿತ್ತು. ಆದರೆ ಅವು ಹೇಗೆ ವಿತರಣೆಯಾಗಿವೆ ಎಂದು ಗೊತ್ತಿರಲಿಲ್ಲ. ಪರಮಾಣು ಎನ್ನುವುದು ಬಹುಶಃ 'ರವೆ ಉಂಡೆ'ಯಂತೆ ಇರಬಹುದು ಎನ್ನಿಸಿತ್ತು. ಉಂಡೆಯ ರವೆಯಂತೆ ಧನ ವಿದ್ಯುತ್ತು ಹರಡಿಕೊಂಡಿದ್ದು, ಉಂಡೆಯಲ್ಲಿ ಅಲ್ಲಲ್ಲಿ ದ್ರಾಕ್ಷಿಗಳಿರುವಂತೆ ಋಣ ವಿದ್ಯುತ್ಕಣಗಳಾದ ಎಲೆಕ್ಟ್ರಾನುಗಳು ಹುದುಗಿರುತ್ತವೆ ಎಂದು ನಂಬಿದ್ದರು ವಿಜ್ಞಾನಿಗಳು. ಆದರೆ ೧೯೧೧ರಲ್ಲಿ ರುದರ್‌ಫರ್ಡ್ ಎಂಬ ವಿಜ್ಞಾನಿ ಈ ಚಿತ್ರವನ್ನು ಅಳಿಸಿಹಾಕಿದರು. ಪರಮಾಣುವಿನ ಧನ ವಿದ್ಯುತ್ತೆಲ್ಲಾ ಉಂಡೆಯಂತೆ ವಿಶಾಲವಾಗಿ ಹರಡಿರುವ ಬದಲು ಉಂಡೆಯ ಗಾತ್ರಕ್ಕಿಂತ (ಪರಮಾಣುವಿನ ಗಾತ್ರಕ್ಕಿಂತ) ಎಷ್ಟೋ ಚಿಕ್ಕದಾದ ಬಿಂದುವಿನಷ್ಟು ಜಾಗದಲ್ಲೇ ಒತ್ತಾಗಿ ಅಡಕವಾಗಿದೆ ಎಂದರು. ಪರಮಾಣುವಿಗೆ ಸೌರವ್ಯೂಹದ ಚಿತ್ರ ಕೊಟ್ಟರು. ಮಿಕ್ಕ ವಿಜ್ಞಾನಿಗಳೆಲ್ಲ ಎದುರಾಡದೇ ಈ ಹೊಸ ಚಿತ್ರವನ್ನು ಒಪ್ಪಿಕೊಳ್ಳಲೇ ಬೇಕಾಯಿತು! ಕಾರಣ, ರುದರ್‌ಫರ್ಡರು ತಮ್ಮ ವಾದಕ್ಕೆ ಕೊಟ್ಟ ಪುರಾವೆ ಕಣಗಳ ಚದುರಿಕೆಯ ವಿಶಿಷ್ಟ ರೀತಿ! ಒಂದು ರೀತಿಯ ವಿದ್ಯುತ್ಕಣಗಳನ್ನು ವಸ್ತುಗಳ ಮೇಲೆ ಎಸೆದು ಅವು ಚದರುವ ರೀತಿಯನ್ನು ದಾಖಲು ಮಾಡಿಕೊಂಡ

ರುದರ್‌ಫರ್ಡ್ ಅನಂತರ ಅದನ್ನು ಅಭ್ಯಸಿಸಿದಾಗ ಹಳೆಯ ಚಿತ್ರವನ್ನು ಅಳಿಸಿ ಹಾಕದೇ ವಿಧಿಯಿರದಂತಾಯಿತು. ಉಂಡೆಯಂತೆ ಇದ್ದರೆ ಚದರಬೇಕಾಗಿದ್ದ ರೀತಿಗಿಂತಲೂ ಬಹಳ ಬೇರೆಯಾಗಿದ್ದ ಚದರಿಕೆ ತೋರಿಬಂದದ್ದರಿಂದ 'ಪರಮಾಣು ಕೇಂದ್ರ ವಿಜ್ಞಾನ'ದ ಬಾಗಿಲು ತೆರೆಯಿತು. ಆ ಮೂಲಕ ಇಂದು ಪ್ರಚಂಡ ಶಕ್ತಿಯ ಬಾಂಬ್‌ಗಳಿಂದ, ಅಖಂಡ ಶಕ್ತಿಯ ಆಮಿಷ ತೋರಿಸುತ್ತಿರುವುದರಿಂದ ಪ್ರಪಂಚದಲ್ಲೆಲ್ಲೂ ಪ್ರಾಮುಖ್ಯ ಪಡೆಯುವಂತಾಗಿದೆ.

ಇದಾದ ಸುಮಾರು ಹತ್ತು ವರ್ಷಗಳ ತರುವಾಯ ಎಲೆಕ್ಟ್ರಾನ್‌ಗಳನ್ನು ಉಪಯೋಗಿಸಿ ನಡೆಸಿದ ಪ್ರಯೋಗವೊಂದರಿಂದ ಆಧುನಿಕ ಭೌತವಿಜ್ಞಾನದ ಮತ್ತೊಂದು ಬಾಗಿಲು ತೆರೆಯುವಂತಾಯಿತು. ಎಲೆಕ್ಟ್ರಾನ್‌ಗಳು ಸ್ಫಟಿಕಗಳಿಂದ ಚದರಿದ ರೀತಿಯನ್ನು ಅರ್ಥಮಾಡಿಕೊಳ್ಳಬೇಕಾದರೆ ಎಲೆಕ್ಟ್ರಾನ್‌ಗಳು ಅಲೆಗಳು ಎಂದೇ ನಿರ್ಧರಿಸಬೇಕಾಯಿತು! ಆದರೂ ಎಲೆಕ್ಟ್ರಾನ್‌ಗಳು ಕಣಗಳು ಎನ್ನುವುದೂ ನಿಸ್ಸಂದೇಹವಾಗಿ ಸಿದ್ಧವಾಗಿತ್ತು ಆ ಮೊದಲೇ. ಹೀಗಾಗಿ ಉಭಯ ಸಂಕಟ ಒದಗಿ ವಿಜ್ಞಾನವನ್ನೇ ಕಲಕಿಬಿಟ್ಟಿತು. ಕೊನೆಗೆ, ಎಷ್ಟೋ ಪ್ರತಿಭೆಯಿಂದ ಸಮಾಧಾನಕರ ಉತ್ತರ ಕಂಡುಹಿಡಿಯಬೇಕಾಯಿತು. ಕಣ ಮತ್ತು ಅಲೆ ಎರಡೂ ನಿಜ, ಎರಡೂ ಒಂದೇ ಭೌತಸತ್ಯದ ಎರಡು ಮುಖಗಳು ಮಾತ್ರ ಎಂದು ಒಪ್ಪಿಕೊಳ್ಳಬೇಕಾಯಿತು. ಸಾಮಾನ್ಯ ಅನುಭವಕ್ಕಿಂತ ತೀರಾ ಭಿನ್ನವಾದ ರೀತಿ, ನೀತಿಗಳು ಪರಮಾಣುಲೋಕದಲ್ಲಿ ಆಳುತ್ತಿವೆ ಎಂಬ ಮಹತ್ತರ ಸತ್ಯ ಬೆಳಕಿಗೆ ಬಂತು. ಭೌತ ಸತ್ಯದ ಅರಿಯುವಿಕೆಯಲ್ಲಿ ಹೀಗೆ ಅಭೂತಪೂರ್ವ ಕ್ರಾಂತಿಯುಂಟುಮಾಡಿದ್ದು ನಾವು ಮಾತನಾಡುತ್ತಿರುವ ಈ 'ಚದರಿಕೆ'ಯೇ!.

ಡಾ|| ವಿಜಯ್ ಶ್ರೀಧರ್
ಅಮೆರಿಕ ಸಂಯುಕ್ತ ಸಂಸ್ಥಾನ

ಜನಾಂಗ ಮತ್ತು ವ್ಯಕ್ತಿತ್ವ ಯಾವಾಗಲೂ ಸಂಚಲನದಲ್ಲಿರುತ್ತವೆ. ಹೊಸ ಎತ್ತರಕ್ಕೆ ಹೋದಂತೆ ಹೊಸ ಕ್ಷಿತಿಜ ಹಾಗೂ ಹೊಸ ತೇಜ ಗೋಚರವಾಗುವುದು. ಹಳೆಯದನ್ನು ಮರೆತು ಹೊಸದರ ಬೆಂಬತ್ತಿ ತಿರುಗುವುದೇ ಪ್ರಗತಿ ಎಂಬ ಮಂತ್ರದ ನಿಜವಾದ ಅರ್ಥ.

—ಚೆವಿಸ್

ದಂತರಕ್ಷಣೆ

ಸಾಮಾನ್ಯ ಜನತೆಯನ್ನು ಕಾಡುವ ಲಘುರೋಗಗಳಲ್ಲಿ ಹಲ್ಲುನೋವು ಸರ್ವೇಸಾಧಾರಣ. ಮುಂದುವರಿದಿರುವ ದೇಶಗಳಲ್ಲಿ ಇರಲಿ, ಭಾರತದಲ್ಲಿ ಕೂಡ ದಂತವೈದ್ಯರು ಹೆಚ್ಚಾಗಿಯೇ ಇದ್ದಾರೆ. ಜನರ ದಂತಾರೋಗ್ಯದ ವಿಷಯದಲ್ಲಿ ಅವರನ್ನು ಎಚ್ಚರಿಸುವುದಲ್ಲದೆ ದಂತರೋಗಗಳನ್ನು ಕೂಡಲೆ ಚಿಕಿತ್ಸಿಸುವ ಸೌಕರ್ಯವಿದೆ. ಆದರೂ ದಂತದ ಅನಾರೋಗ್ಯ ಸ್ಥಿತಿಗಳಿಂದ ಜನರು ನರಳುವುದು ಕಡಿಮೆ ಆಗಿಲ್ಲ. ವಿಸ್ಮಯವಾಗಿ ಅದು ಬಹುಶಃ ಹೆಚ್ಚುತ್ತಲೇ ಇದೆ ಎನ್ನಿಸುತ್ತದೆ. ನಿಜವಾಗಿಯೇ ಹೆಚ್ಚುತ್ತಿದೆಯೋ ಅಥವಾ ಹಾಗೆ ಭಾವನೆ ಉಂಟಾಗುತ್ತದೆಯೋ ಖಂಡಿತವಾಗಿ ಹೇಳಲು ಸಾಧ್ಯವಿಲ್ಲ. ವಿಷಯಗಳ ಸಂಗ್ರಹಣೆ, ಪ್ರಕಟಣೆ ಇವುಗಳ ಬಗ್ಗೆ ಪಾಶ್ಚಾತ್ಯ ದೇಶಗಳಲ್ಲಿಯಂತೆ ಅಂಕಿಅಂಶಯುಕ್ತ ವ್ಯಾಸಂಗಗಳು ನಮ್ಮಲ್ಲಿ ಇನ್ನೂ ಅಷ್ಟಾಗಿ ಬಳಕೆಗೆ ಬಂದಿಲ್ಲದಿರುವುದು ಈ ಸಂದಿಗ್ಧಕ್ಕೆ ಕಾರಣ. ಹಲವಾರು ವರ್ಷಗಳಿಂದ ಹಲವಾರು ಕಾರಣಗಳಿಗಾಗಿ ಜನ ಹಳ್ಳಿ ಜೀವನವನ್ನು ಬಿಟ್ಟು ಪಟ್ಟಣಗಳಿಗೆ ವಲಸೆ ಬಂದಿದ್ದು ಪಟ್ಟಣಗಳಲ್ಲಿ ಜನಸಂಖ್ಯೆ ವಿಪರೀತವಾಗಿ ಏರುವುದೂ ದಂತವೈದ್ಯ ಕಲಿತ ಅನೇಕ ವೈದ್ಯರು ಪಟ್ಟಣಗಳಲ್ಲಿ ವಿಶೇಷವಾಗಿ ವೈದ್ಯವೃತ್ತಿ ನಡೆಸುತ್ತಿರುವುದೂ ಈ ದಿನಗಳ ಪರಿಸ್ಥಿತಿ. ಆದ್ದರಿಂದ ಮುಂಚೆಗಿಂತ ಹೆಚ್ಚಾಗಿ ಜನ ದಂತವೈದ್ಯರ ಹತ್ತಿರ ಚಿಕಿತ್ಸೆಗೆ ಹೋಗುವುದಂತೂ ನಿಜ. ಬಹುಶಃ ದಂತರೋಗಗಳೂ ಹೆಚ್ಚು ವ್ಯಾಪಕವಾಗಿ ಜನತೆಯನ್ನು ಕಾಡುತ್ತಿರಬಹುದು. ಭಾರತದ ವಯಸ್ಕ ಸಂಖ್ಯೆಯಲ್ಲಿ ಶೇಕಡ ೪೦ ಜನಕ್ಕೆ ಸ್ವಾಭಾವಿಕ ಹಲ್ಲು ಇಲ್ಲ ಎಂದು ಒಂದು ಅಂದಾಜಿದೆ. ಬಹುಶಃ ಇದು ತಪ್ಪು ಅಂದಾಜು ಎನ್ನಿಸುತ್ತೆ. ಹಾಗೆಯೇ ಶಾಲಾ ವಿದ್ಯಾರ್ಥಿಗಳಲ್ಲಿ ಶೇಕಡ ೯೦ ಮಕ್ಕಳಲ್ಲಿ ಹಲ್ಲಿನ ಅನಾರೋಗ್ಯಸ್ಥಿತಿ ಕಂಡು ಬರುತ್ತದೆಂದು ಅದೇ ಉಲ್ಲೇಖನದಲ್ಲಿ ತಿಳಿದು ಬರುತ್ತದೆ. ಈ ಅಂದಾಜು ಹೆಚ್ಚು ಎನ್ನಿಸಿದರೂ ಪೊಟ್ಟು ಹಲ್ಲು, ನೋವಿದ ಹಲ್ಲು, ಹುಳುಕುಹಲ್ಲು, ವಸಡಿನಲ್ಲಿ ತೀವ್ರ ರಕ್ತ, ಮುಂತಾದ ಸ್ಥಿತಿಗಳು ಕಂಡು ಬರುವುದು ಸಾಮಾನ್ಯವಾದ ಪರಿಸ್ಥಿತಿಯೆನ್ನುವುದರಲ್ಲಿ ಸಂಶಯವಿಲ್ಲ. ಚಿಕಿತ್ಸೆ ಇಲ್ಲದೆ ಮುಂದುವರಿದರೆ ನಡುವಯಸ್ಸಿನ ಒಳಗೆ ಅನೇಕ ಸಂದರ್ಭಗಳಲ್ಲಿ ಹಲ್ಲುಗಳನ್ನು ಕಳೆದುಕೊಳ್ಳಬಹುದಾದ ಪರಿಸ್ಥಿತಿ ಬರುವುದರಲ್ಲಿ ಅನುಮಾನವಿಲ್ಲ.

೧೯೮೨ನೇ ಮಾರ್ಚ್ ತಿಂಗಳ ರೀಡರ್ಸ್ ಡೈಜೆಸ್ಟಿನ "ನೊ ಮೋರ್ ಟೂತ್ ಏಕ್" ಲೇಖನದ ಅನುವಾದ.

"ದಂತಾರೋಗ್ಯ ಪರಿಸ್ಥಿತಿ ಹದಗೆಟ್ಟಿದೆ ಮತ್ತು ಇನ್ನೂ ತೀವ್ರವಾಗಿ ಕೆಟ್ಟು ಹೋಗುತ್ತಿದೆ" ಎಂದು ಇಂಟರ್‌ನ್ಯಾಷನಲ್ ಕಾಲೇಜ್ ಆಫ್ ಡೆಂಟಿಸ್ಟ್ಸ್‌ನ ಭಾರತ ಶಾಖೆಯ ಅಧ್ಯಕ್ಷ ಡಾ| ಕೇಕಿಮಿಸ್ತ್ರಿ ಅವರು ಹೇಳುತ್ತಾರೆ.

ಇಂಥ ದುಃಸ್ಥಿತಿಗೆ ಕಾರಣಗಳು ಮುಖ್ಯವಾಗಿ ಎರಡು : ಅಜ್ಞಾನ ಮತ್ತು ಅವಕ್ಕಿಂತ ಹೆಚ್ಚಾಗಿ ಸಾರ್ವತ್ರಿಕ ಅಲಕ್ಷ್ಯ. ಹಲ್ಲು ರೋಗಗ್ರಸ್ತವಾಗುವಲ್ಲಿ ಬಹುಸಾಮಾನ್ಯವಾದ ಮೊದಲ ಸೂಚನೆ ವಸಡಿನಲ್ಲಿ ರಕ್ತ ಬರುವುದು, ಬ್ರಷ್ಷಿನಲ್ಲಿ ಹಲ್ಲು ಉಜ್ಜಿದಾಗ ಬ್ರಷ್ಷು ರಕ್ತಮಯವಾಗುವುದು ಕಂಡುಬಂದರೂ ವ್ಯಕ್ತಿ ಅದನ್ನು ಗಣನೆಗೇ ತೆಗೆದುಕೊಳ್ಳುವುದಿಲ್ಲ. "ಪರಿಸ್ಥಿತಿ ಮುಂದುವರಿದು ವಸಡಿನಲ್ಲಿ ಕೀವೂ ಸೇರಿ ಬಾಯಿ ದುರ್ನಾತವಾಗುವವರೆಗೂ ಇಲ್ಲವೇ ಹಲ್ಲು ಅಲ್ಲಾಡುವವರೆಗೂ ನಿರ್ಲಕ್ಷ್ಯವಾಗಿಯೇ ಇದ್ದು ಅನಂತರ ನಿರ್ವಾಹವಿಲ್ಲದೆ ವೈದ್ಯರ ಹತ್ತಿರಕ್ಕೆ ಹೋಗುವುದು ಜನರ ವಾಡಿಕೆ" ಎಂದು ಮುಂಬಯಿಯ ನಾಯರ್ ಆಸ್ಪತ್ರೆಯ ದಂತವಿದ್ಯಾಲಯದ ಪ್ರಾಧ್ಯಾಪಕ ಡಾ| ಆರ್. ಪಿ. ನಾಯಕ್ ಅವರು ಹೇಳುತ್ತಾರೆ. ಬಾಲ್ಯದಲ್ಲಿ ಕಂಡು ಬರುವ ಸೊಟ್ಟ ಹಲ್ಲು, ಹುಳುಕು ಹಲ್ಲುಗಳ ವಿಷಯದಲ್ಲೂ ಇಂಥದೇ ಉದಾಸೀನತೆ ಇದೆ. "ಬಾಲ್ಯದ ಹಲ್ಲುಗಳು ಹೇಗೂ ಬಿದ್ದು ಹೋಗುತ್ತವೆ. ಅನಂತರ ಹುಟ್ಟುವ ಹಲ್ಲುಗಳು ಚೆನ್ನಾಗಿಯೇ ಇರುತ್ತವೆ" ಎನ್ನುವ ಭಾವನೆ ಇಂಥ ಅನಾಸಕ್ತಿಗೆ ಕಾರಣ ಎಂದು ತೋರುತ್ತದೆ. ಆದರೆ ಹಾಗೆ ಹುಟ್ಟುವ ಹಲ್ಲುಗಳೂ ಪೂರ್ವದ ಅನಾರೋಗ್ಯ ಸ್ಥಿತಿಯ ಕಾರಣದಿಂದಲೇ ವಕ್ರವಾಗಿ ಅಥವಾ ಅನಾರೋಗ್ಯವಾಗಿ ಹುಟ್ಟುವ ಸಂಭವ ಉಂಟು ಎಂದು ಜನ ಅರಿತುಕೊಂಡಿರುವುದಿಲ್ಲ. ಆದ್ದರಿಂದ ಮಕ್ಕಳ ಹಲ್ಲುಗಳ ವಿಷಯದಲ್ಲಂತೂ ತೀರ ನಿರ್ಲಕ್ಷ್ಯರಾಗಿರುತ್ತಾರೆ. ನಮ್ಮ ರಾಜ್ಯದಲ್ಲೇ ನಡೆಸಿದ ಒಂದು ಸಮೀಕ್ಷೆಯ ಪ್ರಕಾರ ೫೦೦ ಜನ ಶಾಲಾ ವಿದ್ಯಾರ್ಥಿಗಳಲ್ಲಿ ಶೇಕಡ ೭೦ಕ್ಕಿಂತ ಹೆಚ್ಚಿನ ಹುಡುಗರು ದಂತವೈದ್ಯರಲ್ಲಿಗೆ ಎಂದೂ ಹೋದವರೇ ಅಲ್ಲ; ಮಿಕ್ಕವರು ಹಲ್ಲು ಕೀಳಿಸಿಕೊಳ್ಳಲು ಮಾತ್ರ ಹೋದವರು ಎಂದು ತಿಳಿದಿದೆ.

ಹಲ್ಲಿನ ವಿಷಯದಲ್ಲಿ ಶೋಚನೀಯ ಪರಿಸ್ಥಿತಿಗೆ ಇತರ ಕಾರಣಗಳೂ ಉಂಟು. ನಡುವಯಸ್ಸಿನಲ್ಲಿ ಒಂದೆರಡು ಹಲ್ಲುಗಳು ಬಿದ್ದು ಹೋದರೆ ಅದರಿಂದ ಯಾವುದಕ್ಕೂ ಏನೂ ಬಾಧಕವಿಲ್ಲ ಎಂದೇ ಅನೇಕರ ನಂಬಿಕೆ. ಆದರೆ ವಾಸ್ತವವಾಗಿ ಒಂದು ಹಲ್ಲು ಬಿದ್ದು ಹೋದರೂ ಅದರ ಅಕ್ಕಪಕ್ಕದ ಹಲ್ಲುಗಳಿಗೂ ವಸಡಿಗೂ ಧಕ್ಕೆಯಾಗುವುದೂ ಮತ್ತು ಅದರಿಂದ ಅವುಗಳ ಆರೋಗ್ಯ ಕೆಡುವುದೂ ಖಂಡಿತ. ಕೃತಕ ದಂತತಜ್ಞರಾದ ಡಾ| ಮಿರ್ಜಾ ಅವರ ಪ್ರಕಾರ

ಬಿದ್ದ ಹಲ್ಲಿನ ಬದಲು ಕೂಡಲೇ, ಅದಾಗದಿದ್ದರೆ ಒಂದು ವರ್ಷದ ಒಳಗಾದರೂ ಕೃತಕ ಹಲ್ಲನ್ನು ಕಟ್ಟಬೇಕಾದುದು ಮುಖ್ಯ.

ಟೂತ್ ಪೇಸ್ಟುಗಳು ಮತ್ತು ಟೂತ್ ಬ್ರಷ್‌ಗಳ ಮಾರಾಟ ಪರಿಸ್ಥಿತಿಯನ್ನು ನೋಡಿದರೆ ಇಲ್ಲಿಯ ಜನ ಎಷ್ಟು ಮಟ್ಟಿಗೆ ತಮ್ಮ ದಂತಾರೋಗ್ಯದ ವಿಷಯದಲ್ಲಿ ಆಸಕ್ತರಾಗಿದ್ದಾರೆ ಎಂದು ತಿಳಿಯುತ್ತದೆ. "ಒಂದು ಟೂತ್‌ಬ್ರಷ್ಷಿನ ಸರಾಸರಿ ಆಯುಸ್ಸು ೪ ತಿಂಗಳುಗಳು. ಅನಂತರ ಅವುಗಳ ಜುಂಗು ಹೊರಬಾಗಿಕೊಂಡು ಸುರುಳಿಗೊಳ್ಳುತ್ತವೆ. ಹೀಗಾದ ಮೇಲೆ ಅಂಥ ಬ್ರಷ್ಷಿನಿಂದ ಉಪಯೋಗಕ್ಕಿಂತಲೂ ಅಪಾಯವೇ ಹೆಚ್ಚು" ಎಂದು ಡಾ। ಆರ್. ಪಿ. ನಾಯರ್ ಅವರು ಹೇಳುತ್ತಾರೆ. ಆದರೂ ನಮ್ಮಲ್ಲಿ ಅನೇಕರು ೬-೮ ತಿಂಗಳಿಗೆ ಮುಂಚೆ ಹೊಸ ಬ್ರಷ್ಷನ್ನು ಕೊಳ್ಳುವುದಿಲ್ಲ ಮತ್ತು ದಿನಕ್ಕೆ ಸುಮಾರು ಒಂದು ಗ್ರಾಂಗಿಂತ ಹೆಚ್ಚಾಗಿ ಪೇಸ್ಟನ್ನು ಬಳಸುವುದಿಲ್ಲ. ಕನಿಷ್ಠವಾಗಿ ಪ್ರತಿಯೊಬ್ಬರೂ ದಿನಕ್ಕೆ ಒಂದೂವರೆ ಗ್ರಾಂ ಟೂತ್‌ಪೇಸ್ಟನ್ನು ಬಳಸಬೇಕೆಂದು ತಜ್ಞರ ಹೇಳಿಕೆ.

ಇದ್ದಿಲುಪುಡಿ, ಉಪ್ಪು, ಹೊಟ್ಟಿನಕರಕು, ಬೇವಿನಕಡ್ಡಿ ಮುಂತಾದ ಸ್ಥಳೀಯ ಲಭ್ಯವಸ್ತುಗಳು ದಂತಧಾವನಕ್ಕೆ ಟೂತ್‌ಪೇಸ್ಟ್ ಬ್ರಷ್ಷುಗಳಿಗಿಂತಲೂ ಉತ್ತಮವಾದ ಸಾಧನಗಳು ಎಂದು ಕೆಲವರ ನಂಬಿಕೆ. ಇದ್ದಿಲು ಪುಡಿಯಂಥ ಗಡಸು ವಸ್ತುವಿನಿಂದ ಹಲ್ಲನ್ನು ಉಜ್ಜುವುದರಿಂದ ಹಲ್ಲು ಸವೆದುಹೋಗುವ ಸಂಭವ ಉಂಟು ಎಂದು ಡಾ। ನಾಯರ್ ಹೇಳುತ್ತಾರೆ. ಬೇವಿನ ಕಡ್ಡಿಯಿಂದ ಹಲ್ಲುಜ್ಜುವುದು ಬ್ರಷ್ಷಿಗಿಂತ ಶೇಕಡ ೬೦ ರಷ್ಟು ಮಾತ್ರ ಸಾರ್ಥಕ ಎಂದು ನಾಯರ್ ಆಸ್ಪತ್ರೆಯಲ್ಲಿ ನಡೆಸಿದ ಒಂದು ವ್ಯಾಸಂಗದಿಂದ ತಿಳಿದುಬಂದಿದೆ. ಅರಿತು ಬಳಸಿದರೆ ಬಹುಶಃ ಸ್ಥಳೀಯ ದಂತಧಾವನ ವಸ್ತುಗಳಿಂದ ಹಲ್ಲು ಸವೆದು ಹೋಗುವಷ್ಟು ಕೆಡಕೂ ಆಗಲಾರದು. ಬೇವಿನಕಡ್ಡಿ, ಮಾವಿನಕಡ್ಡಿ ಇವುಗಳಿಂದ ಬ್ರಷ್ಷುಗಳಷ್ಟು ಮಟ್ಟಿಗೆ ಸಾರ್ಥಕವಾಗಿ ಉಜ್ಜಿಕೊಳ್ಳಲೂಬಹುದು. ಆದರೆ ಇಲ್ಲಿ "ಅರಿತು ಬಳಸಿದರೆ" ಎಂದು ಬರೆದಿರುವುದನ್ನು ಗಮನಿಸಬೇಕು.

ಹಳ್ಳಿಗರಲ್ಲಿ ಪಟ್ಟಣವಾಸಿಗಳಿಗಿಂತ ದಂತಾರೋಗ್ಯ ಚೆನ್ನಾಗಿರುವುದು ತಿಳಿದಿದೆ. "ಹಳ್ಳಿಗಾಡಿನ ಜನ ಸಾಮಾನ್ಯವಾಗಿ ಟೂತ್‌ಪೇಸ್ಟು, ಟೂತ್‌ಬ್ರಷ್ಷುಗಳನ್ನು ಕಂಡವರಲ್ಲವೆಂದೇ ಹೇಳಬೇಕು. ಹಾಗಿದ್ದರೂ ಅವರ ಹಲ್ಲುಗಳು ತಮ್ಮದಕ್ಕಿಂತಲೂ ಚೆನ್ನಾಗಿರುವುದು ವಿಪರ್ಯಾಸ" ಎಂದು ನಾಗರಿಕರಿಗೆ ಅನ್ನಿಸುವುದು ಸಹಜ. ಇಂಥ ಪರಿಸ್ಥಿತಿಗೆ ಕಾರಣವಿದೆ. ಹಳ್ಳಿಗಾಡಿನ ಜನ ಹಸಿಗೆಡ್ಡೆಗೆಣಸುಗಳನ್ನು ಜೋಳಗಾಯಿಗಳನ್ನೂ ತಿನ್ನುವುದು ಹೆಚ್ಚು. ನಾಗರಿಕರು ಅಂದಚಂದದ

ಮೇಲೆ ಗಮನವಿಟ್ಟು, ರುಚಿ ಬಯಸಿ, ಆಹಾರ ಪದಾರ್ಥಗಳನ್ನು ಅನೇಕ ರೀತಿ ಅರೆದು ಹುರಿದು ಬೇಯಿಸಿ ಪಕ್ವಮಾಡಿ ತಿನ್ನುತ್ತಾರೆ. ಹಳ್ಳಿಗಾಡಿನ ಜನರ ಆಹಾರದಲ್ಲಿ ನಾರಿನ ಅಂಶ ಹೆಚ್ಚಾಗಿರುತ್ತದೆ. ಅಗಿಯುವಾಗ ಅದು ಹಲ್ಲನ್ನು ಸ್ವಚ್ಛಗೊಳಿಸುತ್ತದೆ. ನಾಗರಿಕರ ಆಹಾರದಲ್ಲಿ ಶರ್ಕರಪಿಷ್ಟಾದಿಗಳು ಹೆಚ್ಚಾಗಿರುತ್ತವೆ. ಇವು ಹಲ್ಲಿನ ಸಂದಿನಲ್ಲಿ ಅಡಗಿ ಕೊಳೆತು ಬ್ಯಾಕ್ಟೀರಿಯಗಳ ಬೆಳವಣಿಗೆಗೆ ಕಾರಣವಾಗುತ್ತವೆ ಮತ್ತು ಆಮ್ಲೀಯ ವಸ್ತುಗಳನ್ನು ಬಿಡುಗಡೆಮಾಡುತ್ತವೆ. ಈ ಆಮ್ಲ ವಸ್ತುಗಳು ಹಲ್ಲಿನಮೇಲೆ ವರ್ತಿಸಿ, ಸವೆಸಿ, ಹುಳುಕು ಬೀಳುವಂತೆ ಮಾಡುತ್ತವೆ. ಸಿಹಿ ಭಕ್ಷ್ಯಗಳು, ಚಾಕೊಲೇಟ್ ಮುಂತಾದುವು ಈ ದಿಶೆಯಲ್ಲಿ ಬಹು ಅಪರಾಧಿಗಳು. ಆದರೆ ನಿತ್ಯ ಬಳಕೆಯ ಸಕ್ಕರೆಯಷ್ಟು ಅಪರಾಧಿ ಯಾವುದೂ ಇಲ್ಲ. ಹಬ್ಬ ಹರಿದಿನ, ಮದುವೆ ಮುಂತಾದ ಸಮಾರಂಭಗಳು, ದಿನಗಳಲ್ಲಿ ಹೆಚ್ಚಾಗಿ ಸಕ್ಕರೆ ಬಳಸಿ ಸಿಹಿ ಭಕ್ಷ್ಯಗಳನ್ನು ಮಾಡುವುದು ನಮ್ಮಲ್ಲಿ ರಾಷ್ಟ್ರವ್ಯಾಪಕ ರೂಢಿಯೇ ಆಗಿರುವುದು ಎಲ್ಲರಿಗೂ ತಿಳಿದಿದೆ. ವರ್ಷವರ್ಷ ನಾವು ಹೀಗೆ ಸುಮಾರು ೩೦ ಲಕ್ಷ ಟನ್ನುಗಳಷ್ಟು ಸಿಹಿಯನ್ನು ಭಕ್ಷಿಸುತ್ತೇವೆ ಎಂದು ಅಂದಾಜಿದೆ.

ಮಕ್ಕಳಿಗೆ ಪೆಪ್ಪರ್‌ಮಿಂಟ್, ಚಾಕೊಲೇಟ್‌ಗಳನ್ನು ಕೊಟ್ಟು ಮುದ್ದಿಸುವ ದುರಭ್ಯಾಸ ವಿಶ್ವವ್ಯಾಪಕವಾಗಿಯೇ ಇದೆ. ಸಿಹಿ ವಸ್ತುಗಳ ಧಾಳಿಗೆ ಮಕ್ಕಳ ಹಲ್ಲುಗಳು ಬಲು ಸುಲಭವಾಗಿ ಈಡಾಗುವುದರಿಂದ ಮಕ್ಕಳ ಊಟತಿಂಡಿಗಳ ವಿಚಾರದಲ್ಲಿ ಎಚ್ಚರಿಕೆ ವಹಿಸಬೇಕಾದುದು ಅಗತ್ಯ. "ಮಕ್ಕಳಿಗೆ ಸಿಹಿ ಪದಾರ್ಥಗಳನ್ನು, ಅದರಲ್ಲೂ ಹಲ್ಲಿಗೆ ಅಂಟಿಕೊಳ್ಳಬಹುದಾದ ಟಾಫಿ ಮುಂತಾದುವನ್ನು ಕೊಡುವುದನ್ನು ಪೂರ್ಣವಾಗಿ ವರ್ಜಿಸಬೇಕಾದುದು ಸರ್ವಥಾ ಅಪೇಕ್ಷಣೀಯ. ಆದರೆ ಬಹುಶಃ ಕಾರ್ಯತಃ ಅಸಾಧ್ಯ. ದಿನಕ್ಕೆ ಒಂದು ಬಾರಿ ಮಾತ್ರ ಸಿಹಿ ಪದಾರ್ಥಗಳನ್ನು ಸೇವಿಸಿ ಕೂಡಲೆ ಬಾಯನ್ನು ಚೆನ್ನಾಗಿ ತೊಳೆದುಕೊಳ್ಳುವಂತೆ ಮಾಡಲಾದರೂ ಪ್ರಯತ್ನಿಸುವುದು ಅಗತ್ಯ" ಎಂದು ನಾಯರ್ ಆಸ್ಪತ್ರೆಯ ಮಕ್ಕಳ ದಂತತಜ್ಞ ಡಾ। ಎನ್. ಎನ್. ಮೀರ್‌ಚಂದಾನಿ ಹೇಳುತ್ತಾರೆ. ಊಟಗಳ ಮಧ್ಯ ಬಾಯಾಡಿಸುವುದು, ಅದರಲ್ಲೂ ರಾತ್ರಿ, ಊಟವಾದ ನಂತರ ಕುರುಕಲು ತಿಂಡಿ ತಿನ್ನುವುದು, ಈ ಅಭ್ಯಾಸಗಳೂ ಕೂಡದು ಎಂದು ವೈದ್ಯರು ಅಭಿಪ್ರಾಯ ಪಡುತ್ತಾರೆ. ರಾತ್ರಿ ನಿದ್ರೆ ಕಾಲದಲ್ಲಿ ಬಾಯಲ್ಲಿ ಜೊಲ್ಲು ಕಡಿಮೆ ಆಗಿ ಹಲ್ಲಿನ ಸಂದಿಯಲ್ಲಿ ಉದ್ಭವಿಸುವ ಆಮ್ಲಗಳ ಪ್ರಾಬಲ್ಯ ಹೆಚ್ಚುತ್ತದೆ ಮತ್ತು ಅವು ಹಲ್ಲಿನ ಮೇಲೆ ವರ್ತಿಸುವುದು ತೀವ್ರತರವಾಗುತ್ತದೆ.

ಸಮಕಾಲೀನವಾಗಿ ಕಂಡು ಬರುವ ಇನ್ನೊಂದು ದುರಭ್ಯಾಸವೆಂದರೆ ಸಣ್ಣ ಮಕ್ಕಳನ್ನು ಮಲಗಿಸಲು ಅವುಗಳ ಬಾಯಿಯಲ್ಲಿ ಹಾಲಿನ ಬಾಟಲನ್ನು ಇಡುವುದು. ಈ ಹಾಲಿಗೆ ಸಕ್ಕರೆಯನ್ನು ಸಾಮಾನ್ಯವಾಗಿ ಸೇರಿಸಿರುತ್ತಾರೆ. ನಿದ್ದೆಗಣ್ಣಿನ ಶಿಶುವಿನ ಬಾಯಿಯ ಒಳಗೆ ಇಂಥ ಹಾಲು ಕೂಡಲೆ ನುಂಗಲ್ಪಡದೆ ಹೆಚ್ಚು ಕಾಲ ತಂಗಿರುತ್ತದೆ. ಇದರಿಂದ ಬಾಯಿಯಲ್ಲಿ ಬ್ಯಾಕ್ಟೀರಿಯಗಳ ಬೆಳವಣಿಗೆಗೆ ಅನುಕೂಲವಾಗುತ್ತದೆ. ಈ ಬ್ಯಾಕ್ಟೀರಿಯಗಳಿಂದ ಮಕ್ಕಳ ಹಲ್ಲಿನ ಆರೋಗ್ಯಕ್ಕೆ ಧಕ್ಕೆಯಾಗುವುದು ಆಶ್ಚರ್ಯವಿಲ್ಲ.

ಮಕ್ಕಳೂ ದೊಡ್ಡವರೂ ದಿನವೂ ಕ್ಲುಪ್ತವಾಗಿ ಹಲ್ಲನ್ನು ಉಜ್ಜಿಕೊಳ್ಳುತ್ತಿದ್ದರೆ ಹಲ್ಲಿನ ರೋಗ ಬಾರದಂತೆ ಬಹುಮಟ್ಟಿಗೆ ತಡೆಗಟ್ಟಬಹುದು. ಪ್ರತಿಸಲ ಊಟತಿಂಡಿ ಆದಾಗಲೂ ಹಲ್ಲುಜ್ಜಿ ತೊಳೆದುಕೊಳ್ಳುವುದು ಶ್ರೇಷ್ಠ. ರಾತ್ರಿ ಮಲಗಿಕೊಳ್ಳುವುದಕ್ಕೆ ಮುಂಚೆ ತಪ್ಪದೆ ಹಲ್ಲುಜ್ಜಿ ತೊಳೆದುಕೊಳ್ಳುವುದನ್ನು ರೂಢಿ ಮಾಡಿಕೊಳ್ಳುವುದು ಅಗತ್ಯ. ವಾದಿ ಹಲ್ಲುಗಳನ್ನು ಅಡ್ಡಡ್ಡವಾಗಿ, ಮೇಲಿನ ಹಲ್ಲುಗಳನ್ನು ಮೇಲಿಂದ ಕೆಳಮುಖವಾಗಿ, ಕೆಳಗಿನ ಹಲ್ಲುಗಳನ್ನು ಕೆಳಗಿನಿಂದ ಮೇಲು ಮುಖವಾಗಿ ಬ್ರಷ್ಷಿನಿಂದ ಉಜ್ಜಿ ತೊಳೆದುಕೊಳ್ಳುವುದು ಒಳ್ಳೆಯದು. ಹಿಡಿ ಉದ್ದವಾಗಿ ಕುಂಚ ಸಣ್ಣದಾಗಿದ್ದು, ಜುಂಗು ಅತಿ ಮೃದುವಾಗಿಯೂ ಇಲ್ಲದೆ ಅತಿ ಗಡುಸಾಗಿಯೂ ಇಲ್ಲದೆ ಇರುವ ಬ್ರಷ್ಷು ಉತ್ತಮ. ಮೇಲೆ ಹೇಳಿರುವ ವಿಷಯಗಳನ್ನು ಜ್ಞಾಪಕದಲ್ಲಿ ಇಟ್ಟುಕೊಂಡು ಬೇವಿನ ಕಡ್ಡಿಯನ್ನು ಹಲ್ಲುಜ್ಜುವುದಕ್ಕೆ ಬಳಸಿದರೂ ಉಚಿತ.

ಎಷ್ಟೇ ಶ್ರದ್ಧೆಯಿಂದ ಹಲ್ಲುಜ್ಜಿಕೊಳ್ಳುತ್ತಿದ್ದರೂ ಹಲ್ಲಿನ ಒಳಮೈ ಮೇಲೆ ಮತ್ತು ಹಲ್ಲುಗಳ ನಡುವೆ ಸಿಮೆಂಟಿನಂಥ ಟಾರ್ಟರ್ ಎಂಬ ವಸ್ತು ಶೇಖರವಾಗುತ್ತದೆ. ಇದನ್ನು ಎಚ್ಚರಿಕೆಯಿಂದ ಕೆರೆದು ತೆಗೆಯಬೇಕಾಗುತ್ತದೆ. ದಂತ ವೈದ್ಯರ ಮೂಲಕ ಹೀಗೆ ಮಾಡಿಸುವುದು ಉಚಿತ. ಮಕ್ಕಳು ವರ್ಷಕ್ಕೆ ಎರಡು ಬಾರಿ, ದೊಡ್ಡವರು ವರ್ಷಕ್ಕೆ ಒಂದು ಬಾರಿ ಹೀಗೆ ಟಾರ್ಟರನ್ನು ತೆಗೆಸಬೇಕಾಗುತ್ತದೆ. ಇಲ್ಲದಿದ್ದರೆ ಅದರ ಅಡಿಯಲ್ಲಿ ಹಲ್ಲು ಕೊಳೆತುಹೋಗುವುದಕ್ಕೆ ಪ್ರಾರಂಭವಾಗಬಹುದು. ಬರೀ ಕಣ್ಣಿಗೆ ಗೋಚರವಾಗದೇ ಇರಬಹುದಾದ ಈ ಸ್ಥಿತಿಯನ್ನು ಕ್ಷ-ಕಿರಣದ ಪರೀಕ್ಷೆಯಿಂದ ತಿಳಿಯಬಹುದು.

ಹಲ್ಲಿನ ಸಹಜ ಆರೋಗ್ಯಕ್ಕೆ ಫ್ಲೋರೈಡುಗಳೆಂಬ ಲವಣಗಳು ಅಗತ್ಯವೆಂದು ತಿಳಿದಿದೆ. ಇವು ಸಾಕಷ್ಟು ಪ್ರಮಾಣದಲ್ಲಿ ಸಾಮಾನ್ಯವಾಗಿ ನೀರಿನಲ್ಲಿ ಹಾಗೂ ನೆಲದಲ್ಲಿ ಇರುವುದರಿಂದ ಅವುಗಳ ಅಭಾವದಿಂದಾಗುವ ಪರಿಣಾಮಗಳು ಕಾಣ

ಬರುವುದು ಅಪರೂಪವೆನ್ನಿಸಬಹುದು. ಆದರೆ ಪಟ್ಟಣವಾಸಿಗಳಲ್ಲಂತು ಪರಿಸ್ಥಿತಿ ತದ್ವಿರುದ್ಧ. ಪಟ್ಟಣವಾಸಿಗಳು ಸಂಸ್ಕರಿಸಿದ ಆಹಾರ, ಶುದ್ಧೀಕರಿಸಿದ ನೀರುಗಳನ್ನು ಬಳಸುವಾಗ ಫ್ಲೋರೈಡ್‌ಗಳ ಕೊರತೆ ಕಂಡು ಬರುವುದು ಅಪರೂಪವಲ್ಲವೆಂದೇ ತಿಳಿದಿದೆ. ಹತ್ತುಲಕ್ಷಕ್ಕೆ ಒಂದು ಭಾಗವಷ್ಟು ಪ್ರಮಾಣದಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡನ್ನು ಸೇರಿಸಿ ಸರಬರಾಜು ಮಾಡುವುದರಿಂದ ಮಕ್ಕಳ ಹಲ್ಲುಗಳ ಅವನತಿಯನ್ನು ಗಣನೀಯವಾಗಿ ತಡೆಯಬಹುದು ಎಂದು ನಾಯರ್ ಆಸ್ಪತ್ರೆಯ ದಂತ ವೈದ್ಯಾಲಯದ ಡೀನ್ ಡಾ| ಎಸ್.ಟಿ. ತಾರಿವಾ್ ಅವರು ಅಭಿಪ್ರಾಯಪಡುತ್ತಾರೆ. ಸಾಮಾನ್ಯವಾಗಿ ಪ್ರಪಂಚದ ಎಲ್ಲ ವೈದ್ಯರೂ ಇದೇ ಅಭಿಪ್ರಾಯ ಉಳ್ಳವರಾಗಿರುತ್ತಾರಲ್ಲದೆ ಪಾಶ್ಚಾತ್ಯ ದೇಶಗಳಲ್ಲಿ ನಡೆಸಿರುವ ಅನೇಕ ವ್ಯಾಸಂಗಗಳಿಂದಲೂ ಇದು ವ್ಯಕ್ತಪಟ್ಟಿದೆ.

ಭಾರತದ ೧೪ ರಾಜ್ಯಗಳ ೨೪೬ ನಗರಗಳಲ್ಲಿ ಕುಡಿಯುವ ನೀರಿನಲ್ಲಿ ಕನಿಷ್ಠ ಪ್ರಮಾಣದಲ್ಲಿ ಫ್ಲೋರೈಡ್ ಇಲ್ಲವೆಂದು ತಿಳಿದಿದೆ. ಈ ಪ್ರದೇಶಗಳಲ್ಲಿ ಕುಡಿಯುವ ನೀರಿನಲ್ಲಿ ಫ್ಲೋರೈಡ್ ಮಟ್ಟವನ್ನು ಕೃತಕವಾಗಿ ಏರಿಸಬೇಕಾಗಿರುವುದರ ಅಗತ್ಯ ತಿಳಿದಿದ್ದರೂ ಅದನ್ನು ಹಾಗೆ ಏರಿಸುವ ವಿಧಾನ ದುಬಾರಿ. ರಾಜಕೀಯ ಧುರೀಣರ ಲೆಕ್ಕಾಚಾರದಂತೆ ದಂತಾರೋಗ್ಯದ ವಿಷಯ ಅಷ್ಟು ಮುಖ್ಯವೆಂದೆನಿಸಿಲ್ಲವಾದ್ದರಿಂದ ಹೆಚ್ಚು ಖರ್ಚಿನ ಫ್ಲೋರೈಡೀಕರಣ ಯಂತ್ರಗಳನ್ನು ಅಗತ್ಯ ನಗರಗಳಲ್ಲಿ ಸ್ಥಾಪಿಸುವ ಸಾಧ್ಯತೆ ದೂರವೇ ಎನ್ನಿಸುತ್ತದೆ.


ಫ್ಲೋರೈಡ್ ಕೊರತೆಯನ್ನು ತುಂಬಿಸಲು ಬೇರೆ ವಿಧಾನಗಳನ್ನೂ ಬಳಸಬಹುದಾಗಿದೆ. ೧೨ ವರ್ಷಕ್ಕಿಂತ ಕೆಳಯ ಮಕ್ಕಳು ೧ ಮಿ.ಗ್ರಾಂ ಫ್ಲೋರೈಡನ್ನು ಕರಗಿಸಿರುವ ಒಂದು ಬಟ್ಟಲು ನೀರನ್ನು ಪ್ರತಿ ದಿನವೂ ಕುಡಿಯುತ್ತಿದ್ದರೆ, ಅವರಲ್ಲಿ ದಂತಕ್ಷಯವನ್ನು ಶೇಕಡ ೪೦ ರಷ್ಟು ಕಡಿಮೆಮಾಡಬಹುದು. ಮಕ್ಕಳ ಹಲ್ಲುಗಳ ಮೇಲೆ ಫ್ಲೋರೈಡ್ ಸಂಯುಕ್ತಗಳನ್ನು ೬ ತಿಂಗಳುಗಳಿಗೆ ಒಂದು ಬಾರಿ ಲೇಪಿಸುತ್ತಿದ್ದರೂ ಅಷ್ಟರಮಟ್ಟಿಗೆ ದಂತಕ್ಷಯವನ್ನು ತಡೆಗಟ್ಟಬಹುದು. ಫ್ಲೋರೈಡ್ ಕರಗಿರುವ ನೀರಿನಲ್ಲಿ ಬಾಯಿಮುಕ್ಕಳಿಸಿದರೂ ಮಕ್ಕಳಲ್ಲಿ ಶೇಕಡ ೨೫-೪೦ ರಷ್ಟು, ವಯಸ್ಕರಲ್ಲಿ ಶೇಕಡ ೧೨ ರಷ್ಟು ದಂತಕ್ಷಯವನ್ನು ಕಡಿಮೆ ಮಾಡಬಹುದು. ಆದರೆ ಇವು ಭಾರತದಲ್ಲಿ ಸುಲಭಸಾಧ್ಯಕ್ರಮಗಳಲ್ಲವಾಗಿವೆ. ಕಾರಣ: ಯುಕ್ತ ಫ್ಲೋರೈಡ್ ಲೇಪನ ಹಾಗೂ ಸಂಯುಕ್ತಗಳನ್ನು ನಾವು ಆಮದು ಮಾಡಿಕೊಳ್ಳಬೇಕಾಗಿದೆ.

ಕಿಂಚಿತ್ ಪ್ರಮಾಣದಲ್ಲಿ ಪ್ರಯೋಜನವಾಗುವುದಾದರೆ ಅಷ್ಟಾದರೂ ಆಗಲಿ

ಎಂದು ಭಾರತದ ದಂತವೈದ್ಯರು ಫ್ಲೋರೈಡ್ ಟೂತ್‌ಪೇಸ್ಟುಗಳನ್ನು ಬಳಸುವಂತೆ ಶಿಫಾರಸ್ಸು ಮಾಡುತ್ತಾರೆ. ಫ್ಲೋರೈಡ್ ಟೂತ್‌ಪೇಸ್ಟುಗಳು ಮಾರುಕಟ್ಟೆಯಲ್ಲಿ ಧಾರಾಳವಾಗಿ ದೊರೆಯುತ್ತವೆ.

ದಂತರೋಗಗಳನ್ನು ಸಾರ್ವಜನಿಕವಾಗಿ ನಿರ್ಮೂಲನಮಾಡುವ ಉಪಾಯಗಳು ಗೊತ್ತಾಗಿರುವುದಾದರೂ ಎಂದಾದರೊಮ್ಮೆ ಯಾರನ್ನೂ ಬಿಡದೆ ಕಾಡಿಸುವ ದಂತ ರೋಗಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕಾದುದು ವೈಯಕ್ತಿಕವಾಗಿಯೇ. ಈ ಕ್ರಮದಿಂದ ವ್ಯಕ್ತಿ ಸ್ವ-ಇಚ್ಛೆಯಿಂದ ತನಗೆ ಹಲ್ಲಿನ ಬಾಧೆಗಳು ಬಾರದಂತೆ ನೋಡಿಕೊಳ್ಳಬಹುದು.

ಎಸ್. ರಾಮರಾವ್



ಗಂಡಾಂತರಗಳು ಅನಿರೀಕ್ಷಿತವಾಗಿ ಬರುವಂತೆಯೇ ಅತ್ಯಂತ ಅನಿರೀಕ್ಷಿತ ಸ್ಥಳಗಳಲ್ಲಿ ಗಂಡಾಂತರಗಳು ನಮಗಾಗಿ ಕಾದಿರುತ್ತವೆ ಎಂಬುದನ್ನು ತಿಳಿದುಕೊಂಡು ಹೆಜ್ಜೆ ಹೆಜ್ಜೆಯನ್ನೂ ಎಚ್ಚರದಿಂದ ಹಾಕಬೇಕು.

—ಗ್ಯಯ್ಟೆ

ಗಿಡದಲ್ಲಿ ಪಕ್ವವಾದ ಫಲಗಳಿಗೆ ಕೆಳಗೆ ಬಿದ್ದು ಹೋಗುವ ಭೀತಿ ಇರುತ್ತದರೆ ಅವು ಅಷ್ಟಾಗಿ ಬೆಳೆದು ನಿಲ್ಲುತ್ತಲಿಲ್ಲ. ಅಂತೆಯೇ ಮಾನವ ಜೀವನದಲ್ಲಿ ಅಂಜುತ್ತಾ ಕುಳಿತರೆ ಹೇಗೆ?

—ಶಂಕರಾಚಾರ್ಯ

ಶಸ್ತ್ರಾಸ್ತ್ರಗಳ ಸಂಘರ್ಷಣದಲ್ಲಿ, ಕಾಯಿದೆಗಳು ಮೌನವಾಗಿರಬೇಕಾಗುತ್ತದೆ.

—ಬರ್ಕ

ಮೀರಾ ಮಹಾದೇವನ್

ಅದೊಂದು ದಿನ, ಕೇಂದ್ರ ಲೋಕೋಪಯೋಗ ಇಲಾಖೆಯ ನವದೆಹಲಿ ವಲಯದ ಮುಖ್ಯ ಇಂಜಿನಿಯರ್ ಆಗಿದ್ದ ಎಸ್. ಎಸ್. ಎಲ್. ರಾವ್ ಅವರ ಕಛೇರಿಗೆ ವಡೂತಿ ಮಹಿಳೆಯೊಬ್ಬಳು ನುಗ್ಗಿದಳು. ತನ್ನ ಹೆಸರು ಮೀರಾ ಮಹಾದೇವನ್ ಎಂದು ತಿಳಿಸಿದ ಆಕೆ "ನನಗೆ ನಿಮ್ಮ ಮೇಲೆ ತುಂಬ ಕೋಪ; ಕಟ್ಟಡ ಕೆಲಸಗಾರರ ಮಕ್ಕಳಿಗಾಗಿ ನಾನಿಲ್ಲಿ ಶಿಶುವಿಹಾರಗಳನ್ನು ನಡೆಸು ತ್ತಿದ್ದೇನೆ. ಆದರೆ ನಿಮ್ಮ ಇಂಜಿನಿಯರ್ ಯಾರೂ ನನಗೆ ನೆರವು ನೀಡುತ್ತಿಲ್ಲ; ಕಿರುಕುಳ ಕೊಡುತ್ತಿದ್ದಾರೆ" ಎಂದು ತೀವ್ರವಾಗಿ ಆಕ್ಷೇಪಿಸಿದಳು.

ತನ್ನ ಉದ್ಯೋಗಕ್ಕೂ ಶಿಶುವಿಹಾರಗಳಿಗೂ ಯಾವ ಸಂಬಂಧವೂ ಇಲ್ಲವೆಂದು ರಾವ್ ರೇಗಿದಾಗ, ನಡುವೆ ಬಾಯಿ ಹಾಕಿದ ಮೀರಾ "ಸ್ವಲ್ಪ ಬನ್ನಿ; ನಾನೇನು ಮಾಡುತ್ತಿದ್ದೇನೆಂದು ತೋರಿಸುತ್ತೇನೆ" ಎಂದು ಒತ್ತಾಯಿಸಿದಳು. ಬೇರೆ ದಾರಿ ಕಾಣದೆ ರಾವ್ ಅವಳನ್ನು ಹಿಂಬಾಲಿಸಬೇಕಾಯಿತು. ತಾನು ನಡೆಸುತ್ತಿರುವ ನಾಲ್ಕು ಶಿಶುವಿಹಾರಗಳನ್ನು ಅವರಿಗೆ ತೋರಿಸಿದಳು ಮೀರಾ. ಅವುಗಳಲ್ಲೆರಡು ಇನ್ನೂ ಪೂರ್ಣಗೊಂಡಿರಲಿಲ್ಲ; ಉಳಿದೆರಡು ಕೂಡ ಹುಲ್ಲುಮಾಡಿನ ಜೋಪಡಿ ಗಳಾಗಿದ್ದುವು. ಆದರೆ ಮುಂಕುಗಟ್ಟಿದ ವಾತಾವರಣವನ್ನು ಚುರುಕುಗೊಳಿಸ ಲೆಂಬಂತೆ ಪುಟಾಣಿ ಮಕ್ಕಳ ನಗು-ಮಾತು-ಜಗಳಗಳ ಸದ್ದು ಓಮೂ ಕೇಳಿ ಬರುತ್ತಿತ್ತು. ಅಂಬೆಗಾಲಿಡುತ್ತ ಮುಂದೆನಾಗುವ ಹಸುಳೆಗಳೂ ಹಿಂದಿ ಅಕ್ಷರ ಮಾಲೆ ಅಭ್ಯಾಸ ಮಾಡುತ್ತಿದ್ದ ಪ್ರಾಥಮಿಕ ಶಾಲಾವಯಸ್ಸಿನ ಮಕ್ಕಳೂ ಅಲ್ಲಿದ್ದರು. ಆಟಪಾಠಮನೋರಂಜನೆಗಳಿಗಾಗಿ ಸಾಕಷ್ಟು ಅವಕಾಶವನ್ನು ಅಲ್ಲಿ ಕಲ್ಪಿಸಿಕೊಡಲಾಗಿತ್ತು.

ಹೆಚ್ಚು ಕಡಮೆ ಎಲ್ಲ ಕಟ್ಟಡ ನಿರ್ಮಾಣ ನಿವೇಶನಗಳಲ್ಲೂ ಕೆಲಸಗಾರರ ಮಕ್ಕಳು ಹೊತ್ತುಹೊತ್ತಿಗೆ ಸ್ನಾನ ಊಟಗಳಿಲ್ಲದೆ, ಹೇಳುವವರು ಕೇಳುವವರೂ ಇಲ್ಲದೆ ಭಿಕಾರಿಗಳಂತೆ ವ್ಯರ್ಥ ಅಲೆದಾಡುತ್ತಿದ್ದುದನ್ನೇ ಗಮನಿಸಿದ್ದ ರಾವ್‌ಗೆ ಮೀರಾಳ ಶಿಶುವಿಹಾರಗಳನ್ನು ನೋಡಿ ತುಂಬ ಸಂತೋಷವಾಯಿತು. ತಮಗೆ ಹಾಗೂ ತಮ್ಮ ಇಂಜಿನಿಯರುಗಳಿಗೆ ಸಾಧ್ಯವಾಗುವ ಎಲ್ಲ ಸಹಕಾರವನ್ನೂ ನೀಡುವುದಾಗಿ ಅವರು ಭರವಸೆ ನೀಡಿದರು.

೧೯೭೦ನೇ ಜುಲೈ ತಿಂಗಳ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿ ಪ್ರಕಟವಾದ ಅಶೋಕ್ ಮಹಾದೇವನ್ ಅವರ ಲೇಖನದ ಅನುವಾದ.

ಮೀರಾ ಮಹಾದೇವನ್ ಪ್ರಾರಂಭಿಸಿದ ಈ ಸಂಸ್ಥೆಗಳೇ ಸಂಚಾರಿ ಶಿಶುವಿಹಾರಗಳು. ಕಟ್ಟಡ ನಿರ್ಮಾಣ ಪ್ರದೇಶಗಳಲ್ಲಿ ದುಡಿಯುವ ಕೆಲಸಗಾರರ ಮಕ್ಕಳ ಹಿತಸಾಧನೆಯನ್ನು ಗಮನದಲ್ಲಿರಿಸಿಕೊಂಡ ಇವುಗಳ ಅನೇಕ ಶಾಖೆಗಳು ಇಂದು ದೆಹಲಿ, ಮುಂಬಯಿ ಮತ್ತು ಪೂನಾ ನಗರಗಳಲ್ಲಿದ್ದು ಸುಮಾರು ೫,೫೦೦ಕ್ಕೂ ಹೆಚ್ಚು ಮಕ್ಕಳಿಗೆ ಶಿಕ್ಷಣ, ಆರೋಗ್ಯ, ರಕ್ಷಣೆ ಹಾಗೂ ಮನೋರಂಜನೆಗಳ ಸೌಲಭ್ಯ ಒದಗಿಸುತ್ತಿವೆ. ಸುಮಾರು ನಾನೂರು ಸಿಬ್ಬಂದಿಗಳಿರುವ ಈ ಸಂಚಾರಿ ಶಿಶುವಿಹಾರಗಳ ಒಟ್ಟು ವಾರ್ಷಿಕ ಬಜೆಟ್ ರೂ. ಇಪ್ಪತ್ತು ಲಕ್ಷ.

ಅಚ್ಚರಿಯ ವಿಷಯವೆಂದರೆ ಈ ಎಲ್ಲ ಸಾಧನೆಗಳ ಚಾಲಕಶಕ್ತಿ ಎನಿಸಿದ ಮೀರಾಳಿಗೆ ಮೊದಮೊದಲು ಸಮಾಜಸೇವೆಯ ಯಾವ ಉದ್ದೇಶವೂ ಇರಲಿಲ್ಲ. ೧೯೨೩ನೇ ಡಿಸೆಂಬರ್ ೫ರಂದು ಕರಾಚಿಯಲ್ಲಿ ಜನಿಸಿದ ಮೀರಾಳ ಮೊದಲ ಹೆಸರು ಮಿರಿಯಮ್. ಅವಳ ಮೇಲೆ ಬಲವಾದ ಪ್ರಭಾವ ಬೀರಿದವರು ಅವಳ ತಂದೆ ಅಲನ್ ಜ್ಯಾಕಬ್. ಬ್ರಿಟಿಷ್ ಸೈನ್ಯದಲ್ಲಿ ಹಿರಿಯ ಅಧಿಕಾರಿಯಾಗಿದ್ದ ಇವರು ತುಂಬ ಪ್ರಾಮಾಣಿಕರಾಗಿದ್ದರು. ಬಿಡಿಗಾಸು ಲಂಚವನ್ನೂ ಮುಟ್ಟುತ್ತಿರಲಿಲ್ಲ. ತಂದೆಯ ಈ ಮಹೋನ್ನತ ಸಚ್ಛೀಲಗಳೇ ಮಗಳ ಮೇಲೆ ಮಹತ್ವದ ಪರಿಣಾಮ ಬೀರಿದವು.

ಸದಾ ಗೆಲುವಿನ ಕಾರಂಜಿಯಾಗಿದ್ದಳು ಮೀರಾ. ಸಂಘಟನೆ-ನಾಯಕತ್ವಗಳ ಸಹಜ ಪ್ರತಿಭೆ ಅವಳಲ್ಲಿತ್ತು. ಬಾಲ್ಯದ ದಿನಗಳನ್ನು ಜ್ಞಾಪಿಸಿಕೊಳ್ಳುತ್ತಾ ಮೀರಾಳ ಗೆಳತಿ ದಯಾನಾ ಜೆಂಕಿನ್ಸ್ ಬರೆಯುತ್ತಾಳೆ: “ಟೆನ್ನಿಸ್ ಹಾಗೂ ಆಟಗಳಿಗಾಗಿ ಮೀರಾ ಬಹಳ ಸುಲಭವಾಗಿ ಮಕ್ಕಳನ್ನು ಒಂದುಗೂಡಿಸುತ್ತಿದ್ದಳು.”

೧೯೪೭ರಲ್ಲಿ ದೇಶದ ವಿಭಜನೆಯಾದ ಅನಂತರ, ಜ್ಯಾಕಬ್ ಭಾರತಕ್ಕೆ ಬಂದು ಪೂನಾದಲ್ಲಿ ನೆಲಸಿದರು. ಸೈಕಲ್ ಅಂಗಡಿಯೊಂದನ್ನು ಪ್ರಾರಂಭಿಸಿ ಸ್ವಲ್ಪ ಕಾಲದಲ್ಲಿಯೇ ದಿವಾಳಿಯಾಗಿ ಅನಂತರ ಪೂನಾ ಬಿಟ್ಟು ಮುಂಬಯಿಗೆ ತೆರಳಿದರು. ಆಗ ಮೀರಾಳಿಗೆ ೧೮ ವರ್ಷ. ಸ್ಟೆನೋಗ್ರಾಫರ್ ಆಗಿ ನೌಕರಿ ಹಿಡಿದ ಅವಳು ಹಿಂದಿ ಭಾಷೆಯಲ್ಲಿ ಸಾಹಿತ್ಯಿಕ-ರಾಜಕೀಯ ವಾರಪತ್ರಿಕೆಯೊಂದನ್ನು ಪ್ರಾರಂಭಿಸಿದಳು.

೧೯೫೫ರಲ್ಲಿ ಹೆತ್ತವರ ವಿರೋಧವನ್ನೂ ಲೆಕ್ಕಿಸದೆ ಅಂತರ್ಜಾತೀಯ ವಿವಾಹವಾದಳು ಮೀರಾ. ಅವಳ ಪತಿಯೇ ಮುಂಬಯಿ ಪತ್ರಕರ್ತನಾದ ಟಿ. ಆರ್. ಮಹಾದೇವನ್. ಮೂರು ವರ್ಷಗಳ ಅನಂತರ ಮಹಾದೇವನ್ ದಂಪತಿಗಳು

ಮಗು ಉಪಮನ್ಯುವಿನೊಂದಿಗೆ ದೆಹಲಿಗೆ ತೆರಳಿದರು. ಅಲ್ಲಿ ಮೀರಾಳ ಮೊದಲ ದಿನಗಳು ಬರವಣಿಗೆಯಲ್ಲಿ ಹಾಗೂ ಮಗುವಿನ ಪಾಲನೆ-ಪೋಷಣೆಯಲ್ಲಿ ಕಳೆದವು. ತನ್ನ ಬದುಕಿನ ಎಲ್ಲ ಅನುಭವಗಳನ್ನೂ ಸಶಕ್ತವಾಗಿ ದುಡಿಸಿಕೊಂಡ ಅವಳು ಎರಡು ಕಾದಂಬರಿಗಳನ್ನೂ ಪ್ರಕಟಿಸಿದಳು. ಅವೇ—ದುಡಿಯುವ ಮುಂಬಯಿ ಹುಡುಗಿಯೊಬ್ಬಳ ಸಂಕಟಕರ ಜೀವನವನ್ನು ನಿರೂಪಿಸುವ 'ಸೋ ಕ್ಯಾ ಜಾನೆ ಪಿರ್‌ಪರಾಯಿ' ಮತ್ತು ಭಾರತ-ಇಸ್ರೇಲ್‌ಗಳಲ್ಲಿ ಯಾವುದಕ್ಕೆ ನಿಷ್ಠೆ ತೋರಿಸಬೇಕೆಂದು ಅರಿಯದ ಸಂಘರ್ಷಕ್ಕೆ ಈಡಾದ ಯೆಹೂದ್ಯ ಕುಟುಂಬವೊಂದರ ಚಿತ್ರಣ ನೀಡುವ 'ಅಪ್ನಾ ಘರ್'.

೧೯೬೦ರ ಕೊನೆಯ ವೇಳೆ. ತುಂಬ ಉದ್ವಿಗ್ನಳಾಗಿದ್ದಳು ಮೀರಾ. ಬರವಣಿಗೆಯಿಂದ ಮನಸ್ಸಂತೃಪ್ತಿ ಪಡೆಯಲು ಅವಳಿಗೆ ಸಾಧ್ಯವಾಗಲಿಲ್ಲ. ಇತರರಿಗೆ ನೆರವಾಗುವಂತಹ ಯಾವುದಾದರೂ ಚಟುವಟಿಕೆಯನ್ನು ಹಮ್ಮಿಕೊಳ್ಳಲು ಅವಳ ಮನಸ್ಸು ಹಂಬಲಿಸುತ್ತಿತ್ತು.

ಕೊನೆಗೂ ಅಂಥ ಸಂದರ್ಭವೊಂದು ತಾನಾಗಿ ಒದಗಿಬಂತು. ೧೯೬೮ ಇಸವಿ. ಮುಂದಿನ ವರ್ಷ ಆಚರಿಸಬೇಕಾದ ಗಾಂಧಿಶತಮಾನೋತ್ಸವದ ಸಮಿತಿಯೊಂದರ ಸದಸ್ಯೆಯಾಗಿ ನೇಮಕಗೊಂಡಳು ಮೀರಾ. ಉತ್ಸವದ ಅನೇಕ ಯೋಜನೆಗಳಲ್ಲಿ ವಸ್ತುಪ್ರದರ್ಶನವೂ ಸೇರಿತ್ತು. ಪ್ರತಿದಿನ ತನ್ನ ಮನೆಯಿಂದ ವಸ್ತುಪ್ರದರ್ಶನಕ್ಕೆ ಹೋಗಿ ಬರುತ್ತಿದ್ದ ಮೀರಾ ದಾರಿಯ ಇಕ್ಕೆಡೆಗಳಲ್ಲಿನ ಕಟ್ಟಡ ನಿರ್ಮಾಣ ನಿವೇಶನಗಳಲ್ಲಿ, ನೋಡಿಕೊಳ್ಳುವವರಿಲ್ಲದೆ ತಮ್ಮ ಮನಸ್ಸಿಗೆ ಬಂದಂತೆ ಆಟವಾಡುತ್ತಲೊ ಜಗಳವಾಡುತ್ತಲೊ ಗೊತ್ತುಗುರಿಯಿಲ್ಲದೆ ತಬ್ಬಲಿಗಳಂತೆ ಅಲೆಯುವ ಕೆಲಸಗಾರರ ಮಕ್ಕಳನ್ನು ಗಮನಿಸಿದಳು. ತಲೆಗೆ ಎಣ್ಣೆ ಕಾಣದ, ಅಪರೂಪಕ್ಕೊಮ್ಮೆಯೂ ಸ್ನಾನಮಾಡದ, ಅರೆಹೊಟ್ಟೆ-ಬರಹೊಟ್ಟೆಗಳ ಆ ಮಕ್ಕಳು ಅಡ್ಡದಾರಿ ಹಿಡಿಯುವ ದಿನ ದೂರವಿಲ್ಲವೆನಿಸಿತು ಅವಳಿಗೆ.

ಅಂದೇ ದೃಢ ಸಂಕಲ್ಪ ಮಾಡಿದಳು ಮೀರಾ. ಹೇಗಾದರೂ ಈ ಮಕ್ಕಳ ಸಮಸ್ಯೆಗೊಂದು ಪರಿಹಾರ ಹುಡುಕಬೇಕು. ಕೆಲದಿನಗಳ ಆಲೋಚನೆಯ ಅನಂತರ ಅವಳು ಕಟ್ಟಡ ನಿರ್ಮಾಣ ನಿವೇಶನದಲ್ಲಿ ಶಿಶುವಿಹಾರ ತೆರೆಯಲು ನಿರ್ಧರಿಸಿದಳು. ಕೆಲಸಗಾರರ ಮಕ್ಕಳ ಯೋಗಕ್ಷೇಮ ನೋಡಿಕೊಳ್ಳುವ ಭರವಸೆಯನ್ನು ಅವರಿಗೆ ನೀಡಿ, ಮಕ್ಕಳನ್ನು ಶಿಶುವಿಹಾರಕ್ಕೆ ಸೇರಿಸುವಂತೆ ಕೋರಿದಳು.

ಮೊದಲ ನೋಟಕ್ಕೆ ಸಾಧಾರಣವಾಗಿ ಕಂಡರೂ ಮೀರಾಳ ಯೋಜನೆ ಅಸದೃಶವಾಗಿತ್ತು ; ಅದ್ವಿತೀಯವಾಗಿತ್ತು. ಭಾರತದಲ್ಲಿ ಸುಮಾರು ಒಂದೂವರೆ

ಮಿಲಿಯದಷ್ಟು ಇರುವ ಕಟ್ಟಡ ಕೆಲಸಗಾರರ ಮಕ್ಕಳಿಗೆ ಸಂಬಂಧಿಸಿದ ಈ ಮಹಾ ಸಮಸ್ಯೆಯ ಬಗ್ಗೆ ಅವರಿಗೆ ಯಾರೂ ಯೋಚಿಸಿರಲೇ ಇಲ್ಲ. ಈ ಕೆಲಸಗಾರರಲ್ಲಿ ಬಹುಮಟ್ಟಿಗೆ ಭೂರಹಿತರಾಗಿ ಅಥವಾ ಇರುವ ಚೂರುಪಾರು ಭೂಮಿಯಿಂದ ಜೀವನಕ್ಕೆ ಅಗತ್ಯವಾದ ಆದಾಯ ಗಳಿಸಲಾರದೆ, ಉದ್ಯೋಗ ಅರಸಿಕೊಂಡು ನಗರಗಳಿಗೆ ವಲಸೆ ಬಂದ ಹಳ್ಳಿಯ ರೈತರಾಗಿದ್ದರು. ಹೊಸ ಕಟ್ಟಡಗಳು ಏಳುವ ಸಂದರ್ಭದಲ್ಲಿ ಇವರಿಗೆ ಕೆಲಸ ಸಿಗುತ್ತಿದ್ದರೂ ಮೂರುನಾಲ್ಕು ತಿಂಗಳುಗಳಲ್ಲಿ ಕಟ್ಟಡದ ನಿರ್ಮಾಣಕಾರ್ಯ ಪೂರೈಸಿದೊಡನೆ, ಇವರು ಮತ್ತೆ ನಿರ್ಗತಿಕರಾಗುತ್ತಿದ್ದರು. ಬೇರೆಡೆ ಕೆಲಸ ಸಿಗುವವರೆಗಂತೂ ಇವರ ಸ್ಥಿತಿ ತೀರ ಚಿಂತಾಜನಕವಾಗುತ್ತಿತ್ತು. ಹೀಗಿರುವಾಗ ಇವರ ಮಕ್ಕಳ ಪಾಡು ಹೇಗಿರಬೇಡ?

ಶಿಶುವಿಹಾರ ನಡೆಸುವ ಅನುಭವವೇನೂ ಮೀರಾಳಿಗೆ ಇರಲಿಲ್ಲ. ಆದರೆ ಆಕೆ ಧೃತಿಗುಂದಲಿಲ್ಲ. ತೀಕ್ಷ್ಣಮತಿಯಾದ ಆಕೆ ಗಾಂಧಿ ವಸ್ತು ಪ್ರದರ್ಶನದ ಕಂಟ್ರಾಕ್ಟರನನ್ನು ಗೋಗರೆದು ಒಂದು ಟೆಂಟನ್ನು ಪಡೆದಳು. ಸ್ನೇಹಿತರಿಂದ ಮತ್ತು ಸಮಾಜಕಲ್ಯಾಣ ಸಂಸ್ಥೆಗಳಿಂದ ೩,೦೦೦ ರೂ.ಗಳಷ್ಟು ನಿಧಿಯನ್ನು ಸಂಗ್ರಹಿಸಿದಳು. ಒಬ್ಬಳು ಆಯಾಳನ್ನು ನೇಮಿಸಿಕೊಂಡಳು. ಕೆಲವು ತೊಟ್ಟಿಲುಗಳನ್ನೂ ಸಾಬೂನು ಮೊದಲಾದ ಸಾಮಾನುಗಳನ್ನೂ ಖರೀದಿಸಿ ೧೯೬೯ನೇ ಮಾರ್ಚ್ ೧೪ರಂದು ತನ್ನ ಮೊದಲ ಶಿಶುವಿಹಾರವನ್ನು ಧೈರ್ಯದಿಂದ ಪ್ರಾರಂಭಿಸಿಯೇ ಬಿಟ್ಟಳು.

ಆದರೆ ಅದು ಬಹುಕಾಲ ಮುಂದುವರಿಯಲಿಲ್ಲ. ಹೆತ್ತವರಿಂದ ಯಾವುದೇ ಶುಲ್ಕ ಪಡೆಯದೆ ಅವರ ಮಕ್ಕಳ ಜವಾಬ್ದಾರಿ ಹೊರಲು ಮೀರಾ ಮುಂದೆ ಬಂದರೂ ಅಪರಿಚಿತ ಮಹಿಳೆಯ ಮೇಲೆ ಭರವಸೆಯಿಡಲಾರದ ಕೆಲಸಗಾರರು ತಮ್ಮ ಮಕ್ಕಳನ್ನು ಕಳುಹಿಸಲು ಒಪ್ಪಲಿಲ್ಲ. ಶಿಶುವಿಹಾರಕ್ಕೆ ಸೇರಿದ ಕೆಲವೇ ಒರಟು ಮಕ್ಕಳನ್ನು ನೋಡಿಕೊಳ್ಳಲು ಸಾಧ್ಯವಾಗದೆ ಆಯಾ ಕೂಡ ಗೊಣಗುಟ್ಟಲಾರಂಭಿಸಿದಳು. ಜಮುನಾ ನದಿಯ ಮೇಲೆ ಒಂದು ದಿನ ಬೀಸಿದ ಬಿರುಗಾಳಿಯಿಂದ ಟೆಂಟು ಕೂಡ ಕುಸಿದು ನೆಲವನ್ನಪ್ಪಿತು.

ಆದರೆ ಕುಸಿಯಲಿಲ್ಲ ಮೀರಾ. ಆಯಾಳನ್ನು ವಜಾಮಾಡಿದ ಆಕೆ ಇನ್ನೊಬ್ಬಳನ್ನು ನೇಮಿಸಿಕೊಂಡಳು. ಕೆಲಸಗಾರರೊಂದಿಗೆ ಹೆಚ್ಚು ಹೆಚ್ಚು ಬೆರೆಯಲು, ಮಾತನಾಡಲು ಪ್ರಾರಂಭಿಸಿ ಅವರ ವಿಶ್ವಾಸ ಗಳಿಸಿಕೊಳ್ಳಲು ಪ್ರಯತ್ನಿಸಿದಳು. ತಮ್ಮ ಮಕ್ಕಳನ್ನು ಶಿಶುವಿಹಾರಕ್ಕೆ ಕಳುಹಿಸಲು ಹಿಂದೇಟು ಹಾಕಬೇಕಾಗಿಲ್ಲ ಎಂದು ಅವರಿಗೆ ತಿಳಿಸಿದಳು. ಕ್ರಮೇಣ ಅವಳ ಉದ್ದೇಶವೇನೆಂಬುದು ಬಹು

ಮುಂದಿಗೆ ಅರ್ಥವಾಗತೊಡಗಿತು. ಮತ್ತೆ ತಲೆಯೆತ್ತಿತು ಶಿಶುವಿಹಾರದ ಟೆಂಟು. ಒಂದು ತಿಂಗಳು ಕಳೆದಿರಬಹುದಷ್ಟೆ! ಹೌಜ್ ಖಾಸ್‌ನಲ್ಲಿ ದೊಡ್ಡ ಕಟ್ಟಡ ಒಂದರ ನಿರ್ಮಾಣವನ್ನು ವಹಿಸಿಕೊಂಡಿದ್ದ ಅಮೆರಿಕನ್ ಇಂಜಿನಿಯರನೊಬ್ಬ ಆ ಪ್ರದೇಶದಲ್ಲಿ ಕೆಲಸಗಾರರ ಮಕ್ಕಳಿಗಾಗಿ ಶಿಶುವಿಹಾರವೊಂದನ್ನು ತೆರೆಯುವಂತೆ ಮೀರಾಳನ್ನು ಕೇಳಿಕೊಂಡನಲ್ಲದೆ, ಹಣಕಾಸಿನ ನೆರವನ್ನೂ ನೀಡಲು ಮುಂದೆ ಬಂದ. ಸ್ವಲ್ಪ ಸಮಯದ ಅನಂತರ ಭಾರತ–ಜರ್ಮನಿ ಸಮಾಜಸೇವಾ ಸಂಸ್ಥೆಯೂ ಇಂಥದೇ ಬೇಡಿಕೆಯನ್ನು ಮೀರಾಳ ಮುಂದಿಟ್ಟಿತು. ಕೆನಡಾದ ರಾಯಭಾರಿಗಳ ಹೊಸ ಹೈಕಮಿಷನ್ ಕಟ್ಟಡದ ನಿರ್ಮಾಣ ನಿವೇಶನದಲ್ಲಿಯೂ ಶಿಶುವಿಹಾರ ಪ್ರಾರಂಭಿಸುವ ಅವಕಾಶ ಮೀರಾಳಿಗೆ ಒದಗಿಬಂತು.

೧೯೬೯ನೆಯ ಇಸವಿಕೊನೆಯ ವೇಳೆಗೆ, ಮೀರಾ ನಡೆಸುತ್ತಿದ್ದ ಶಿಶುವಿಹಾರಗಳಲ್ಲಿನ ಮಕ್ಕಳ ಸಂಖ್ಯೆ ೨೫೦ ಮುಟ್ಟಿತ್ತು. ಇವು ವಾರಕ್ಕೆ ಆರು ದಿನ, ಬೆಳಗ್ಗೆ ಎಂಟು ಗಂಟೆಯಿಂದ ಸಂಜೆ ನಾಲ್ಕೂವರೆ ಗಂಟೆಯ ತನಕ ತೆರೆದಿರುತ್ತಿದ್ದವು.

ಪ್ರಾರಂಭದ ಯಶಸ್ಸಿನಿಂದ ಉತ್ತೇಜಿತಳಾದ ಮೀರಾ ನವದೆಹಲಿಯ ಇತರ ಭಾಗಗಳಲ್ಲಿರುವ ಕಟ್ಟಡ ನಿರ್ಮಾಣ ನಿವೇಶನಗಳತ್ತಲೂ ದೃಷ್ಟಿ ಚಾಚಿದಳು. ೨೦ಕ್ಕಿಂತ ಹೆಚ್ಚು ಸಂಖ್ಯೆಯ ಸ್ತ್ರೀಯರನ್ನು ಕೆಲಸಕ್ಕೆ ನೇಮಿಸಿಕೊಳ್ಳುವ ಕಂಟ್ರಾಕ್ಟರುಗಳೆಲ್ಲ ಆ ಪ್ರದೇಶದಲ್ಲಿ ಶಿಶುವಿಹಾರಗಳನ್ನು ಪ್ರಾರಂಭಿಸಬೇಕೆಂಬ ಶಾಸನವನ್ನೂ ಈ ನಡುವೆ ಸರ್ಕಾರ ಜಾರಿಗೆ ತಂದಿತು. ಆದರೆ ಇದು ಬಹುಮಟ್ಟಿಗೆ ನಿರ್ಲಕ್ಷಿಸಲ್ಪಟ್ಟುದರಿಂದ ಮೀರಾಳಿಗೆ ಹೆಚ್ಚು ನೆರವಾಗಲಿಲ್ಲ.

ಮೊದಮೊದಲಿಗೆ ಶಿಶುಗಳ ಜವಾಬ್ದಾರಿ ನೋಡಿಕೊಳ್ಳುವುದಷ್ಟೇ ಮೀರಾಳ ಉದ್ದೇಶವಾಗಿತ್ತು. ಆದರೆ ಕ್ರಮೇಣ ಅವಳ ಕಾರ್ಯಕ್ಷೇತ್ರ ವಿಸ್ತರಿಸತೊಡಗಿತು. ಕೆಲಸಗಾರರು ಆಗಾಗ ಒಂದು ನಿವೇಶನದಿಂದ ಇನ್ನೊಂದು ನಿವೇಶನಕ್ಕೆ ಸಾಗಬೇಕಾಗಿ ಬರುವುದರಿಂದ, ಶಾಲಾ ವಯಸ್ಸಿನ ಮಕ್ಕಳ ವಿದ್ಯಾಭ್ಯಾಸ ಸುಗಮವಾಗಿ ಸಾಗಲು ಸಾಧ್ಯವಿರಲಿಲ್ಲ. ಹೀಗಾಗಿ ಶಿಕ್ಷಣ ಸೌಲಭ್ಯವಿಲ್ಲದೆ, ಕೆಲಸವನ್ನೂ ಮಾಡದೆ, ಶಿಶುವಿಹಾರದ ಸುತ್ತಮುತ್ತ ಅಲೆದಾಡುವ ಶಾಲಾವಯಸ್ಸಿನ ಮಕ್ಕಳ ಬಗ್ಗೆ ಆಲೋಚಿಸತೊಡಗಿದಳು ಮೀರಾ. ತದನಂತರ ಪ್ರತಿ ಶಿಶುವಿಹಾರದ ಸಮೀಪದಲ್ಲಿಯೂ ೩ ರಿಂದ ೬ ವರ್ಷದವರೆಗಿನ ಮಕ್ಕಳಿಗಾಗಿ ಕಿಂಡರ್‌ಗಾರ್ಟನ್ ಶಾಲೆಗಳನ್ನು ತೆರೆದಳಲ್ಲದೆ, ೬ ರಿಂದ ೧೨ ವರ್ಷದವರೆಗಿನವರಿಗಾಗಿ ತರಗತಿಗಳನ್ನೂ ನಡೆಸತೊಡಗಿದಳು. ವಯಸ್ಕ ಕೆಲಸಗಾರನೊಬ್ಬನ ಅಪೇಕ್ಷೆ–ಒತ್ತಾಯ

ಗಳಿಗೆ ಮಣಿದು ಅನಕ್ಷರಸ್ಥ ವಯಸ್ಕರಿಗಾಗಿ ಸಂಜೆತರಗತಿಗಳನ್ನೂ ಪ್ರಾರಂಭಿಸಿದಳು ಮೀರಾ.

ಹೀಗೆ ಅವಳ ಕಾರ್ಯಚಟುವಟಿಕೆಗಳು ಬಹುಮುಖಗೊಂಡವು. ಆದರೆ ಹಣಕಾಸಿನ ಬಿಕ್ಕಟ್ಟು ಹೆಚ್ಚುತ್ತಲೇ ಇತ್ತು. ಕಂಟ್ರಾಕ್ಟರುಗಳಿಂದ ಎತ್ತುವ ನಿಧಿ, ಸರ್ಕಾರದ ಧನಸಹಾಯ ಹಾಗೂ ಖಾಸಗಿ ಸಮಾಜಸೇವಾ ಸಂಸ್ಥೆಗಳು ನೀಡುವ ಕೊಡುಗೆ ಇವ್ಯಾವೂ ಸಾಲದೆ ಆದಾಯದ ಇತರ ಮೂಲಗಳನ್ನು ಅರಸಬೇಕಾಯಿತು ಮೀರಾ. ಅವಳ ಮನಸಿಗೆ ಕಿವಿಗೊಟ್ಟು ಕೆಲವು ಸ್ನೇಹಿತರು ಆರ್ಥಿಕ ನೆರವು ನೀಡಲು ಮುಂದೆ ಬಂದರು. ಸಿದ್ಧ ಉಡುಪನ್ನು ತಯಾರಿಸಿ ಮಾರುವ ಕೆಲವು ವರ್ತಕರು ಮಕ್ಕಳಿಗೆ ವಸ್ತ್ರದಾನ ಮಾಡಿದರು. ಮಕ್ಕಳು ತಯಾರಿಸಿದ ವರ್ಣಚಿತ್ರ ಮತ್ತಿತರ ಕಲಾವಸ್ತುಗಳ ತಿರುಗುಮಾರಾಟ ವ್ಯವಸ್ಥೆಯನ್ನು ಮಾಡಿದಳು ಮೀರಾ.

ಯೋಗ್ಯ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದೂ ಆರ್ಥಿಕ ಸಮಸ್ಯೆಯನ್ನು ಎದುರಿಸುವಷ್ಟೇ ಕಷ್ಟವಾಗಿತ್ತು. ಕೆಲಸಗಾರರ ಮಕ್ಕಳ ಮೇಲ್ವಿಚಾರಣೆ ನೋಡಿಕೊಳ್ಳಲು ಅರ್ಹ ಸಿಬ್ಬಂದಿ ಕೊರತೆ ಕಂಡುಬಂದಾಗ ಕೆಲಸಕ್ಕೆ ನೇಮಿಸಿಕೊಳ್ಳುವ ಮುನ್ನ ನೌಕರರಿಗೆ ತಾನೇ ತರಬೇತಿ ನೀಡಲು ನಿರ್ಧರಿಸಿದಳು ಮೀರಾ.

ನೌಕರರು ಮೈಗಳ್ಳರಾಗಿ ಕಾಲಕಳೆಯಲು ಸರ್ವಥಾ ಅವಕಾಶ ಕೊಡುತ್ತಿರಲಿಲ್ಲ ಮೀರಾ. ಶಿಸ್ತು-ಸಮಯಪಾಲನೆಗಳಿಗೆ ವಿಶೇಷ ಮಹತ್ವ ನೀಡುವ ಆಕೆಯ ಹದ್ದಿನ ಕಣ್ಣು ಸದಾ ನೌಕರರ ಮೇಲಿರುತ್ತಿತ್ತು. ಕೆಲಸಕ್ಕೆ ತಡವಾಗಿ ಬರುವ ನೌಕರರಿಗೆ ದಂಡ ವಿಧಿಸಲಾಗುತ್ತಿತ್ತು. ಮೀರಾಳ ಶಿಸ್ತಿನ ಸ್ವಭಾವದ ಬಗ್ಗೆ ಸಂಚಾರಿ ಶಿಶುವಿಹಾರಗಳ ಹಿರಿಯ ನೌಕರರಲ್ಲಿ ಒಬ್ಬಳಾದ ಮೋತಿಯ ಶರ್ಮ ನಗುತ್ತಾ ನುಡಿಯುವುದು ಹೀಗೆ: ಪ್ರಧಾನಿ ಇಂದಿರಾಗಾಂಧಿ ಆಂತರಿಕ ತುರ್ತು ಪರಿಸ್ಥಿತಿ ಘೋಷಿಸಿದಾಗ "ಆ ಮೊದಲೇ ಮೀರಾ ದೀದಿಯ ತುರ್ತುಪರಿಸ್ಥಿತಿಗೆ ಹೊಂದಿಕೊಂಡ ನಮಗೆ ಏನೂ ಅನಿಸಲಿಲ್ಲ".

ಅವರ ಸಂಚಾರಿ ಶಿಶುವಿಹಾರಗಳ ನೌಕರರ ಬಗ್ಗೆ ಮೀರಾಳಿಗೆ ವಿಶೇಷ ಕಾಳಜಿ ಇತ್ತು. ಅಲ್ಲಿ ದುಡಿಯುತ್ತಿರುವವರಲ್ಲಿ ಹೆಚ್ಚಿನವರು ಹೈಸ್ಕೂಲ್ ವಿದ್ಯಾಭ್ಯಾಸವನ್ನಷ್ಟೇ ಪಡೆದ ಮಧ್ಯಮ ವರ್ಗದ ಮಹಿಳೆಯರಾಗಿದ್ದರು. ಅವರ ಸಮಸ್ಯೆಗಳನ್ನು ತಿಳಿದುಕೊಳ್ಳುವ ಮೀರಾ ಅವುಗಳ ಪರಿಹಾರಕ್ಕೂ ಮಾರ್ಗ ತೋರಿಸುತ್ತಿದ್ದಳು. ಒಮ್ಮೆ, ಪಹಾರಿ ಬ್ರಾಹ್ಮಣ ಯುವತಿಯಾದ ಇಂದುಭಾಸಿನ್, ಹೆತ್ತವರ ವಿರೋಧಕ್ಕೆ ಕಿವಿಗೊಡದೆ, ಪಂಜಾಬಿ ಯುವಕನೊಬ್ಬನನ್ನು ಮದುವೆ

ಆಗಬೇಕಾದಾಗ, ಮೀರಾ ತಾನೇ ಮುಂದೆ ನಿಂತು ಆರ್ಯಸಮಾಜದಲ್ಲಿ ಮದುವೆಯ ವ್ಯವಸ್ಥೆ ಮಾಡಿ ಅವರ ತಂದೆಯ ಕ್ರೋಧಕ್ಕೆ ಬಲಿಯಾಗಿದ್ದಳು.

ನೌಕರರು ಮಾಡಲು ಇಷ್ಟಪಡದ ಅಥವಾ ಅಸಹ್ಯ ಪಡುವ ಕೆಲಸಗಳನ್ನು ಅವರಿಂದ ಮಾಡಿಸಿಕೊಳ್ಳುವ ಚತುರೆಯಾಗಿದ್ದಳು ಮೀರಾ. ಆಕೆ ಯಾವ ಕೆಲಸ ಮಾಡಲೂ ಹಿಂಜರಿಯುತ್ತಿರಲಿಲ್ಲ. ಕಸಗುಡಿಸುವ, ಮಕ್ಕಳ ಹೊಲಸು ಬಟ್ಟೆ ಸ್ವಚ್ಛಗೊಳಿಸುವ ಎಲ್ಲ ಕೆಲಸಕ್ಕೂ ಆಕೆ ಮುಂದಾಗುತ್ತಿದ್ದಳು. ಹರಿದ ಬಟ್ಟೆಗಳನ್ನು ತಾನೇ ಹೊಲಿಯುತ್ತಿದ್ದಳು ಮೀರಾ.

೧೯೭೦ರ ಮಧ್ಯದ ವೇಳೆಗೆ ಸಂಚಾರಿ ಶಿಶುವಿಹಾರಗಳು ಎಲ್ಲೆಡೆ ಯಶಸ್ವಿಯಾಗಿ ಕೆಲಸ ನಿರ್ವಹಿಸತೊಡಗಿದ್ದವು. ಬೇರೆ ಬೇರೆ ಮೂಲಗಳಿಂದ ಏಕಪ್ರಕಾರವಾಗಿ ಲಭಿಸುತ್ತಿದ್ದ ದಾನಕಾಣಿಕೆ ನೆರವಿನಿಂದಾಗಿ ಮುಂಬಯಿಯಲ್ಲೂ ಇಂಥ ಕೇಂದ್ರಗಳನ್ನು ತೆರೆಯಲು ಮೀರಾಳಿಗೆ ಸಾಧ್ಯವಾಯಿತು. ದೆಹಲಿಯ ಸುತ್ತಮುತ್ತ ಇರುವ ಅನೇಕ ಕೊಳೆಗೇರಿಗಳಲ್ಲಿ ಕೂಡ ಸಂಚಾರಿ ಶಿಶುವಿಹಾರಗಳು ತಲೆಎತ್ತಿದವು. ಇವು ಮಾದರಿ ಸೇವಾಸಂಸ್ಥೆಗಳೆಂಬ ಮಾನ್ಯತೆ ಪಡೆದುದರಿಂದ, ಮೀರಾಳ ಯೋಜನೆಗಳಿಗೆ 'ಯೂನಿಸೆಫ್'ನ ನೆರವೂ ಸಿಗತೊಡಗಿತು.

ತನ್ನ ಸಾಧನೆಯಿಂದ ಸಂಪೂರ್ಣ ತೃಪ್ತಿಗೊಂಡಿದ್ದರೂ ಭಾರತದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿರುವ ಅಲೆಮಾರಿ ಕೆಲಸಗಾರರ ದಾರಿದ್ರ್ಯ-ಅನಕ್ಷರತೆಗಳ ಬೃಹತ್ ಸಮಸ್ಯೆಯನ್ನು ಪೂರ್ಣವಾಗಿ ಪರಿಹರಿಸುವುದು ಕಷ್ಟವೆಂದು ಅರಿತಿದ್ದಳು ಮೀರಾ. ಆದರೆ ಶಿಶುವಿಹಾರಗಳಿರುವ ಕಟ್ಟಡ ನಿರ್ಮಾಣ ನಿವೇಶನಗಳಲ್ಲಿ ದುಡಿಯುತ್ತಿರುವ ಕೆಲಸಗಾರರ ಮಕ್ಕಳ ಸ್ಥಿತಿಗತಿಗಳು ತುಂಬ ಆಶಾದಾಯಕವಾಗಿವೆಯೆಂಬುದರಲ್ಲಿ ಸಂಶಯವಿಲ್ಲ. ದೇಶದ ಇತರ ಭಾಗಗಳಲ್ಲಿ ದುಡಿಯುತ್ತಿರುವ ಕೆಲವು ಕೆಲಸಗಾರರೂ ದೆಹಲಿಯ ಶಿಶುವಿಹಾರಗಳಿಗೆ ತಮ್ಮ ಮಕ್ಕಳನ್ನು ಸೇರಿಸಿದ್ದುಂಟು. ಉದಾಹರಣೆಗೆ, ಮಧ್ಯಪ್ರದೇಶದ ಸೈನಾದ ಗ್ರಾಮದ ೨೦ ವರ್ಷ ಪ್ರಾಯದ ಜಂಗಯನ್ನೇ ತೆಗೆದುಕೊಳ್ಳಿ. ತನ್ನ ಮೂವರು ಮಕ್ಕಳನ್ನೂ ನವದೆಹಲಿಯಲ್ಲಿ ಮೀರಾಳ ಸಂಚಾರಿ ಶಿಶುವಿಹಾರಕ್ಕೆ ಸೇರಿಸಿದ್ದರಿಂದ, ಅವನಿಗೆ ತನ್ನ ಹೆಂಡತಿಯೊಂದಿಗೆ ಕೆಲಸ ಹುಡುಕುತ್ತ ಯಾವ ಊರಿಗೆ ಬೇಕಾದರೂ ವಲಸೆ ಹೋಗಲು ಸಾಧ್ಯವಾಗಿದೆ. ಇತ್ತೀಚೆಗೆ ನವದೆಹಲಿಯ ಶಿಶುವಿಹಾರಗಳಿಗೆ ಭೇಟಿ ಕೊಟ್ಟ ನನಗೆ ಮೀರಾಳ ಸಂಸ್ಥೆಯಿಂದ ಪ್ರಯೋಜನ ಪಡೆದ ಅನೇಕ ಮಕ್ಕಳ ಮತ್ತು ಹಿರಿಯರ ಪರಿಚಯವಾಗಿದೆ. ಹೊಳೆಯುವ ಕಣ್ಣುಗಳ ೧೧ ವರ್ಷ ವಯಸ್ಸಿನ ರಮೇಶ್ ಕುರೇಲ್ ಇವರಲ್ಲಿ ಒಬ್ಬ. ಇವನಿಗೆ ಕಲಿಯುವುದರಲ್ಲಿ

ಅಪಾರ ಆಸಕ್ತಿ. ಈತ ವಯಸ್ಕರ ಸಂಜೆತರಗತಿಗಳಿಗೂ ತಪ್ಪದೆ ಹಾಜರಾಗುತ್ತಿದ್ದಾನೆ.

ಉತ್ಸಾಹಿ ಮಕ್ಕಳು ಹಾಗೂ ಸಂತೃಪ್ತ ಕೆಲಸಗಾರರು ಸದಾ ಪ್ರೋತ್ಸಾಹ ನೀಡುತ್ತಿದ್ದುದರಿಂದಲೇ ತನ್ನ ಆರೋಗ್ಯ ಕ್ರಮೇಣ ಕ್ಷೀಣಿಸುತ್ತಿದ್ದರೂ ಕಾರ್ಯಕ್ಷೇತ್ರವನ್ನು ಹೆಚ್ಚು ಹೆಚ್ಚು ವಿಸ್ತರಿಸಲು ಸಮರ್ಥಳಾದಳು ಮೀರಾ. ಆದರೆ ಬರುಬರುತ್ತ ಆಕೆಯ ಆರೋಗ್ಯ ತೀರ ಹದಗೆಟ್ಟಿತು. ೧೯೭೬ರ ಜುಲೈಯಲ್ಲಿ ನಡೆದ ವೈದ್ಯಕೀಯ ಪರೀಕ್ಷೆಯಿಂದ ಆಕೆ ಕ್ಯಾನ್ಸರ್ ವ್ಯಾಧಿಗೀಡಾದುದು ತಿಳಿದು ಬಂತು.

ಆದರೇನು? ಆಕೆಯದು ಅದಮ್ಯ ಉತ್ಸಾಹ. ಮೂರು ಬಾರಿ ವಿಕಿರಣ ಶಸ್ತ್ರಚಿಕಿತ್ಸೆಗೊಳಗಾದರೂ ತನ್ನ ಕೆಲಸದಲ್ಲಿ ಕಿಂಚಿತ್ತೂ ನಿರುತ್ಸಾಹ ತಾಳಲಿಲ್ಲ ಮೀರಾ. ಕಛೇರಿಗೆ ಹೋಗಲಾರದಷ್ಟು ನಿಶ್ಶಕ್ತಳಾದಾಗಲೂ ನೌಕರರನ್ನು ತನ್ನ ಮನೆಗೇ ಕರೆಸಿ ಅವರೊಡನೆ ವಿಚಾರವಿನಿಮಯ ನಡೆಸುತ್ತಿದ್ದಳು; ಸಂಚಾರಿ ಶಿಶುವಿಹಾರಗಳ ಅಭಿವೃದ್ಧಿಗಾಗಿ, ಸುಧಾರಣೆಗಳಿಗಾಗಿ ಹೊಸ ಹೊಸ ಯೋಜನೆಗಳನ್ನು ರೂಪಿಸುತ್ತಿದ್ದಳು. ಕ್ಯಾನ್ಸರ್ ತಜ್ಞರೊಂದಿಗೆ ಆರೋಗ್ಯದ ಬಗ್ಗೆ ಸಮಾಲೋಚನೆ ನಡೆಸಲು ೧೯೭೭ರಲ್ಲಿ ಮುಂಬಯಿಗೆ ಬಂದಾಗಲೂ ಅಲ್ಲಿನ ಕಾರ್ಯಕರ್ತರಿಗೆ, ಸಂಚಾರಿ ಶಿಶುವಿಹಾರ ಸಂಸ್ಥೆಯ ವಾರ್ಷಿಕ ಪತ್ರಿಕೆಯನ್ನು ಹೊರತರುವ ವಿಷಯದಲ್ಲಿ ಸಲಹೆ-ಸಹಾಯ ನೀಡಿದಳು ಮೀರಾ. "ಆ ಪತ್ರಿಕೆಯ ಬಿಡುಗಡೆಯನ್ನು ಕಾಣಲು ಮೀರಾದೀದಿ ಇರುವುದಿಲ್ಲವೆಂದು ನಮಗೆ ಆಗಲೇ ತಿಳಿದಿತ್ತು" ಎಂದು ಹೇಳುವ ಮುಂಬಯಿ ಶಾಖೆಯ ಕಾರ್ಯದರ್ಶಿಯಾದ ರುಕ್ಮಿಣಿ ಮಹಾದೇವನ್ ಹೀಗೆ ಮುಂದುವರಿಸುತ್ತಾರೆ: "ಎಂತಲೇ ನಮಗೆ ಪತ್ರಿಕೆಯ ಕೆಲಸದಲ್ಲಿ ಆಸಕ್ತಿ ವಹಿಸುವುದು ಕಷ್ಟವಾಗಿತ್ತು. ಆದರೆ ಆಕೆಯೋ—ಹಾಸಿಗೆಯಲ್ಲಿ ಮಲಗಿಕೊಂಡೇ ನಮಗೆ ಮಾರ್ಗದರ್ಶನ-ಸಲಹೆಗಳನ್ನು ನೀಡುತ್ತಿದ್ದರು".

೧೯೭೭ನೆ ಜುಲೈ ೨೨ರಂದು, ತನ್ನ ೪೫ನೆ ವಯಸ್ಸಿನಲ್ಲಿ ನಿಧನಳಾದಳು ಮೀರಾ.

ಸಾಯುವ ಸ್ವಲ್ಪ ಸಮಯದ ಮೊದಲು ಆಕೆ ಹೀಗೆಂದಿದ್ದಳು: "ದಾರಿದ್ರ್ಯ ಅನಕ್ಷರತೆಗಳು ದೂರದಿಂದ ಕಾಣುತ್ತಿರುವಾಗ ಅವು ಇಲ್ಲವೆಂದು ಭ್ರಮಿಸಲು ನಮಗೆ ಸಾಧ್ಯವಾಗುತ್ತದೆ. ಆದರೆ ಅವು ಸಮೀಪದಲ್ಲಿಯೇ ಕಂಡುಬಂದಾಗ ಹೋರಾಡುವುದೊಂದೇ ನಮಗುಳಿಯುವ ಮಾರ್ಗ". ಮೀರಾ ಮಾಡಿದ್ದೂ ಈ ಹೋರಾಟವನ್ನೇ. ಭಾರತದ ಈ ಸಾವಿರಾರು ಹಸುಳೆಗಳನ್ನು ಸತ್ಪ್ರಜೆಗಳನ್ನಾಗಿ

ರೂಪಿಸುವ ಸಂಚಾರಿ ಶಿಶುವಿಹಾರಗಳನ್ನು ಕೇವಲ ಎಂಟು ತಿಂಗಳಲ್ಲಿ ಸುಸಂಘಟಿತ ಸಂಸ್ಥೆಯನ್ನಾಗಿ ಬೆಳೆಸಿದ್ದಳು ಮೀರಾ.

"ಎಚ್ಚರಿಕೆಯಿಂದ ಯೋಜಿಸಲಾಗುವ ಕಾರ್ಯಕ್ರಮಗಳ ಮೂಲಕ ಅತ್ಯಂತ ಹಿಂದುಳಿದ ಮಕ್ಕಳಿಗೂ ಉತ್ತಮ ಸೌಲಭ್ಯಗಳನ್ನು ಒದಗಿಸಿಕೊಡುವುದು ಸಾಧ್ಯವೆಂದು ಈ ಸಂಚಾರಿ ಶಿಶುವಿಹಾರಗಳು ತೋರಿಸಿಕೊಟ್ಟಿವೆ" ಎಂದು ಅಭಿಪ್ರಾಯಪಡುವ ಎನ್. ಸಿ. ಇ. ಆರ್. ಟಿ.ಯ ಮಕ್ಕಳ ಮನೋವಿಜ್ಞಾನಿಗಳಾದ ಡಾ! ರಾಜಲಕ್ಷ್ಮಿ ಮುರಳೀಧರನ್ ಹೇಳುವುದು ಹೀಗೆ: "ಅತ್ಯಂತ ನಿರುತ್ಸಾಹಕರ ಸನ್ನಿವೇಶದಲ್ಲಿಯೂ ಪ್ರಯೋಜನಕರವಾದ ರೀತಿಯಲ್ಲಿ ಹೇಗೆ ಕೆಲಸ ಮಾಡಬಹುದು ಎಂದು ತೋರಿಸಿಕೊಟ್ಟ ಮೀರಾ, ಬಡವರೊಡನೆ ಸಂಪರ್ಕವಿಟ್ಟುಕೊಳ್ಳುವ ಎಲ್ಲರಿಗೂ ಹೊಸ ಹಾದಿ ಹಾಕಿಕೊಟ್ಟಿದ್ದಾಳೆ".

ಹಂಸ ಐತಾಳ



ಒಬ್ಬನು ಸಾವಿರ ಸಲ ಸಾವಿರ ಜನರನ್ನು ಗೆಲ್ಲಬಹುದು. ಅದಕ್ಕಿಂತ ಯಾರೂ ತನ್ನನ್ನು ತಾನೇ ಗೆಲ್ಲುತ್ತಾನೋ ಅವನೇ ನಿಜವಾದ ವೀರನೂ ಪರಾಕ್ರಮಿಯೂ ಆಗಿರುತ್ತಾನೆ.

—ಮಹಾವೀರ

ಹಗಲು ಹೊತ್ತಿನಲ್ಲಿ ದೀಪ ಹೊತ್ತಿಸಲು ಕತ್ತಲೆ ಕಳೆಯುವದಕ್ಕಲ್ಲ. ಭಗವಂತನ ಪ್ರೀತಿಗಾಗಿ ಅವನು ಕೊಟ್ಟುದರಲ್ಲಿಯೇ ಸಂತೃಪ್ತನಾಗಿದ್ದು ಯಾವ ಪುರುಷಾರ್ಥವನ್ನು ಬಿಡದೇ ನಿಷ್ಕಾಮ ಉಪಾಸನೆ ಮಾಡುತ್ತಿರುವುದೇ ಮುಕ್ತಿಗೆ ಸಾಧನ.

—ಜಗನ್ನಾಥದಾಸ

ಪ್ರಕೃತಿಯ ಅಂದದ ವೈಚಿತ್ರ್ಯ : ಜಿರಾಫೆ

ಟ್ಯಾಂಜಾನಿಯಾದ ಕಿಲಿಮಾಂಜಾರೋ ಶಿಖರದ ಕೆಳಗೆ ಒಂದು ಬೆಟ್ಟದ ಮೇಲಿನಿಂದ ಜಿರಾಫೆಗಳನ್ನು ನೋಡುತ್ತಿರುತ್ತೇನೆ. ಅವು ಅಲ್ಲಿಯ ಅಡ್ಡದ ರಂತೆ ಜಾಲಿಯ ಮರಗಳ ಎಲೆಗಳನ್ನು ಮೇಯುತ್ತಾ ಇವೆ. ಇದ್ದಕ್ಕಿದ್ದಂತೆ ನಸು ಕಂದುಬಣ್ಣದ ಮಸುಕಾದ ಆಕೃತಿಗಳು ಕುರುಚಲು ಗಿಡದ ನಡುವೆ ಮುಂದೆ ನಂತೆ ಒಂದು ಜಿರಾಫೆ ಸಂದಿಯೆಡೆಗೆ ಸಾಗುತ್ತದೆ. ಮರುಗಳಿಗೆ ಎಚ್ಚರಿಕೆ ನೀಡುವ ಕ್ಷಣದ ನನ್ನ ಲ್ಯಾಂಡ್‌ರೋವರಿನ ಹಾರ್ನ್ ಕಡೆಗೆ ನನ್ನ ಕೈ ಸಾಗುತ್ತದೆ. ಆದರೆ ಈ ತೊಂದರೆ ತೆಗೆದುಕೊಳ್ಳಬೇಕಾಗಿರಲಿಲ್ಲ. ಆ ಪ್ರಾಣಿ ಆಗಲೇ ತನ್ನ ತಾಯಿಯ ಕಡೆ ವೇಗವಾಗಿ ಓಡುತ್ತಿದೆ. ಕೆಲವೇ ಕ್ಷಣಗಳಲ್ಲಿ ಉಳಿದೆಲ್ಲ ಜಿರಾಫೆಗಳೂ ಈ ಜಿರಾಫೆಯ ಹಿಂದೆ ಕೆಳಗೆ ಇಳಿಯುತ್ತಿರುವ ಬಾಲವನ್ನು ಕಂಡು (ಇದು ಪ್ರಕೃತಿ ಒದಗಿಸಿರುವ ಒಂದು ಅತ್ಯಂತ ಉಪಯುಕ್ತ ಮುನ್ನೆಚ್ಚರಿಕೆ ವಿಧಾನ) ಜತೆಗೂಡಿ ಓಡುತ್ತಿವೆ.

ಜಿರಾಫೆ ಪ್ರಪಂಚದಲ್ಲೇ ಅತ್ಯಂತ ಎತ್ತರದ ಪ್ರಾಣಿ. ಇದು ೫.೮ ಮೀಟರ್ ಎತ್ತರದವರೆಗೆ ಬೆಳೆಯಬಹುದು. ಇದು ಅತಿ ಅಸಹ್ಯವಾಗಿ ಕಾಣುವ ಪ್ರಾಣಿಯೂ ಹೌದು. ಆದರೂ ಇದು ಅತಿ ಜಾಗರೂಕತೆ ಹಾಗೂ ಚಟುವಟಿಕೆಯ ಪ್ರಾಣಿ ಸಹ ಆಗಿದೆ. ಕೊಕ್ಕರೆಯಂತೆ ಮೇಲೆ ನಿಮಿರಿದ ಕತ್ತಷ್ಟೇ ಅಲ್ಲದೆ ಅದರ ನೀಳ ತೊಟ್ಟಿನ ಮೇಲೆ ಹೂವು ಅರಳಿದಂತೆ ಇರುವ ಕಣ್ಣುಗಳ ಸಹಾಯದಿಂದ ಜಿರಾಫೆ ಹೆಚ್ಚು ಕಡಿಮೆ ಸುತ್ತಲೂ ೩೬೦° ಯಷ್ಟು ನೋಡಬಲ್ಲದು. ಉದ್ದವಾದ ಕಡ್ಡಿಕಾಲುಗಳ ಸಹಾಯದಿಂದ ಒಂದು ಟನ್ ತೂಕದ ಜಿರಾಫೆಯು ಗಂಟೆಗೆ ೫೫ ಕಿಲೋ ಮೀಟರು ವೇಗದಲ್ಲಿ ನಾಗಾಲೋಟದಲ್ಲಿ ಓಡಬಲ್ಲದು.

ಜಿರಾಫೆಯನ್ನು ಕುರಿತ ವಿವಿಧ ಐತಿಹ್ಯಗಳು ಪ್ರಚಲಿತವಾಗಿವೆ. ದೇವರು ಮತ್ತೆಲ್ಲ ಪ್ರಾಣಿಗಳನ್ನೂ ಸೃಷ್ಟಿಸಿ ಆದ ಮೇಲೆ ಮಿಕ್ಕ ಸಾಮಗ್ರಿಗಳಿಂದ ಇದನ್ನು ನಿರ್ಮಿಸಿದನಂತೆ. ಚಿರತೆ ಚರ್ಮ, ಜಿಂಕೆಯ ವೇಗ, ಒಂಟೆಯ ಕತ್ತು ಮತ್ತು ಕಾಲುಗಳು ಹೀಗೆ. ಪ್ರಾಚೀನ ಗ್ರೀಕರು ಒಂಟೆ ಮತ್ತು ಚಿರತೆಗಳ ಸಂಕರದಿಂದ ಜಿರಾಫೆ ಹುಟ್ಟಿತು ಎಂದು ಭಾವಿಸಿ ಈ ಪ್ರಾಣಿಗೆ ಕ್ಯಾಮಲೋ ಪಾರ್ಡಲಿಸ್ ಎಂದು ಹೆಸರಿಟ್ಟರು. ಅರಬರು ಇದನ್ನು ಜಾರಫಾ ಎಂದರೆ ಅತಿ

೧೯೬೦ ಜನವರಿಯ ರೀಡರ್ಸ್ ಡೈಜೆಸ್ಟ್ ಪತ್ರಿಕೆಯಲ್ಲಿನ ಎಡ್ವರ್ಡ್ ಹ್ಯೂಸ್‌ರವರ ನೇಚರ್ಸ್ ಎಲಿಗಾಂಟ್ ಆಡಿಟಿ : ದಿ ಜಿರಾಫೆ ಎಂಬ ಲೇಖನದ ಅನುವಾದ.

ಮೇಗದ ಮೃಗ ಎಂದು ಕರೆದರು. ಈ ಹೆಸರು ಈ ಪ್ರಾಣಿಗೆ ಅಲ್ಪಸ್ವಲ್ಪ ಬದಲಾವಣೆಗಳೊಡನೆ ಅಂಟಿಕೊಂಡಿತು. ಜಿರಾಫೆಗಳಲ್ಲಿ ಒಂಬತ್ತು ಬಗೆಯಿದ್ದರೂ ಒಂದು ಬಗೆಯದು ಮತ್ತೊಂದರೊಂದಿಗೆ ಕೂಡಿ ಸಂತಾನೋತ್ಪತ್ತಿ ಮಾಡಬಲ್ಲದು. ಹೀಗಾಗಿ ಈ ಎಲ್ಲ ಬಗೆಗಳೂ ಒಂದೇ ಜಾತಿ ಎಂದು ಪರಿಗಣಿಸಬೇಕು.

ಜಿರಾಫೆಯಲ್ಲಿ ಒಂದು ವಿಧದ ಸೊಬಗು ಇದೆಯಲ್ಲದೆ ಹೀಗೇ ಎಂದು ಹೇಳಲು ತಿಳಿಯದ ಮೋಹಕಶಕ್ತಿ, ಆಕರ್ಷಣೆ ಇದೆ. ದೊಡ್ಡ ದೊಡ್ಡ ಕಣ್ಣುಗಳು, ಅವುಗಳ ಅಂಚಿನ ರೆಪ್ಪೆಕೂದಲುಗಳು ದೊಡ್ಡ ಗಾತ್ರದ ಕಣ್ಣೀರು ಗ್ರಂಥಿಗಳಿರುವುದರಿಂದ ಕಣ್ಣುಗಳಲ್ಲಿ ತುಂಬಿ ತುಳುಕುತ್ತಿರುವ ಕಣ್ಣೀರು ಹನಿಗಳು, ಹಾಗಾಗಿ ಅದರಲ್ಲಿ ವ್ಯಕ್ತವಾಗುವ ಅಸಹಾಯಕತೆಯ ಭಾವಭಂಗಿ ಇವಕ್ಕೆ ಕಾರಣವಿರಬಹುದು. ಪಶುವೈದ್ಯರು ಕೊಡುವ ತಳಮಳ ಶಾಮಕ ಔಷಧಿಗಳಿಂದ ಕೆಲವು ವೇಳೆ ಜಿರಾಫೆ ಮರಣಾಂತಿಕ ಮೂರ್ಛೆಗೊಳಗಾಗಬಹುದು. ಆಕಸ್ಮಾತ್ ಜಾರಿ ನಾಲ್ಕೂ ಕಾಲುಗಳೂ ಚಾಚಿಕೊಂಡು ನೆಲಕ್ಕೆ ಬಿದ್ದರೆ ಆ ಜಿರಾಫೆ ತಿರುಗ ಮೇಲೇಳುವುದೇ ಇಲ್ಲ. ಸತ್ತೇಹೋಗುತ್ತದೆ.

ಇಷ್ಟಾದರೂ ಈ ಪ್ರಾಣಿ ಈಗ ೨೫ ಮಿಲಿಯನ್ ವರ್ಷಗಳಿಂದ ಹಾಗೇ ಕಾಲ ಹಾಕುತ್ತಿದೆ. ಯೂರೋಪ್, ಏಷ್ಯಾ ಮತ್ತು ಆಫ್ರಿಕಗಳಲ್ಲಿ ಸುತ್ತಾಡುತ್ತಿದ್ದ ಒಂದು ವಿಧದ ಜಿಂಕೆಯ ರೂಪದಲ್ಲಿ ಇದು ಮೊಟ್ಟಮೊದಲಿಗೆ ಜೀವವಿಕಾಸದಲ್ಲಿ ಕಾಣಿಸಿಕೊಳ್ಳುತ್ತದೆ. ನೂರು ವರ್ಷಗಳ ಹಿಂದೆ ಆಫ್ರಿಕದಲ್ಲಿ ಸಹರಾ ಮರುಭೂಮಿಯ ದಕ್ಷಿಣದಲ್ಲಿ ವಿಶಾಲವಾದ ಭೂಪ್ರದೇಶದಲ್ಲಿ ಜಿರಾಫೆಗಳು ಸುತ್ತಾಡಿಕೊಂಡು ಜೀವಿಸುತ್ತಿದ್ದವು, ಈಗ ಮಾನವ ನಿರ್ಮಿತ ನಗರಗಳು [illegible] ಊರುಗಳು ಇವುಗಳನ್ನು ಒತ್ತರಿಸಿಬಿಟ್ಟಿವೆ. ಪೂರ್ವ ಆಫ್ರಿಕದಲ್ಲಿ ಅಲ್ಲಲ್ಲೇ ಜನರು ಹೋಗಿರುವ ದ್ವೀಪಗಳಂತಹ ಕ್ಷೇತ್ರಗಳಲ್ಲಿ ಇವು ಈಗ ಜೀವಿಸುತ್ತಿವೆ. ಈಗ ಇವುಗಳ ಸಂಖ್ಯೆ ಎಲ್ಲ ಸೇರಿದರೆ ೪೫೦,೦೦೦ ಇರಬಹುದು.

ಈ ಪ್ರಾಣಿಗಳ ಅಲೆದಾಟಕ್ಕೆ ಸಿಗುವ ಭೂಮಿಯ ವಿಸ್ತೀರ್ಣ ದಿನೇ ದಿನೇ ಕಡಿಮೆಯಾಗುತ್ತಿದೆಯಾದರೂ ಖಡ್ಗಮೃಗ, ಆನೆ, ಚಿರತೆ ಮತ್ತು ಸಿಂಹಗಳಿಗಿಂತ ಈ ಪ್ರಾಣಿಯ ಭವಿಷ್ಯವೇ ಉತ್ತಮ. ಖಡ್ಗಮೃಗಗಳು ಕೃಷಿ ಯಂತ್ರಗಳನ್ನು ಧ್ವಂಸ ಮಾಡುತ್ತವೆ. ಆನೆಗಳು ಮುಸುಕಿನಜೋಳದ ಹೊಲಗಳನ್ನು ತುಳಿದು, ಮರಗಳನ್ನು ಕಿತ್ತು ಹಾಕುತ್ತವೆ. ಚಿರತೆಗಳು ದನಕರುಗಳನ್ನು ಕೊಲ್ಲುತ್ತವೆ. ಸಿಂಹಗಳಾದರೋ ಕೆಲವು ವೇಳೆ ರೈತರನ್ನೇ ಜಗಿದು ತಿನ್ನುತ್ತವೆ. ಜಿರಾಫೆಗಳು ಈ ರೀತಿ ತೊಂದರೆ ಕೊಡುವುದು ತುಂಬ ಅಪರೂಪ. ಕುರಿಗಳ ದನಕರು [illegible]

ಗಳ ಜೊತೆ ಸಹ ಹುಲ್ಲಿಗೆ ಇವುಗಳ ಪೈಪೋಟಿ ಇಲ್ಲ. ಏಕೆಂದರೆ ಇವು ಅಷ್ಟು ಬಗ್ಗಿ ಹುಲ್ಲನ್ನು ತಿನ್ನುವುದಿಲ್ಲ. ಮರಗಳ ಎಲೆಗಳು ಅಥವಾ ಎತ್ತರವಾದ ಪೊದೆಗಳ ಸೊಪ್ಪು ಇವುಗಳ ಆಹಾರ. ಪ್ರತಿನಿತ್ಯ ಇವು ತಲಾ ೪೫ ಕಿಲೋಗ್ರಾಂ ಸೊಪ್ಪನ್ನು ಕಬಳಿಸುತ್ತವೆ.

ಜಾಲಿಮರವೆಂದರೆ ಜಿರಾಫೆಗೆ ಬಲುಪ್ರೀತಿ. ಅದರ ಎಲೆಗಳ ಗೊಂಚಲು ಗಳು ಮತ್ತು ಎಳಸಾದ ಮುಳ್ಳಿನ ತುದಿಗಳನ್ನು ಇದು ತಿನ್ನುತ್ತದೆ. ಮೊದಲು ಇದರ ೪೫ ಸೆಂಟಿ ಮೀಟರ್ ಉದ್ದದ ನಾಲಿಗೆ ತುದಿಯನ್ನು ರಸರಸವಾದ ಒಂದು ರೆಂಬೆಯ ಸುತ್ತಾ ಸುತ್ತುತ್ತದೆ. ಬಳಿಕ ಎಕ್ಕಡಗಳ ಅಟ್ಟೆ ಗಳಷ್ಟೇ ದೊಡ್ಡದೂ ಗಡಸೂ ಆದ ತನ್ನ ತುಟಿಗಳ ನಡುವೆ ಈ ರೆಂಬೆಯನ್ನು ಎಳೆದುಕೊಂಡು ಬಾಯಿ ಮುಚ್ಚಿ ತಲೆಯನ್ನು ಜಗ್ಗುತ್ತದೆ. ಸರಿ, ಟೊಂಗೆಗಳು, ಎಲೆಗಳು ಕಾಯಿಗಳು ಮತ್ತು ಇರುವೆಗಳು ಎಲ್ಲ ಸೇರಿದ ರುಚಿ ರುಚಿಯಾದ ತುತ್ತು ನೀಟಾಗಿ ಗಡದಿಂದ ಇದರ ಹೊಟ್ಟೆ ಸೇರುತ್ತದೆ. ಗಾಢವಾದ ಲಾಲಾರಸ ಮತ್ತು ನಾಲ್ಕು ಕೋಣೆಗಳುಳ್ಳ ಜಠರದ ರಸದಲ್ಲಿನ ರಾಸಾಯನಿಕಗಳು ಆಹಾರದ ಕಡಸಾದ ಭಾಗಗಳನ್ನು ಮೆತ್ತಗೆ ಮಾಡುತ್ತವೆ.

ಜಿರಾಫೆಯ ಕತ್ತು ಒಂದು ವಿಧದ ನಿರೀಕ್ಷಣಾ ಸ್ತಂಭವೂ ಹೌದು, ಆಹಾರ ಸಂಗ್ರಾಹಕವೂ ಹೌದು. ಅಲ್ಲದೆ ಬೇಸಿಗೆಯ ಭಯಂಕರ ಬಿಸಿಲಿನಲ್ಲಿ ಇದು ಒಂದು ವಿಧದ ತಂಪುಗೊಳಿಸುವ ಗೋಪುರದಂತೆಯೂ ಕೆಲಸ ಮಾಡುತ್ತದೆ. ಇದರ ಮೇಲ್ಮೈ ವಿಸ್ತೀರ್ಣ ಹೆಚ್ಚಾಗಿರುವುದರಿಂದ ಈ ಚರ್ಮದ ಮೂಲಕ ದೇಹದ ಶಾಖ ಹೊರ ಹಂಚಿಹೋಗುತ್ತದೆ. ಪ್ರಕೃತಿಯಲ್ಲಿ ಅತ್ಯಂತ ಉದ್ದವಾದ ಶ್ವಾಸನಾಳ ಇದರದ್ದು. ಅದರ ಉದ್ದ ಒಂದೂವರೆ ಮೀಟರು. ಮಾನವ ಶ್ವಾಸ ಕೋಶಗಳ ಏಳರಷ್ಟು ಗಾತ್ರದ ಶ್ವಾಸಕೋಶಗಳು. ಇದರ ಮೂಲಕ ಕೊಳೆಯಾದ ಗಾಳಿಯನ್ನು ಹೊರಹಾಕಿ ಶುದ್ಧ ಗಾಳಿಯನ್ನು ರಭಸದಿಂದ ಒಳತರುತ್ತವೆ.

ಮುನ್ನಡೆಯುವಾಗ ಜಿರಾಫೆ ತನ್ನ ಕತ್ತನ್ನು ತನ್ನ ಚಲನೆಗೆ ವೇಗ ಕೊಡಲು ಉಪಯೋಗಿಸುತ್ತದೆ. ಸಾಧಾರಣ ನಡಿಗೆಯಲ್ಲಿ, ಜಗ್ಗು ಹಾಕಿಕೊಂಡು ಓಡು ವಾಗ, ನಾಗಾಲೋಟದಲ್ಲಿ ಮೊದಲು ತನ್ನ ತಲೆಯನ್ನು ಮುಂದೆ ಹಾಕುತ್ತದೆ. ಆಗ ಶರೀರದ ಗುರುತ್ವ ಕೇಂದ್ರವೇ ಬದಲಾಗುತ್ತದೆ. ಅನಂತರ ತಲೆಯನ್ನು ಹಿಂದೆ ಜಗ್ಗಿ ಆಮೇಲಿನ ಮುನ್ನಡೆಗೆ ಸಿದ್ಧವಾಗುತ್ತದೆ. ಅದರ ಕುತ್ತಿಗೆ ಬಲಿಷ್ಠ ವಾದ ಆಯುಧವೂ ಹೌದು. ಮನುಷ್ಯರು, ತಿಮಿಂಗಿಲಗಳು ಇನ್ನಿತರ ಸಸ್ತನಿ ಪ್ರಾಣಿಗಳಂತೆ ಇವುಗಳ ಕುತ್ತಿಗೆಯಲ್ಲಿ ಕೇವಲ ಏಳೇಏಳು ಕಶೇರುಮಣಿಗೇರು

ತ್ರವೆ. ಆದರೆ ಇವು ತುಂಬಾ ದೊಡ್ಡದಾಗಿದ್ದು ಒಬ್ಬ ಮನುಷ್ಯನ ತೋಳಿಗಿಂತ ದೊಡ್ಡವಾದ ಸ್ನಾಯುಗಳ ಆಧಾರ ಇವುಗಳಿಗಿರುತ್ತದೆ. ಕುತ್ತಿಗೆಯ ಮೇಲೆ ಕೋಡುಗಳಿರುವ ಬಲವಾದ ತಲೆಬುರುಡೆ ಇರುತ್ತದೆ. ಗಂಡು ಜಿರಾಫೆಯಲ್ಲಿ ಇದು ಆಜೀವಪರ್ಯಂತ ದಪ್ಪವಾಗುತ್ತಲೇ ಇದ್ದು ಒಮ್ಮೊಮ್ಮೆ ಮೊದಲಿದ್ದುದರ ಇಮ್ಮಡಿ ತೂಕವಾಗಬಹುದು.

ಪಶ್ಚಿಮ ಜರ್ಮನಿಯ ಫ್ರಾಂಕ್‌ಫರ್ಟ್ ಪಟ್ಟಣದ ಮೃಗಾಲಯದಲ್ಲಿಯ ಜಿರಾಫೆ ಆಟ್ಟೊ ತನ್ನ ಸಂಗಡಿಗ ೪೫೦ ಕೆ. ಜಿ. ತೂಕದ ಎಲ್ಕ್ ಜಾತಿಗೆ ಸೇರಿದ ಎಲ್ಯಾಂಡ್ ಹೋರಿಗೆ ತನ್ನ ತಲೆ ಮತ್ತು ಕುತ್ತಿಗೆಗಳಿಂದ ಪೆಟ್ಟು ಕೊಟ್ಟಿತು. ಈ ಸಂದರ್ಭವನ್ನು ಅಲ್ಲಿನ ನಿರ್ದೇಶಕರು ಭಯ ಗೌರವಗಳೊಡನೆ ಜ್ಞಾಪಿಸಿ ಕೊಳ್ಳುತ್ತಾರೆ. ಈ ಪೆಟ್ಟಿನಿಂದ ಎಲ್ಯಾಂಡ್ ಪ್ರಾಣಿಯ ಭುಜ ಮುರಿದೇಹೋಗಿ ಅದನ್ನು ಕೊಲ್ಲಬೇಕಾಯಿತು.

ಆದರೆ ಜಿರಾಫೆಗಳು ಹೀಗೆ ಜಗಳವಾಡಿ ಮೇಲೆ ಬೀಳುವುದು ಅಪರೂಪ. ಅದರ ಬದಲು ಸಾಮಾನ್ಯವಾಗಿ ಜಿರಾಫೆಗಳು ವಿಚಿತ್ರವಾದ ಒಂದು ಕ್ರಿಯೆ ಯಲ್ಲಿ ತೊಡಗುತ್ತವೆ. ವಿಜ್ಞಾನಿಗಳು ಈ ಕ್ರಿಯೆಗೆ "ಕಂಠಕ್ರೀಡೆ" ಎಂದು ಹೆಸರಿಟ್ಟಿದ್ದಾರೆ. ಗಂಡುಹೆಣ್ಣುಗಳ ಪ್ರಣಯಕ್ರೀಡೆಗೆ ಸಂಬಂಧಿಸಿದ ಕ್ರಿಯೆ ಇದೆಂದು ಮೊದಲು ಎಲ್ಲರೂ ತಿಳಿದಿದ್ದರು. ಇದು ಸರಿಯಲ್ಲ. ಗಂಡು ಜಿರಾಫೆ ಗಳ ಸ್ಥಾನಮಾನಗಳನ್ನು ನಿಷ್ಕರ್ಷೆ ಮಾಡಲು ನಿಯೋಜಿತವಾದ ಪ್ರಕ್ರಿಯೆ ಇದು. ಈ ಕ್ರಿಯೆಯಲ್ಲಿ ತೊಡಗಿರುವ ಜಿರಾಫೆಗಳು ಎಷ್ಟೋ ವೇಳೆ ಗಂಟೆಗಟ್ಟಲೆ ಒಂದನ್ನೊಂದು ಸೋಕಿಸಿಕೊಳ್ಳುವೆಯೂ ಇರಬಹುದು. ಕಡೆಗೆ ಅವುಗಳಲ್ಲಿ ಒಂದಕ್ಕೆ ಪ್ರಾಮುಖ್ಯ ದೊರೆಯುತ್ತದೆ. ಇದು ಹೇಗೆಂದು ತಿಳಿಯುವುದು ಕಷ್ಟ. ಇವೆಲ್ಲ ಆದ ಮೇಲೆ ವಿಜಯಗಳಿಸಿದ ಜಿರಾಫೆ ತಲೆ ನೇರವಾಗಿಟ್ಟುಕೊಂಡು ಗತ್ತು ಮೇಳೈಸಿಕೊಂಡು ಮತ್ತೊಂದು ಗಂಡು ಜಿರಾಫೆಯೆಡೆಗೆ ಮುನ್ನಡೆದರೆ ಸಾಕು (ಇದು ವಿಶಿಷ್ಟವಾದ ಜಿದಂಕೆ ಹಾಕುವ ರೀತಿ), ಎರಡನೆ ಜಿರಾಫೆ ಇದಕ್ಕೆ ದಾರಿ ಬಿಡುತ್ತದೆ.

ಎರಡು ಗಂಡು ಜಿರಾಫೆಗಳು ಹೀಗೆ ಒಂದರ ಕುತ್ತಿಗೆಯನ್ನು ಮತ್ತೊಂದರ ಸುತ್ತ ಬಳಸುವುದು, ತೆಗೆಯುವುದು ಮಾಡುತ್ತಿರುವುದನ್ನು ಟಾಂಜಾನಿಯದಲ್ಲಿ ಒಂದು ದಿನ ನಾನು ಗಮನಿಸಿದೆ. ಅರ್ಧ ಗಂಟೆಯ ಬಳಿಕ ಏನೊಂದೂ ನಿರ್ಣಯ ವಾಗದೆ ಎರಡೂ ಜಿರಾಫೆಗಳೂ ತಮ್ಮ ತಮ್ಮ ದಾರಿಹಿಡಿದು ಹೊರಟವು. ಒಂದು ಸೊಪ್ಪು ಮೇಯತೊಡಗಿತು. ಇನ್ನೊಂದು ಹತ್ತಿರವಿದ್ದ ತೊರೆಗೆ ನೀರು ಕುಡಿ

ಯಲು ತೊಡಗಿತು. [illegible] ಇದ್ದ ಅಲ್ಲಿನ ವನ್ಯಜೀವಿ ಸಂರಕ್ಷಕ ಜಾರ್ಜ್ ಸ್[illegible] ನನ್ನ [illegible] ಸನ್ನಿವೇಶ [illegible] ಇದು [illegible] [illegible] ಎಂದು ಹೇಳಿದರು. ನಿಂತು ಕುಡಿಯಲು ಹೋಗುವ ಜಿರಾಫೆ ತನ್ನ ಮುಂಗಾಲುಗಳನ್ನು ಅಗಲವಾಗಿ [illegible] ಮುಂಗಾಲುಗಳನ್ನು ವಿಸ್ತಾರವಾದ [illegible] ಬಗ್ಗಿಸಿ [illegible] ಕುತ್ತಿಗೆಯನ್ನು [illegible]. ಈ ಭಂಗಿಯಲ್ಲಿದ್ದಾಗ ಶತ್ರುಗಳ ದಾಳಿಗೆ ಸಿಗುವುದು ಬಲು ಸುಲಭ ಎಂದು ಅದಕ್ಕೆ ಗೊತ್ತು. ಆದ್ದರಿಂದ ಕೆಲವೇ ಕ್ಷಣಗಳ ನಂತರ ಥಟ್ಟನೆ ಬಾಯಿಂದ ನೀರು [illegible] ನಿಂತಿತು. ಸುತ್ತಮುತ್ತ ಕಣ್ಣು ಹಾಯಿಸಿ ಎಲ್ಲ ಕ್ಷೇಮ ಎಂದು ಖಾತರಿಯಾದ ಮೇಲೆ [illegible] ಬಗ್ಗಿತು. ನಾಲ್ಕು ಸಲ ಹೀಗೆ ಬಗ್ಗಿ ಎದ್ದು ಮಾಡಿ ದಾಹ ತೀರಿಸಿಕೊಂಡಿತು.

ಇದರ ವೈಚಿತ್ರ್ಯವೆಂದರೆ ತಲೆ ಹೀಗೆ ನೆಲದ ಮಟ್ಟಕ್ಕೆ ಬಗ್ಗಿ ತಿರುಗಿ ಮೇಲೇರುವುದನ್ನು ಕಂಡಾಗ ನನಗೆ ತುಂಬಾ ಸೋಜಿಗವಾಯಿತು. ಹೀಗೆ ಮಾಡುವಾಗ ಹೃದಯ ಮತ್ತು ಮಿದುಳುಗಳ ನಡುವೆ ರಕ್ತ ತೀವ್ರ ವೇಗದಿಂದ ನುಗ್ಗಿ ಪ್ರಾಣಿಗೆ ಜ್ಞಾನ ತಪ್ಪಬೇಕಾಗಿತ್ತು. ಜಿರಾಫೆಯ ಅಭಿಧಮನಿ ಮತ್ತು ಅಪಧಮನಿಗಳಲ್ಲಿ ಕವಾಟಗಳ ಜಾಲವು [illegible] ಇದ್ದು ಪ್ರಾಣಿ ಯಾವ ಭಂಗಿಯಲ್ಲಿದ್ದರೂ ರಕ್ತ ಎಲ್ಲ ಕಡೆಗೆ ಒಂದೇ ಸಮನಾಗಿ ಹರಿಯುತ್ತದೆ. ತಲೆ ಕೆಳಗೆ ಹಾಕಿದಾಗ ಮಿದುಳಿನ ತಳಭಾಗದಲ್ಲಿರುವ ರಕ್ತನಾಳಗಳು ಹಿಗ್ಗಿ ತಲೆಯೊಳಗೆ ಬಂದ ಹೆಚ್ಚಿನ ರಕ್ತಕ್ಕೆ ಸ್ಥಳ ಮಾಡಿಕೊಡುತ್ತವೆ. ತಲೆಯನ್ನು ಥಟ್ಟನೆ ಮೇಲೆತ್ತಿದಾಗ ಇವೇ ರಕ್ತನಾಳಗಳು ಕುಗ್ಗಿ ರಕ್ತಚಲನೆಯನ್ನು ತಡೆಯುತ್ತವೆ. ಈ ರಕ್ತನಾಳಗಳ ಸುತ್ತ ಮತ್ತು ಮಿದುಳಿನಲ್ಲಿರುವ ಮಿದುಳು ಬೆನ್ನುಹುರಿಗಳ ದ್ರವ ಈ ಒತ್ತಡಗಳಿಗೆ ಎದುರೊತ್ತಡವನ್ನು ನೀಡಿ, ಜೆಟ್ ಯುದ್ಧವಿಮಾನ ಚಲಾಯಿಸಿ ನೇರವಾಗಿ ಕೆಳಗಿಳಿದಾಗ ಅದರ ಚಾಲಕನಿಗೆ ಜ್ಞಾನ ತಪ್ಪದಂತೆ ಕಾಪಾಡುವ ಗ್ರಾವಿಟಿ ಸೂಟಿನ ಕೆಲಸ ಮಾಡುತ್ತವೆ. ಈ ಪ್ರಾಣಿಯಲ್ಲಿ ರಕ್ತ ಪಂಪ್ ಮಾಡುವುದೂ ಒಂದು ಅಗಾಧ ಕಾರ್ಯವೇ. ಇದಕ್ಕೆ ತಕ್ಕಂತೆ ಜಿರಾಫೆಯ ರಕ್ತದ ಒತ್ತಡ ಪ್ರಾಣಿಪ್ರಪಂಚದಲ್ಲೇ ಅತ್ಯಂತ ಉನ್ನತವಾದದ್ದು. ಇದರ ಹೃದಯ ಬಹಳ ದೊಡ್ಡದಾಗಿರುತ್ತದೆ. ಅದರ ತೂಕ [illegible] ಕಿಲೋಗ್ರಾಂಗಳು. ಉದ್ದ [illegible] ಸೆಂಟಿಮೀಟರ್‌ಗಳು. ಒಂದು ನಿಮಿಷಕ್ಕೆ [illegible] ಲೀಟರ್ ರಕ್ತವನ್ನು ಇದು ಪಂಪ್ ಮಾಡುತ್ತದೆ.

ಗಂಡು ಜಿರಾಫೆಯ ಜೀವನ ಒಂದಾಗುತ್ತಲೊಂದರಂತೆ ಬರುವ ಪ್ರಣಯ

ಪ್ರಸಂಗಗಳ ಸರಣಿ. ಅದೇ ಇದರ ಪ್ರಮುಖ ಹವ್ಯಾಸ. ಸೊಪ್ಪು ಮೇಯುತ್ತಿರುವಾಗಲೂ ಅದಕ್ಕೆ ಇದೇ ಧ್ಯಾನ. ಮರಗಳ ಮೇಲೆ ತಲೆಯೆತ್ತಿಕೊಂಡು ನಿಂತಿರುವ ಗಂಡು ಜಿರಾಫೆಗೆ ಅತ್ತ ಇತ್ತ ಹೋಗುತ್ತಿರುವ ಹೆಣ್ಣುಗಳು ಸುಲಭವಾಗಿ ಕಣ್ಣಿಗೆ ಬೀಳುತ್ತವೆ. ತನ್ನ ಸಂಗಕ್ಕೆ ಸಿದ್ಧವಾಗಿರುವ ಹೆಣ್ಣು ಕಂಡರೆ ಸಾಕು ಅಲ್ಲಿರುವ ಗಂಡು ಜಿರಾಫೆಗಳಲ್ಲಿ ಪ್ರಧಾನವಾದುದು ಅದನ್ನು ಕೂಡುತ್ತದೆ.

ಇದಾದ ಹದಿನೈದು ತಿಂಗಳ ನಂತರ ಹೆಣ್ಣು ಜಿರಾಫೆ ಕರು ಹಾಕುತ್ತದೆ. ಮರಿ ಧಡೀರೆಂದು ಒಂದೂವರೆ ಮೀಟರು ಅಥವಾ ಅದಕ್ಕಿಂತ ಹೆಚ್ಚು ಎತ್ತರದಿಂದ ಭೂಮಿಗೆ ಬೀಳುತ್ತದೆ. ಏಕೆಂದರೆ ಪ್ರಸವ ಸಮಯದಲ್ಲಿ ಅದರ ತಾಯಿ ನಿಂತೇ ಇರುತ್ತದೆ. ಇತ್ತೀಚಿನವರೆಗೆ ಎಲ್ಲರೂ ಭಾವಿಸಿದ್ದು ತಾಯಿಜಿರಾಫೆ ಮರಿಯ ವಿಷಯ ಏನೂ ಮನಸ್ಸಿಗೆ ಹಚ್ಚಿಕೊಳ್ಳುವುದಿಲ್ಲವೆಂದು. ಆದರೆ ಬ್ರಿಟನ್ನಿನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ರಾಬಿನ್ ಪೆಲ್ಲೂ ಇದು ನಿಜವಲ್ಲ ಎನ್ನುತ್ತಾರೆ. ಇವರು ಮತ್ತು ಇವರ ಪತ್ನಿ ಪ್ಯಾಟ್ ನಾಲ್ಕುವರ್ಷ ಹಗಲೂ ರಾತ್ರಿ ಎಡೆಬಿಡದೆ ಜಿರಾಫೆ ಮಂದೆಗಳನ್ನು ಹಿಂಬಾಲಿಸಿ ಅಧ್ಯಯನ ನಡೆಸಿದರು. ತಮ್ಮ ಮರಿಗಳನ್ನು ಕಾಪಾಡುವುದಕ್ಕೋಸ್ಕರ ಹೆಣ್ಣು ಜಿರಾಫೆಗಳು ದುಷ್ಟ ಮೃಗಗಳನ್ನು ಬಲವಾಗಿ ಒದೆಯುವುದನ್ನು ಇವರು ಕಂಡಿದ್ದಾರೆ. ಇಷ್ಟಾದರೂ ಹುಟ್ಟಿದ ಜಿರಾಫೆ ಮರಿಗಳಲ್ಲಿ ಅರ್ಧಕ್ಕಿಂತಲೂ ಹೆಚ್ಚು ಒಂದು ವರ್ಷ ತುಂಬುವಷ್ಟರಲ್ಲಿ ಸತ್ತುಹೋಗುತ್ತದೆ. ರೋಗ, ಕ್ಷಾಮಗಳಿಗೆ ಕೆಲವು ಬಲಿಯಾದರೆ ಉಳಿದವು ಸಿಂಹಗಳಿಗೆ ತುತ್ತಾಗುತ್ತವೆ.

ಜಿರಾಫೆಗೆ ಅಲೆದಾಡಲು ಅಂಥ ವಿಶಾಲವಾದ ಪ್ರದೇಶವೇನೂ ಬೇಕಿಲ್ಲವೆಂದು ಪೆಲ್ಲ್ಯೂರವರು ತೋರಿಸಿಕೊಟ್ಟಿದ್ದಾರೆ. ಈ ಪ್ರಾಣಿ ಸಾಮಾನ್ಯವಾಗಿ ಮಲಗುವುದೇ ಇಲ್ಲ. ಅಪರೂಪಕ್ಕೆ ಮಲಗಿದರೂ ಇತರ ಜಿರಾಫೆಗಳೊಡನೆ ಇದ್ದಾಗ ಮಾತ್ರ. ಒಂದು ಸಲಕ್ಕೆ ಇದು ಐದು ನಿಮಿಷಗಳಿಗಿಂತ ಹೆಚ್ಚು ಕಾಲ ಸರಿಯಾಗಿ ಕಣ್ಣುಮುಚ್ಚಿ ನಿದ್ದೆ ಮಾಡುವುದೇ ಇಲ್ಲ. ಜಿರಾಫೆ ಕಣ್ಣು ತೆರೆದೇ ನಿದ್ರಿಸಬಲ್ಲುದು, ಬಹುಶಃ ನಿಂತಿದ್ದಂತೆಯೇ ಆ ರೀತಿ ನಿದ್ರಿಸಬಲ್ಲುದು ಎಂದು ಕೆಲವು ವಿಜ್ಞಾನಿಗಳು ಭಾವಿಸಿದ್ದಾರೆ.

ಸೀಳು ಗೊರಸಿನ ಪ್ರಾಣಿಗಳಲ್ಲೆಲ್ಲಾ ಇದೇ ಅತ್ಯಂತ ಬುದ್ಧಿಶಾಲಿ ಎಂದು ಹೇಳಲಾಗುತ್ತದೆ. ಆದರೆ ಇದು ಅಂಥ ಶಿಫಾರಸ್ಸೇನೂ ಅಲ್ಲ. ಏಕೆಂದರೆ ಸೀಳು ಗೊರಸಿನ ಪ್ರಾಣಿಗಳು ಪ್ರಾಣಿಪ್ರಪಂಚದಲ್ಲೇ ಅತ್ಯಂತ ಮೂಢಮತಿಗಳೆಂದು

ಪರಿಗಣಿತವಾಗಿವೆ. ಆದರೆ ಜಿರಾಫೆಯ ಪ್ರೇಮಿಗಳಿಗೆ ಇದೆಲ್ಲ ಅಮುಖ್ಯ. ಈ ವಿಷಯವಾಗಿ ಕ್ಯಾರೆನ್ ಬ್ಲಿಕ್ಸ್‌ಟನ್ ಅವರು "ಆಫ್ರಿಕದಿಂದ" ಎಂಬ ತಮ್ಮ ಪುಸ್ತಕದಲ್ಲಿ ಬರೆದಿರುವುದನ್ನು ನೆನಸಬೇಕು. "ವಿಚಿತ್ರವಾದ, ಅನುಕರಣೀಯವಾದ ಸಸ್ಯವರ್ಗದ್ದು ಎನ್ನಬಹುದಾದ ನಾಜೂಕಿನ ಲಾವಣ್ಯ ಇವುಗಳಲ್ಲಿದೆ. ಇವು ಪ್ರಾಣಿಗಳ ಮಂದೆಯೇ ಅಲ್ಲ, ಅಪೂರ್ವವಾದ ನೀಳ ತ್ರೊಟ್ಟಿನ ಚುಕ್ಕೆಚುಕ್ಕೆಗಳಿರುವ ಅತಿ ದೊಡ್ಡ ಹೂಗಳ ಗೊಂಚಲು ಎನ್ನಬಹುದಾದಂಥ ಸೌಂದರ್ಯ ಇವುಗಳದ್ದು."

ಇಂಥ ಭವ್ಯ ವೈಚಿತ್ರ್ಯದ ಭವಿಷ್ಯವೇನು? ನಾಗರಿಕತೆಯ ಆಕ್ರಮಣದ ಫಲವಾಗಿ ಇನ್ನು ಮುಂದೆ ಪೂರ್ವ ಆಫ್ರಿಕದ ದೊಡ್ಡ ದೊಡ್ಡ ಅಭಯಾರಣ್ಯಗಳನ್ನು ಬಿಟ್ಟು ಉಳಿದೆಡೆ ಇವು ಉಳಿಯುವುದು ಅಶಕ್ಯ ಎನಿಸುತ್ತದೆ. ಆದರೂ ಟಾಂಜಾನಿಯಾದ ಸೆರೆಂಗೇಟಿ ಹಾಗೂ ಕೀನಿಯದ ಅಂಬೋಸೆಲಿಗಳ ಬಹು ವಿಶಾಲವಾದ ಅಭಯಾರಣ್ಯಗಳಲ್ಲಿ ಇವು ಚೆನ್ನಾಗಿ ಬಾಳಿ ಬದುಕುತ್ತಿವೆ. ನಮ್ಮ ಅದೃಷ್ಟ ಚೆನ್ನಾಗಿದ್ದು ವಿವೇಕದಿಂದ ನಾವು ನಡೆದುಕೊಂಡಲ್ಲಿ ಅನೇಕ ಕಾಲ ಇವು ನಮ್ಮೊಡನೆ ಇರುತ್ತವೆ.

ಯಮುನಾಬಾಯಿ ಆರ್. ರಾವ್



ಪ್ರಪಂಚದಲ್ಲಿ ಬಲಶಾಲಿಗಳಾಗಿರುವುದೇನೂ ಮಹತ್ವದ ವಿಷಯವಲ್ಲ. ಆದರೆ ಆ ಬಲವನ್ನು ಸದುಪಯೋಗಕ್ಕಾಗಿ ವಿನಿಯೋಗಿಸುವುದೇ ಮಹತ್ವವಾದದ್ದು.

—ಬೀಚರ

ಹೊಟ್ಟೆಯ ಹಸಿವೆಗೆ ಊಟ ಹೆಚ್ಚಾದರೆ ಅಜೀರ್ಣವಾಗುವುದು. ಆದರೆ ಜ್ಞಾನದ ಹಸಿವೆಗೆ ಅಜೀರ್ಣವೆಂಬುದಿಲ್ಲ.

—ಸಂತ ಜ್ಞಾನದೇವ

ಕರ್ನಾಟಕದ ನಾಗರಿಕತೆಯ ಪ್ರಾಚೀನತೆ-ಹಿರಿತನ ಗಳಿಗೊಂದು ನಿದರ್ಶನ

ಮಲಪ್ರಭಾ ನೀರಾವರಿ ಯೋಜನೆ ಪ್ರದೇಶದಲ್ಲಿ (ರಾಮದುರ್ಗ ತಹಶೀಲ್) ಪ್ರಾಚ್ಯವಸ್ತು ಶೋಧಕರು ಕ್ರಿಸ್ತಪೂರ್ವ ೧,೫೦,೦೦೦ ವರ್ಷಗಳಿಗೂ ಪ್ರಾಚೀನ ಕಾಲದ ಅವಶೇಷ ಮತ್ತು ಪಳೆಯುಳಿಕೆಗಳನ್ನು ಪತ್ತೆ ಹಚ್ಚಿದ್ದಾರೆ. ಅವರಿಗೆ ದೊರೆತಿರುವ ವಸ್ತುಗಳಲ್ಲಿ ಕಲ್ಲಿನ ಕೊಡಲಿ, ಉಳಿ, ಸಲಾಕೆ ಹಾಗೂ ಶಿಲಾಗೋಡೆ ಮೇಲೆ ಕೆತ್ತಲಾದ ಆಕೃತಿಗಳೂ ಸೇರಿದ್ದು ಕರ್ನಾಟಕದ ನಾಗರಿಕತೆಯ ಪ್ರಾಚೀನತೆಗೂ, ಹಿರಿತನಕ್ಕೂ ಮತ್ತೊಂದು ಪ್ರತ್ಯಕ್ಷ ನಿದರ್ಶನಗಳಾಗಿವೆ ಎನ್ನಲು ಅಡ್ಡಿ ಇಲ್ಲ.

ಹ. ಲ. ಶ್ರೀಕಂಠಮೂರ್ತಿ



ಸ್ವಾತಂತ್ರ್ಯವನ್ನು ಪಡೆಯಲು ತೆತ್ತಷ್ಟೇ ಬೆಲೆಯನ್ನು ಅದರ ರಕ್ಷಣೆಗಾಗಿಯೂ ತೆರಬೇಕಾಗುವುದು. ಗಳಿಸಿದ ಸ್ವಾತಂತ್ರ್ಯ ತಾನಾಗಿಯೇ ನಮ್ಮ ಕೈಯಲ್ಲಿ ಉಳಿಯಲಾರದು. ಅದನ್ನು ನಾವೇ ಸಾಕಿಕೊಂಡು ಹೋಗಬೇಕು;

—ನೆಹರೂಜಿ

ಹಾವು ತಿಂದವರ ನುಡಿಸಬಹುದು. ಗರ ಹೊಡೆದವರ ನುಡಿಸಬಹುದು. ಸಿರಿಗರ ಹೊಡೆದವರ ನುಡಿಸಲು ಬಾರದು ನೋಡಯ್ಯಾ, ಬಡತನ ಎಂಬ ಮಂತ್ರವಾದಿ ಹೋಗಲು ಒಡನೆ ನುಡಿವರು ಕೂಡಲ ಸಂಗಮದೇವಾ.

—ಬಸವಣ್ಣನವರು

ಶೋಧನೆಯ ಪಯಣ

"ಸೆರೆಂಡಿಪಿಟಿ" ಎಂಬ ಇಂಗ್ಲಿಷ್ ಶಬ್ದ ನೋಡಿದಾಗ, ಇದಾವುದೋ ಅಪೂರ್ವ ಎಲೆಬಳ್ಳಿ ಅಥವಾ ಹೂವಿನ ಹೆಸರೆನಬೇಕೆನಿಸುತ್ತದೆ. ಸಸ್ಯಶಾಸ್ತ್ರದ ಯಾವ ಗ್ರಂಥದಲ್ಲೂ ನಮಗೆ ಕಾಣಸಿಗದ ಈ ಶಬ್ದ ನಮ್ಮ ದರ್ಶನಚಿತ್ತ ಸ್ಥಿತಿಗೆ ಸಂಬಂಧಿಸಿದೆ. ಒಂದು ಅತ್ಯಮೂಲ್ಯ ವಸ್ತು ನಿಮಗೆ ಯಾವ ಕ್ರಮವಿಲ್ಲದೆ, ಅನಿರೀಕ್ಷಿತವಾಗಿ ದೊರೆತಾಗ ಅದರಿಂದಾಗುವ ಆನಂದವೇ 'ಸೆರೆಂಡಿಪಿಟಿ' "ನೋಡಿ.... ನಾವು ನಿಜವಾಗಿಯೂ ಭಾರತವನ್ನು ಕಂಡುಹಿಡಿಯಲಿಲ್ಲ. ನಾವು ಹೊರಟ ದಾರಿಯಲ್ಲಿ ಆಕಸ್ಮಿಕವಾಗಿ ಈ ಸಂಪತ್ಭರಿತ ಭೂಭಾಗ ಕಂಡಿತು" ಎಂದು ಕೊಲಂಬಸ್ ರಾಣಿ ಇಸಬೆಲ್ಲಾಳಿಗೆ ತಿಳಿಸುವಾಗ ಅವನಿಗಾದ ಸಂತೋಷಕ್ಕೆ ಇದೇ ಅರ್ಥವನ್ನು ಕಲ್ಪಿಸಬಹುದು.

ನಿಜಸಂಗತಿಯೆಂದರೆ ಕೊಲಂಬಸನಿಗೆ ತಾನೊಂದು ಹೊಸ ಖಂಡವನ್ನು ಕಂಡುಹಿಡಿದದ್ದು ಕೊನೆಗೂ ತಿಳಿಯಲಿಲ್ಲ. ತಾನು ಬರಿಗೈಯಿಂದ ಮರಳಬಾರದೆಂಬ ಛಲವೇ ಆತನನ್ನು ಯಶಸ್ಸಿನೆಡೆಗೆ ಕರೆದೊಯ್ಯಿತು. ಜೀವನದ ಈ ಪಯಣ ಕ್ರಮಬದ್ಧವಾಗಿರುವುದಿಲ್ಲ. ಅನೇಕ ಸಲ ನಾವೆತ್ತ ಸಾಗಿದ್ದೇವೆಂಬುದನ್ನು ಅರಿಯುವಷ್ಟರಲ್ಲಿಯೇ ಸಾಕಷ್ಟು ಕಾಲ ಕಳೆದು ಹೋಗಿರುತ್ತದೆ. ಅಲ್ಲದೆ ನಾವಿಟ್ಟುಕೊಂಡ ಗುರಿಯನ್ನು ತಲುಪಲೂ ಆಗುವುದಿಲ್ಲ. ಆದರೂ ಕೊಲಂಬಸನಂತೆ ನಾವು ಕೂಡಾ ಹೊಸ ಹಾಗೂ ಅನಿರೀಕ್ಷಿತ ಯಶಸ್ಸಿಗೆ ಸಿದ್ಧರಾಗಬೇಕು. ಏನಾದರೂ ಹೊಸದೊಂದನ್ನು ಕಂಡುಹಿಡಿಯಬೇಕೆಂಬ ಛಲ ನಮ್ಮ ಉಸಿರಾಗಬೇಕು. ಸಾಧ್ಯವಾದಲ್ಲಿ ನಮ್ಮ ಜೀವನವನ್ನೇ ಇಂಥ ಅನಿರೀಕ್ಷಿತ ಹಾಗೂ ಹೊಸ ಶೋಧನೆಗಳ ಪಯಣವನ್ನಾಗಿ ಮಾರ್ಪಡಿಸಬೇಕು.

ನನ್ನ ಪರಿಚಯದ ಒಬ್ಬ ವ್ಯಾಪಾರಿ ತನ್ನ ಹಾಯಿದೋಣಿಗೆ (ಯಾಟ್) "ಸೆರೆಂಡಿಪಿಟಿ" ಎಂದು ಹೆಸರಿಟ್ಟಿದ್ದಾನೆ. "ಈ ದೋಣಿಯನ್ನು ಓಡಿಸುವುದೇ ನನ್ನ ಕೆಲಸ. ಗಾಳಿಯನ್ನು ನೋಡಿಕೊಂಡು ನಾನು ದಿಕ್ಕು ಬದಲಿಸುವದಿಲ್ಲ. ಎದುರು ಗಾಳಿ ಇದ್ದರೂ ನಾನು ಹೆದರದೆ ನನ್ನ ಮನಸ್ಸಿಗೆ ಬಂದಂತೆ ಓಡಿಸುತ್ತೇನೆ. ಗಾಳಿಯಿಂದಾಗಿ ಅದರ ದಾರಿ ತಪ್ಪಿದರೂ ನಾನು ಹೆದರುವದಿಲ್ಲ. ಇದ

೧೯೮೭ರ ಆಗಸ್ಟ್ ತಿಂಗಳ 'ರೀಡರ್ಸ್ ಡೈಜೆಸ್ಟ್' ಮಾಸಪತ್ರಿಕೆಯಲ್ಲಿ ಪ್ರಕಟವಾದ ಡೋರಿಸ್ ಲ್ಯಾಂಪ್ ಅವರ "ವಾಯೇಜ್ ಆಫ್ ಡಿಸ್ಕವರಿ" ಎಂಬ ಲೇಖನದ ಅನುವಾದ.

ಂದಾಗಿ ಮೊದಲೆಂದೂ ಕಾಣದ ಹೊಸ ಬಂದರುಗಳನ್ನು ನಾವು ತಲುಪಲು ಸಾಧ್ಯವಾಗಬಹುದು". ಎಂದು ಉತ್ಸಾಹದಿಂದ ಹೇಳಿದ.

ವಿಜ್ಞಾನಿಗಳು ಯಾವಾಗಲೂ ಕ್ರಮಬದ್ಧತೆಯನ್ನು ಕಾಪಾಡಿಕೊಂಡು ಹೋಗುತ್ತಾರೆಂಬುದು ನಮ್ಮಲ್ಲಿರುವ ನಂಬಿಕೆ. ಅವರು ನಿಜವಾಗಿಯೂ ಕ್ರಮಬದ್ಧರಾಗಿದ್ದರೆ ಜಗತ್ತಿನ ಅನೇಕ ಮಹಾನ್ ಆವಿಷ್ಕಾರಗಳ ಫಲ ನಮಗೆ ದೊರೆಯುತ್ತಿರಲಿಲ್ಲವೇನೋ! ಶೋಧನೆಗಳನ್ನು ನಡೆಸುತ್ತಿದ್ದಂತೆ ಕೆಲವೊಮ್ಮೆ ಎಡವಿಬೀಳುವುದು, ತಪ್ಪುಗಳಾಗುವುದು ಸಹಜ. ಆದರೆ ಇಂಥ ಸಮಯಗಳಲ್ಲಿ 'ಏನಾಯಿತು? ಏಕಾಯಿತು?" (ತಾವು ತಪ್ಪಿದ್ದೆಲ್ಲಿ? ಏಕೆ?) ಎಂದು ನೋಡಿದಾಗ ಆಕಸ್ಮಿಕವಾಗಿ ಕೆಲವೊಂದು ಆವಿಷ್ಕಾರಗಳಾಗಿದ್ದು ಹೊರಬಂದಿದೆ. ಅಲೆಗ್ಸಾಂಡರ ಬೆಲ್ ಯಾವುದೋ ಕೆಲಸದಲ್ಲಿ ನಿರತನಾಗಿದ್ದಾಗ ಆಮ್ಲದ ಹನಿಗಳು ಅವನ ಉಡುಪಿನ ಮೇಲೆ ಚೆಲ್ಲಿದುದರ ಫಲವಾಗಿಯೇ ಟೆಲಿಫೋನಿನ (ದೂರವಾಣಿ) ಆವಿಷ್ಕಾರವಾಯಿತೆಂಬುದು ಅನೇಕರಿಗೆ ತಿಳಿದಿಲ್ಲ. ರಬ್ಬರಿನ ಜಿಡ್ಡುಮುದ್ದೆ ಮತ್ತು ಗಂಧಕದ ಮಿಶ್ರಣದ ತುಣುಕು ಬಿಸಿ ಒಲೆಯ ಮೇಲೆ ಬಿದ್ದು–ಅನಿರೀಕ್ಷಿತ ಹಾಗೂ ಆಕಸ್ಮಿಕ ಯಶಸ್ಸೆಂಬಂತೆ–ರಬ್ಬರನ್ನು ಮೃದುಗೊಳಿಸುವ (ವಲ್ಕನೀಕರಣ) ಹೊಸ ವಿಧಾನವೊಂದು ಬೆಳಕಿಗೆ ಬಂದು, ಈ ದಿಶೆಯಲ್ಲಿ ಶ್ರಮಿಸಿದ್ದ ಚಾರ್ಲ್ಸ್ ಗುಡ್‌ಇಯರನನ್ನು ಅಮರಗೊಳಿಸಿತು. "ಅನೇಕ ಜನರು ಎಡವಿ ಶೋಧನೆಗಳ ಮೇಲೆ ಬೀಳುತ್ತಾರೆ. ಆದರೆ ಕೆಲವರು ಮಾತ್ರ ಆ ಕ್ಷಣದಲ್ಲಿ (ಶೋಧನೆಯನ್ನು) ಗುರುತಿಸಿ ಪ್ರಕಟಿಸುತ್ತಾರೆ. ಉಳಿದ ಅನೇಕರು ಗುರುತಿಸದೆ ಎದ್ದು ಮುಂದುವರಿಯುತ್ತಾರೆ" ಎಂದು ವಿನ್‌ಸ್ಟನ್ ಚರ್ಚಿಲ್ ಅಭಿಪ್ರಾಯಪಟ್ಟಿದ್ದಾರೆ.

ಈ "ಆಕಸ್ಮಿಕ ಯಶಸ್ಸಿನ ಆನಂದ" (ಸೆರೆಂಡಿಪಿಟಿ) ವಿಜ್ಞಾನಿಗಳ ಪಾಲಿಗೆ ವರದಾನವೇ ಆಗಿರಬಹುದು. ಆದರೆ ಇದು ಇತರರಿಗೂ ಅನ್ವಯಿಸಿ ಅವರ ಬೇಜಾರನ್ನು ದೂರ ಮಾಡಬಹುದೆ? ಇಂಥ 'ಆಕಸ್ಮಿಕ ಯಶಸ್ಸಿನ ಆನಂದ' ಪಡೆಯಬೇಕಾದರೆ ಕೆಲವೊಂದು ನಿಯಮಗಳನ್ನು ಪಾಲಿಸುವುದು ಅಗತ್ಯ.

೧. ಅರಿವನ್ನು ಬೆಳೆಸಿಕೊಳ್ಳುವುದು: ಹೆಸರಾಂತ ತೈಲ ಚಿತ್ರಕಾರ ರಿಕೊ ಲಿಬರ್ನ್ ತನ್ನ ಅರಿವನ್ನು ಬೆಳೆಸಿಕೊಳ್ಳುವ ಉದ್ದೇಶದಿಂದ ತನ್ನ ಮನೆಯಿಂದ ಸ್ಟುಡಿಯೋಕ್ಕೆ ನಡೆಯುತ್ತಲೇ ಹೋಗುತ್ತಿದ್ದ. ಪ್ರತಿಸಲವೂ ಹೊಸ ವಸ್ತುವೊಂದನ್ನು ಆ ದಾರಿಯಲ್ಲಿ ಕಾಣಬೇಕೆಂಬುದೇ ಅವನ ಉದ್ದೇಶ. ಇದೇನು ಅಷ್ಟೇನು ಸುಲಭ ಕೆಲಸವಲ್ಲ. ಇಂಥ ಓಡಾಟದಲ್ಲಿ "ಹೊಸವಸ್ತು" ಆಕಸ್ಮಿಕ

ವಾಗಿ, ಅನಿರೀಕ್ಷಿತವಾಗಿ ಚಕಿತಗೊಳಿಸುವಂತೆ ನಮ್ಮ ಮುಂದೆ ಬಂದು ನಿಲ್ಲಬಹುದು ಮತ್ತು ಅದನ್ನು ಗುರುತಿಸಿ ಸ್ವಾಗತಿಸಲು ನಾವು ಸಿದ್ಧರಿರಬೇಕೆಂಬುದನ್ನು, ಎಲ್ಲ ಪ್ರತಿಭಾವಂತರಂತೆ, ಲಿಬರ್ಸ್ ಕೂಡಾ ಅರಿತಿದ್ದ.

೨. **'ಬಲಿ'ಯನ್ನು ಸರಿಪಡಿಸಿಕೊಳ್ಳುವುದು**: ಮಾನವ ಅತಿನಿರಾಶೆ ಅಥವಾ ಕಷ್ಟದಿಂದ ಬಳಲುವಾಗ, ಆಕಸ್ಮಿಕವಾಗಿ, ಯಾವುದೋ ಪ್ರೇರಣೆಯಿಂದ ಯಶಸ್ಸಿನ ದಿಕ್ಕಿಯಲ್ಲಿ ಸಾಗುತ್ತಾನೆ. ಕಷ್ಟಕಾಲದಲ್ಲಿ ಪ್ರಯತ್ನದ ಮಾರ್ಗವನ್ನು ಬಿಡದೆ—ತ 'ಬಲಿ'ಯಿಂದ ದೂರವಾಗದೆ—ಸಾಗಬೇಕು. ಇಲ್ಲಿ ನಿಷ್ಠೆ, ಪ್ರೀತಿ, ತತ್ತ್ವ, ಪ್ರಾಮಾಣಿಕತೆ, ಸ್ನೇಹ ಮುಂತಾದ ಬಲಗಳ ರಕ್ಷೆ ನಮಗೆ ಅವಶ್ಯಕವಾಗುತ್ತವೆ. ಒಬ್ಬ ಮನುಷ್ಯ ಮಾತ್ರ ಇನ್ನೊಬ್ಬನ ಎಲ್ಲ ಸಮಸ್ಯೆಗಳಿಗೂ ಪರಿಹಾರ ತೋರಲಾರ. ಇತರರ ಸಹಾಯದಿಂದಲೇ ನಮ್ಮ ಜೀವನದ ಕಗ್ಗತ್ತಲನ್ನು ದಾಟಿ ಬೆಳಕಿನೆಡೆಗೆ ಸಾಗಲು ಸಾಧ್ಯ. ನಾವು ವಿವಿಧ ಅಭಿರುಚಿ—ಅಭ್ಯಾಸ, ಆಟ, ಕಸುಬುಗಳಿಗೆ ಮೊರೆಗೊಂಡು ಬೆನ್ನಟ್ಟುವುದರಲ್ಲಿ ಯಾವುದನ್ನೂ ಸಾಧಿಸದೆ ಹೋಗುತ್ತೇವೆ. ಆದರೆ ಒಂದರಲ್ಲಿ ಯಶ ದೊರೆಯದಿದ್ದಾಗ, ಎದೆಗುಂದದೆ, ಮತ್ತೊಂದು ಕ್ಷೇತ್ರದಲ್ಲಿ ಪ್ರಯತ್ನಿಸಬಹುದು. "ನನ್ನ ಪತಿಯ ಮರಣದ ಅನಂತರ ನೃತ್ಯವೇ ನನ್ನಲ್ಲಿ ಹೊಸ ಚೇತನ ತಂದಿತು. ನಾನು ನೃತ್ಯಗಾತಿಯಾಗಬೇಕೆಂಬ ಬಹುದಿನಗಳ ಬಯಕೆ ಕೊನೆಗೂ ಈಡೇರಿದೆ" ಎಂದು ನನ್ನ ಪರಿಚಯದ ಮಹಿಳೆಯೊಬ್ಬಳು ಹೇಳಿದಳು. ಅನೇಕ ವರ್ಷಗಳ ಹಿಂದೆಯೇ ಮನದಲ್ಲಿ ಹಸಿಯಾಗಿದ್ದ 'ಬಲಿ' ಅವಳ ಪತಿಯ ಮೃತ್ಯುವಿನಿಂದಾದ ದುಃಖವನ್ನು ಶಮನಗೊಳಿಸುವಲ್ಲಿ ಸಹಾಯ ಮಾಡಿತು.

೩. **ಸಹಸ್ರಾಂಶವನ್ನು ಸಹಸ್ರದೆಡೆಗೆ ತಿರುಗಿಸಿರಿ**: "ನನಗೆ ತಿಳಿದಿರುವ ವಿಷಯ ಸ್ವಲ್ಪವೇ ಆದರೂ ಅದರ ಬಗ್ಗೆ ಹೆಚ್ಚು ತಿಳಿದುಕೊಳ್ಳುವಂತೆ ಪ್ರೇರೇಪಿಸುತ್ತದೆ" ಎಂದು ವಿಲಿಯಂ ಜೇಮ್ಸ್ ಬರೆದ. ತಲೆಯಲ್ಲಿ ಸಂಗ್ರಹವಾದ ಅನೇಕ ವಿಚಾರಗಳ ಮೂಲಕ ಹೊಸ ಅನುಭವ ಹಾಗೂ ರಚನೆಯನ್ನು ಕಲ್ಪಿಸುವುದನ್ನೇ ಅವನು ಮನಃಪ್ರಜ್ಞೆ ಎಂದು ಕರೆದನು. ಇದನ್ನು ಒಂದು ಬಾವಿಯ ನೀರನ್ನು ಬೇರೆ ಬೇರೆ ಆಕೃತಿಯ ಕೊಡಗಳಲ್ಲಿ ತುಂಬುವುದಕ್ಕೆ ಹೋಲಿಸಬಹುದು. ಕೆಲವರಲ್ಲಿ ಈ ಮನಃಪ್ರಜ್ಞೆ ಬಹಳ ಕಡಿಮೆ ಪ್ರಮಾಣ (ಸಹಸ್ರಾಂಶ) ದಲ್ಲಿರಬಹುದು. ಇಂಥವರು ಆಸಕ್ತಿ ವಹಿಸಿ ತಮ್ಮ ವಿಚಾರಶಕ್ತಿಯನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುವುದಿಲ್ಲ. ಇದರಿಂದಾಗಿ ಹೊಸ ಅನುಭವದ ಲಾಭಕೂಡಾ ಬಹಳ ಕಡಿಮೆ ಪ್ರಮಾಣ ಪಡೆಯುತ್ತಾರೆ. ಹೆಚ್ಚಿನ ಪ್ರಮಾಣದ

ಮನಃಪ್ರಜ್ಞೆಯುಳ್ಳ ಜನರು, ಹೊಸ ಅನುಭವಗಳನ್ನು, ಆಸಕ್ತಿ ಹಾಗೂ ಅಚ್ಚರಿಯಿಂದ ಯೋಚಿಸಿ, ಬುದ್ಧಿಯನ್ನು ಬೆಳೆಸಿಕೊಳ್ಳುತ್ತಲೇ ಇರುತ್ತಾರೆ:

ಕೆಲವೊಮ್ಮೆ ನಮಗೆ ಹೋರಾಡಲು ಸಾಧ್ಯವಾಗದಾಗ ಅಥವಾ ದಿಕ್ಕು ತೋಚದಂತಾದಾಗ "ಆಕಸ್ಮಿಕ ಯಶಸ್ಸಿನ ಆನಂದ" ಪ್ರತ್ಯಕ್ಷವಾಗಿ ನಮಗೆ ದಾರಿ ತೋರಿಸುವದುಂಟು. ಅದು ನಾವು ಹುಡುಕಿಕೊಂಡು ಹೊರಟ ದಾರಿಯಾಗಿರದಿದ್ದರೂ ಏನನ್ನಾದರೂ ಕಾಣುವ ಹಂಬಲ ನಮ್ಮದಾಗಿರಬೇಕು; ಅದು ಈ ಹೊಸ ದಾರಿಯಲ್ಲಿ ದೊರಕಲೂಬಹುದು. ಈ ಅನಿರೀಕ್ಷಿತ ಯಶಸ್ಸಿನ ಆನಂದ ತೃಪ್ತಮನಸ್ಸಿನ ನಿರಾಸಕ್ತ ವ್ಯಕ್ತಿಯ ಹತ್ತಿರ ಎಂದೂ ಸುಳಿಯುವುದಿಲ್ಲ; ಆಸಕ್ತ ಸಾಹಸಿಯ ಕೈಬಿಡುವುದಿಲ್ಲ. ಅನೇಕ ವರ್ಷಗಳ ಪರಿಶ್ರಮ, ಅನೇಕ ತರದ ಪ್ರಯತ್ನಗಳು ಫಲ ಕೊಡದಿರಬಹುದು. ಆದರೆ ಇವೆಲ್ಲವುಗಳಲ್ಲಿ ಮನಃಪ್ರಜ್ಞೆಯ ಅಂಶ ಹೆಚ್ಚಿನ ಪ್ರಮಾಣದಲ್ಲಿದ್ದರೆ ಅನಿರೀಕ್ಷಿತ ಯಶಸ್ಸಿನ ಆನಂದಕ್ಕೆ ಅನುವುಮಾಡಿದಂತಾಗುತ್ತದೆ.

೪. **ಸೆಳೆತನವನ್ನು ನಂಬಿರಿ:** ಜೀವನದ ಏರುಪೇರುಗಳನ್ನು ಧೈರ್ಯದಿಂದ ಎದುರಿಸಿದಾಗ ಮಾತ್ರ ಯಶವೊರೆಯುವುದು" ಎಂಬ ಶೇಕ್ಸ್‌ಪಿಯರಿನ ಮಾತು ಇಂದಿಗೂ ಸತ್ಯ. ನಮ್ಮ ವಿಶ್ವಾಸಕ್ಕೆ ಅವಶ್ಯವಿರುವ ಆಶಾವಾದ, ಜೀವವೈಜ್ಞಾನಿಕ ಕ್ರಿಯೆ ಹಾಗೂ ಸಾಮಾಜಿಕ ಪ್ರಸಂಗಗಳಲ್ಲಿರಬೇಕಾದ ನಂಬಿಕೆಯಲ್ಲಿಯೇ 'ಆಕಸ್ಮಿಕ ಯಶಸ್ಸಿನ ಆನಂದ' ಅಡಗಿದೆ.

ನನ್ನ ತಂದೆ ತನ್ನ ೬೫ನೆಯ ವಯಸ್ಸಿನಲ್ಲಿ ಇಂಡಿಯಾನಾ ಯೂನಿವರ್ಸಿಟಿಯ ವಿಶ್ರಾಂತ ಮಹೋಪಾಧ್ಯಾಯ ವಿಲಿಯಂ ಲೊಬ್ರಯಾನನನ್ನು ಕಾಣಲು ಹೋಗಿದ್ದನು. ತನ್ನ ಹಳೆಯ ವಿದ್ಯಾರ್ಥಿಯನ್ನು ಕಂಡಂತೆ ಅವನ ಕಣ್ಣಲ್ಲಿ ಹೊಸ ಕಾಂತಿ ಕಂಡಿತು. "೯೨ನೆಯ ವಯಸ್ಸಿನಲ್ಲಿರುವ ತಮಗೆ ಜೀವನದ ಬಗ್ಗೆ ಏನೆನಿಸುತ್ತದೆ?" ಎಂದು ನನ್ನ ತಂದೆ ಕೇಳಿದನು. ಅದಕ್ಕೆ "ಡಾನ್, ಜೀವನ ಒಂದು ಪ್ರವಾಹ, ಅದನ್ನು ಎದುರಿಸಬೇಕು!" ಎಂದುತ್ತರಿಸಿದನು. ಇಳಿವಯಸ್ಸಿನಲ್ಲಿ ಈ ಪ್ರವಾಹ ಯಾವ ಕಡೆ ಸೆಳೆದೊಯ್ಯುತ್ತದೊ ಹೇಳಲಾಗುವುದಿಲ್ಲ. ಆದರೆ "ಆಕಸ್ಮಿಕ ಯಶಸ್ಸಿನ ಆನಂದದ" ಅರಿವುಳ್ಳವನು ಮುಂದುವರಿದರೆ ಆಕರ್ಷಕ ವಸ್ತುವೊಂದನ್ನು ನೋಡುವುದರಲ್ಲಿ ಸಂದೇಹವಿಲ್ಲ. ಯಾರಿಗೂ ಗೊತ್ತಿರದ ಹೊಸ ಭೂಖಂಡವೊಂದನ್ನು ಶೋಧಿಸುವದಕ್ಕಿಂತಲೂ ಹೊಸ ಸ್ಥಳ (ವಸ್ತು) ವೊಂದನ್ನು ಕಂಡಾಗ ತಲೆಯಲ್ಲಿ ಸುಳಿಯುವ ಹೊಸ ವಿಚಾರಗಳಲ್ಲಿ ಆಕಸ್ಮಿಕ ಯಶಸ್ಸಿನ ಆನಂದ ರಹಸ್ಯವಾಗಿ ಅಡಗಿದೆ.

ಇದರಲ್ಲೇನಾದರೂ ರಹಸ್ಯ ಅಥವಾ ಮಾಯೆಯ ಅಂಶವಿದೆಯೆ? ಈ ಪ್ರಶ್ನೆಯನ್ನು ಉತ್ತರಿಸುವುದು ಕಠಿಣ. ಕೆಲವೊಂದು ಸಂದರ್ಭಗಳಲ್ಲಿ, ಕೆಲವರ ಜೀವನದಲ್ಲಿ, ಇದು ಸ್ಪಷ್ಟವಾಗಿ ಪರಿಣಮಿಸಿದ್ದುಂಟು.

ನನ್ನ ಜೀವನದಲ್ಲಿ ಇಂಥ ಆಕಸ್ಮಿಕ ಆದರೆ ಚಿರಸ್ಮರಣೀಯವಾದ ಒಂದು ಘಟನೆ ಕಳೆದ ಡಿಸೆಂಬರಿನಲ್ಲಿ ಸಂಭವಿಸಿತು. ಕ್ರಿಸ್‌ಮಸ್ ಹಬ್ಬಕ್ಕೆ ನನ್ನ ಮೂರು ಮಕ್ಕಳು ಮನೆಗೆ ಬರುವುದು ಸಂತೋಷ ತರುವಂತಹದು. ನಾಲ್ಕನೆಯವ (ಮೃತನ) ಇರದಿರುವಿಕೆ ದುಃಖ ತಂದಿತ್ತು. ಹಲವು ವರ್ಷಗಳ ಹಿಂದೆ ಈ ಮಗ ಎಳೆ ವಯಸ್ಸಿನವನು. ಪ್ರತಿಕ್ಷಣದಲ್ಲೂ ಅವನ ನೆನಪು ನನ್ನ ಬೆನ್ನಟ್ಟಿರುತ್ತದೆ; ಅದರಲ್ಲೂ ರಜೆ ದಿನಗಳಲ್ಲಂತೂ ಅವನ ನೆನಪಿನ ದುಃಖ ಉಮ್ಮಳಿಸುತ್ತದೆ. ನನ್ನ ಹೆಂಡತಿ ಮನೆ ಇಡಲಿ ಹಬ್ಬಕ್ಕೆ ಬರುವ ಮಕ್ಕಳಿಗಾಗಿ ನಗುತ್ತಲಿರಬೇಕೆಂದು ಉದ್ದೇಶಿಸಿದ ಮನೆ ಸ್ವಚ್ಛಗೊಳಿಸಿ, ಸಜ್ಜು ಮಾಡುತ್ತಲಿದ್ದಳು. ಉಡುಗೊರೆಯ ಒಂದು ಆಭರಣವನ್ನಿಡಲು ಸಣ್ಣ ಡಬ್ಬಿ ಬೇಕಾಗಿತ್ತು. ಮನೆಯೆಲ್ಲಾ—ಪೆಟ್ಟಿಗೆಗಳಲ್ಲಿ, ಮೇಜಿನ ಖಾನೆಗಳಲ್ಲಿ ಹುಡುಕಿದರೂ ಸಿಗಲಿಲ್ಲ. ಪಾತ್ರೆಗಳನ್ನಿಡುವ ಖಾನೆಯಲ್ಲಿ ಹುಡುಕುತ್ತಿದ್ದಂತೆ ಒಂದು ಸಣ್ಣ ಡಬ್ಬಿ ಸಿಕ್ಕಿತು. ಆಕೃತಿ ಮತ್ತು ಅಳತೆಯಲ್ಲಿ ಅದು ನನ್ನ ಆಭರಣಕ್ಕಾಗಿಯೇ ಮಾಡಿದಂತಿತ್ತು. ತೆರೆದು ನೋಡಿದಾಗ ಅದರಲ್ಲಿ ಹತ್ತಿಯ ತುಂಡಿತ್ತು. ಹತ್ತಿಯ ಕೆಳಗೆ ಕಾಗದದ ತುಂಡಿನ ಮೇಲೆ ಎರಿಕ್ ಬರೆದ ಸಾಲುಗಳು. ಈ ಡಬ್ಬಿಯನ್ನಾಗಲಿ ಅಥವಾ ಆ ಸಾಲುಗಳನ್ನಾಗಲಿ ನಾನೆಂದೂ ನೋಡಿರಲಿಲ್ಲ. ಕಾಗದದ ತುಂಡಿನ ಮೇಲೆ ಬರೆದು ಆ ಸಣ್ಣ ಹಾಳೆಯನ್ನು ಕವಚಕ್ಕೆ ಹಚ್ಚಿ ಡಬ್ಬಿಯಲ್ಲಿಟ್ಟಿದ್ದನು. ನಾನು ಅಂಥದೊಂದು ಡಬ್ಬಿಯನ್ನು ಬಹು ಆಸಕ್ತಿಯಿಂದ ಹುಡುಕುತ್ತಿರುವಾಗಲೇ ಎರಿಕ್‌ನ ಈ ಅಮೂಲ್ಯ ಕಾಣಿಕೆ ನನಗೆ ದೊರೆತದ್ದು. ಆ ಕಾಗದದ ತುಂಡಿನಲ್ಲಿ "ಪ್ರೀತಿಯ ಅಮ್ಮನಿಗೆ—ನನಗಾಗಿ ನೀನು ಪಟ್ಟ ಶ್ರಮಕ್ಕೆಲ್ಲ ಕೃತಜ್ಞನಾಗಿರುವೆ. ಕ್ರಿಸ್‌ಮಸ್ ಶುಭಾಶಯಗಳು!" ಎಂದು ಬರೆದ ಈ ಸಾಲುಗಳು ನನ್ನನ್ನು ಪುಳಕಗೊಳಿಸಿದವು.

ಗೋಪಾಲ ಅತ್ರಿತ

ಗತಿಸಿಹೋದ ಕಾಲವನ್ನು ಅನುಭವಕ್ಕಾಗಿ ನೆನೆಯುತಿರು. ಭವಿಷ್ಯತ್ಕಾಲವನ್ನು ಮಾರ್ಗ ನಿರ್ಣಯಕ್ಕಾಗಿ ಚಿಂತಿಸು.

—ಕನ್‌ಫ್ಯೂಷಿಯಸ್

ಪುಸ್ತಕ ವಿಮರ್ಶೆ

ಯಶವಂತ ಚಿತ್ತಾಲ: ಕೆಲವು ಅಧ್ಯಯನಗಳು—ಸಂಪಾದಕರು: ಜಿ.ಎಸ್. ಭಟ್ಟ, ಮಿತ್ರಪ್ರಕಾಶನ, ಮೈಸೂರು, ೧೯೮೧, ಪುಟ: ೨೭೨.

ಈ ಸಂಪಾದನಾ ಕೃತಿಯಲ್ಲಿ ಚಿತ್ತಾಲರ ಕಥಾಸಾಹಿತ್ಯವನ್ನು ಕುರಿತು ಬಹಳಷ್ಟು ಲೇಖನಗಳಿವೆ. ಅವೇ ಕಥೆಗಳಾಗಿದ್ದರೂ ಭಿನ್ನ ಭಿನ್ನ ದೃಷ್ಟಿಕೋನಗಳಿಂದ ನೋಡಿರುವುದು ಇಲ್ಲಿಯ ಅನೇಕ ಲೇಖನಗಳ ವೈಶಿಷ್ಟ್ಯ. ಮಾರುತಿ ಶಾನುಭಾಗರ ಮತ್ತು ಜಿ. ಎಸ್. ಆಮೂರರ ಲೇಖನಗಳು ಚಿತ್ತಾಲರ ಸಾಹಿತ್ಯವನ್ನು ಅಭ್ಯಸಿಸಬೇಕೆನ್ನುವವರಿಗೆ ಸೂಕ್ತ ಹಿನ್ನೆಲೆಯನ್ನು ಒದಗಿಸುತ್ತವೆ. ಹನೇಹಳ್ಳಿಯೊಂದಿಗಿನ ಗಾಢಸಂಬಂಧ, ಚಿತ್ತಾಲರ ಬೌದ್ಧಿಕ ವಿಕಾಸಕ್ರಮ ಇವುಗಳನ್ನು ವಿವರಿಸಿರುವ ಆಮೂರರು, ಚಿತ್ತಾಲರು ಮನೋವೈಜ್ಞಾನಿಕವಾಗಿ ಪಾತ್ರಗಳನ್ನು ವಿಶ್ಲೇಷಿಸಿ. ಕಲಾತ್ಮಕವಾಗಿ ಸೆರೆಹಿಡಿದಿಡುವುದನ್ನು ಲಕ್ಷಿಸುತ್ತಾರೆ. ಜೊತೆಗೆ ಪಾತ್ರಗಳ ನೈತಿಕ ಅಥವಾ ತಾತ್ವಿಕ ಕಾಳಜಿಯತ್ತ ಚಿಂತಿಸದಿರುವುದನ್ನೂ ಗಮನಿಸಿದ್ದಾರೆ. ಶಾನುಭಾಗರ ಲೇಖನ, ಚಿತ್ತಾಲರ ಕತೆಗಳಲ್ಲಾದ ಬದಲಾವಣೆಗಳನ್ನು ಗುರುತಿಸಿವೆ. ಆದರೆ ಅವರ ಉತ್ತಮ ವಿಚಾರಗಳಿಗೆ ತಕ್ಕಂತೆ ಭಾಷೆ ಇನ್ನೂ ಸರಳಗೊಂಡಿದ್ದರೆ ಒಳ್ಳೆಯದಿತ್ತು.

ಚಿತ್ತಾಲರ ಕಥಾಸಂಕಲನಗಳಿಗೆ ಬರೆದ ಮುನ್ನುಡಿಗಳು ಅಮೂಲ್ಯವಾದವು. ಸಂದರ್ಶನ ಮತ್ತು ಇತರ ಕತೆಗಳಿಗೆ ಗೌರೀಶ ಕಾಯ್ಕಿಣಿಯವರು, ಆಬೋಲಿನ ಕಥಾಸಂಕಲನಕ್ಕೆ ಕೀರ್ತಿನಾಥ ಕುರ್ತಕೋಟಿಯವರು, ಆಟ ಸಂಕಲನಕ್ಕೆ ಗೋಪಾಲಕೃಷ್ಣ ಅಡಿಗರು, ಕತೆಯಾದಳು ಹುಡುಗಿಗೆ ಎಸ್. ದಿವಾಕರ್ ಅವನ್ನು ಬರೆದಿದ್ದಾರೆ. ಚಿತ್ತಾಲರ ಪರಿಶ್ರಮ, ಪ್ರಯತ್ನಶೀಲತೆಗಳನ್ನು ಕುರ್ತಕೋಟಿ ಬಹುವಾಗಿ ಮೆಚ್ಚಿಕೊಂಡಿದ್ದಾರೆ. ಮುಂಬಯಿಯಂತಹ ಉಸಿರುಕಟ್ಟಿಸುವ ಆಧುನಿಕ ವಾತಾವರಣದಲ್ಲಿದ್ದು, ಕನ್ನಡದ ಜೀವಂತ ಸಹವಾಸದಿಂದ ದೂರವಾದರೂ ಸಾಹಿತ್ಯದ ಬಗ್ಗೆ ಒಂದು ರೀತಿಯ ಧಾರ್ಮಿಕ ಶ್ರದ್ಧೆಯಿಂದ ಅವರು ಮುಂದುವರೆಯುತ್ತಿರುವುದನ್ನು ಶ್ಲಾಘಿಸಿದ್ದಾರೆ. ಅಡಿಗರ ದೃಷ್ಟಿಯಲ್ಲಿ ಆಟ ಸಂಕಲನದ ಕತೆಗಳು ಅಭ್ಯಾಸಯೋಗ್ಯವಾದ, ಮತ್ತೆ ಮತ್ತೆ ಓದಿ ತಿಳಿಯಬೇಕಾದಷ್ಟು ಘನತೆ, ಸಾಂದ್ರತೆಗಳುಳ್ಳ ಕತೆಗಳು. ಅವೆಲ್ಲಕ್ಕೂ ಚಿತ್ತಾಲತನದ ಮುದ್ರೆಬಿದ್ದಿದೆ. ವಸ್ತು, ಭಾಷೆ, ವರ್ಣನೆ ಈ ಎಲ್ಲದರಲ್ಲೂ ಸ್ವತಂತ್ರ ವ್ಯಕ್ತಿತ್ವದ

ಮೂಲಭೂತ ಚಿಂತನದ ಹೊಳಹು ಕಾಣಿಸುತ್ತದೆ. ಅವರ ದೃಷ್ಟಿಯಲ್ಲಿ 'ಸೆರೆ' ಅತ್ಯಂತ ಸಫಲವಾದ ಕತೆ.

ಆಟ ಸಂಕಲನವನ್ನು ಕುರಿತು ಅಡಿಗರಲ್ಲದೆ, ಗಿರಡ್ಡಿಗೋವಿಂದರಾಜು, ಡಿ. ಎ. ಶಂಕರ, ಶಾಂತಿನಾಥದೇಸಾಯಿ ಮತ್ತು ಎಚ್. ಕೆ. ರಾಮಚಂದ್ರ ಮೂರ್ತಿ ಇವರು ನಡೆಸಿದ ಅಧ್ಯಯನಗಳು ನಮಗಿದರಲ್ಲಿ ದೊರೆಯುತ್ತವೆ. ಗಿರಡ್ಡಿಯವರು ಚಿತ್ತಾಲರ ಕಲಾವಂತಿಕೆಯನ್ನು ಬಹುವಾಗಿ ಮೆಚ್ಚಿಕೊಂಡಿದ್ದಾರೆ. 'ಸಣ್ಣಕತೆಗಳ ಬಗೆಗಿನ ನಮ್ಮ ನಿರೀಕ್ಷೆಯನ್ನು ಬಹುಪಾಲು ಹೆಚ್ಚಿಸಿದ ಕೀರ್ತಿ ಆಟ ಸಂಕಲನಕ್ಕೆ ಸಲ್ಲಬೇಕು' ಎಂದಿದ್ದಾರೆ. 'ಫಲ' ಕತೆ ಅವರ ವಿಶೇಷ ಮೆಚ್ಚುಗೆಗೆ ಪಾತ್ರವಾಗಿದೆ. ಶಂಕರರು ಸಂಕಲನದ ಕತೆಗಳನ್ನು ವಿವರಪೂರ್ಣವಾಗಿ ವಿಶ್ಲೇಷಿಸಿ, ತೌಲನಿಕವಾಗಿ ವಿಮರ್ಶಿಸಿದ್ದಾರೆ. ಚಿತ್ತಾಲರ ಕತೆಗಳನ್ನು ಅವುಗಳ ಗರ್ಭಧಾರಣೆಯಿಂದ ಹಿಡಿದು ಜನನದವರೆಗೆ ತೀರ ಒಳಗಿನಿಂದ ಬಲ್ಲ ದೇಸಾಯಿಯವರು ಬರೆದ ಲೇಖನ, ಚಿತ್ತಾಲತನದ ತಿಳಿವಳಿಕೆಗೆ, ಕತೆಗಳ ರಸಾಸ್ವಾದನೆಗೆ ಹೆಚ್ಚು ಸಹಾಯಕ. ಚಿತ್ತಾಲರು ಕತೆ ಬರೆಯುವ ರೀತಿ ಹಾಗೂ ಅವುಗಳನ್ನು ಪೋಷಿಸುವ ಅವರ ವಿಶಿಷ್ಟಮನಸ್ಸಿನ ಅಂತಃ ಪ್ರಪಂಚಗಳನ್ನು ಅವರು ವಿವರಿಸಿದ್ದಾರೆ. ರಾಮಚಂದ್ರಮೂರ್ತಿ 'ಆಟ' ಸಂಕಲನ ಹೊಸಗನ್ನಡ ಕಥಾಸಾಹಿತ್ಯದ ಒಂದು ಹೆಮ್ಮೆಯೆಂದೇ ಘೋಷಿಸಿದ್ದಾರೆ. ಡಿ.ಎನ್. ರಾಯಕರ್ ಮತ್ತು ಎಲ್. ಎಸ್. ಶೇಷಗಿರಿರಾವ್ 'ಸೆರೆ' ಕತೆಯನ್ನು ಭಿನ್ನ ರೀತಿಗಳಲ್ಲಿ ಕಂಡಿದ್ದಾರೆ. ರಾಯಕರ್ ಈ ಕತೆಯನ್ನು ಸುದೀರ್ಘವಾಗಿ ವಿಶ್ಲೇಷಿಸುತ್ತ, 'ಅದರಲ್ಲಿ ಅಚ್ಚುಕಟ್ಟಾದ ಕಲೆಗಾರಿಕೆ ಫಲಿಸಿದ್ದರೂ ಬದುಕಿನ ಬಗೆಗಿನ ನಮ್ಮ ತಿಳಿವಳಿಕೆ ಎತ್ತರಿಸುವುದಿಲ್ಲ' ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಇದೇ ಕತೆ ಶೇಷಗಿರಿರಾಯರಿಗೆ ನವ್ಯ ಸಾಹಿತ್ಯದ ಒಂದು ನಿದರ್ಶನವಾಗಿ ಕಾಣುತ್ತದೆ. ಇಡೀ ಕತೆಯ ಬಂಧ ಬಿಗಿಯಾಗಿದ್ದು, ಭಾಷೆಯ ಮೂಲಕ ಕಥೆ ಓದುಗನ ಮನಸ್ಸನ್ನು ಹಿಂದಕ್ಕೆ ಮುಂದಕ್ಕೆ ಜುಯ್ಯಾಲೆಯಾಡಿಸಿ ಇಡೀ ಕ್ರಿಯೆಯನ್ನು ಸಾವಯವರೂಪದಲ್ಲಿ ಮನಸ್ಸಿಗೆ ಅನುಭವ ಮಾಡಿಕೊಡುತ್ತದೆ. ಅದೃಷ್ಟ, ಪಯಣ ಮತ್ತು ಆಟ ಈ ಮೂರು ಕತೆಗಳಲ್ಲಿ ಚಿತ್ತಾಲರ 'ಸಾವಿನ ಪ್ರಶ್ನೆ' ಹೇಗೆ ಹರಡಿಕೊಂಡಿದೆ, ಅದರ ಚಿತ್ರಣ ಯಾವ ವಿನ್ಯಾಸದಲ್ಲಿ ಸಾಕಾರಗೊಂಡಿದೆ ಎನ್ನುವ ಪರಿಶೀಲನೆ ಟಿ. ಎನ್. ನಾಗರಾಜಶೆಟ್ಟಿಯವರ ಲೇಖನದಲ್ಲಿದೆ.

ಈ ಗ್ರಂಥದಲ್ಲಿ ಸಂಗ್ರಹಿಸಿರುವ ಲೇಖನಗಳನ್ನೆಲ್ಲ ಒಮ್ಮೆ ಸಮೀಕ್ಷಿಸಿದಾಗ, ಚಿತ್ತಾಲರ ಕತೆಗಳನ್ನು ಕುರಿತು ಬಂದಿರುವಷ್ಟು ವಿಮರ್ಶೆ ಅವರ ಕಾದಂಬರಿ

ಗಳನ್ನು ಕುರಿತು ಬಂದಿಲ್ಲವೆಂದೆನ್ನಿಸುತ್ತದೆ. ಆದರೆ ಬಂದ ಕೆಲವೇ ವಿಮರ್ಶೆಗಳಾದರೂ ಚಿತ್ತಾಲರ ಕಾದಂಬರಿಗಳನ್ನು ಅರಿತುಕೊಳ್ಳಲು ಸಹಾಯಕವಾಗುವ ಮಾದರಿಯಲ್ಲಿ ಸುದೀರ್ಘವಾಗಿ, ವಿಶ್ಲೇಷಣಾತ್ಮಕವಾಗಿಯೇ ಇವೆ. ಚಿತ್ತಾಲರ ಕೃತಿಗಳಲ್ಲಿ ಉತ್ತರಕನ್ನಡ ಜಿಲ್ಲೆಯ ಹನೇಹಳ್ಳಿ ಮತ್ತು ಅದರ ಪರಿಸರದ ಪ್ರಭಾವ–ಸಂಬಂಧಗಳು ಗಾಢವಾಗಿರುವುದನ್ನು ಅನೇಕ ವಿಮರ್ಶಕರು ಗಮನಿಸಿದ್ದಾರೆ. ಅದರಂತೆ ಅವರ ಕೃತಿಗಳಲ್ಲಿ ಕಲಾತ್ಮಕತೆಯ ಅಂಶ ವಿಶೇಷವಾಗಿರುವುದನ್ನು ಗುರುತಿಸಿದ್ದಾರೆ. ಸಂದರ್ಶನ, ಆಟ, ಸೆರೆ, ಪಯಣ, ಛಲ, ಕತೆಯಾದಳು ಹುಡುಗಿ ಮುಂತಾದವು ವಿಮರ್ಶಕರ ವಿಶೇಷ ಗಮನ ಸೆಳೆದ ಕೆಲವು ಉತ್ತಮ ಕತೆಗಳು. ಬಹಳಷ್ಟು ಕತೆಗಳನ್ನು ತೌಲನಿಕವಾಗಿಯೇ ಇಲ್ಲಿಯ ಲೇಖನಗಳಲ್ಲಿ ಚರ್ಚಿಸಲಾಗಿದ್ದು, ತನ್ಮೂಲಕವಾಗಿ ಅವುಗಳ ಮಹತ್ವ ಅಥವಾ ಸೋಲುಗಳನ್ನು ಗುರುತಿಸಲಾಗಿದೆ. ಇಂಥ ತೂಕದ ಸಂಪಾದನಾಗ್ರಂಥಕ್ಕೆ ಸಮತೂಕದ 'ಮೆಚ್ಚುಮಾತನ್ನು' ಬರೆದ ಹಾ. ಮಾ. ನಾಯಕರು ಕನ್ನಡ ಸಾಹಿತ್ಯದಲ್ಲಿ ಚಿತ್ತಾಲರ ಮಹತ್ವವನ್ನೂ ಇಂಥ ಸಂಪಾದನಾಗ್ರಂಥಗಳ ಆಗತ್ಯವನ್ನೂ ಮನವರಿಕೆ ಮಾಡಿಕೊಟ್ಟಿದ್ದಾರೆ. ಚಿತ್ತಾಲರ ಸಾಹಿತ್ಯಕ್ಕೆ ಉದ್ದೇಶಪೂರ್ವಕ ಪಕ್ಷಪಾತದ ವಿಮರ್ಶೆಯ ಸ್ಪರ್ಶತಗಲದಿದ್ದುದು ಅವರಿಗೆ ನೆಮ್ಮದಿಯನ್ನು ತಂದಿದೆ.

ಶಾಲಿನಿರಘುನಾಥ

* * *

ಅರಬಿ—ಕಥಾಸಂಕಲನ, ನವಕರ್ನಾಟಕ ಪಬ್ಲಿಕೇಷನ್ಸ್ (ಪ್ರೈ) ಲಿಮಿಟೆಡ್. ಬೆಂಗಳೂರು ಇವರ ವಿಶ್ವಕಥಾ ಕೋಶದ ಯೋಜನೆಯಲ್ಲಿ ಪ್ರಕಟವಾಗಿರುವ ೧೦ನೆಯ ಸಂಪುಟ. ಪ್ರಧಾನಸಂಪಾದಕ : ನಿರಂಜನ, ಪುಟ iv+೨೧೨, ಬೆಲೆ ೧೦ರೂ. ೧೯೮೦.

ಈ ಸಂಪುಟದಲ್ಲಿ ಐರ್‌ಲೆಂಡಿನ ೭ ಕಥೆಗಳೂ ವೇಲ್ಸ್‌ಗೆ ಸಂಬಂಧಿಸಿದಂತೆ ೩ ಕಥೆಗಳೂ ಸ್ಕಾಟ್‌ಲೆಂಡಿನ ೫ ಕಥೆಗಳೂ ಇದ್ದು ಒಟ್ಟು ೧೫ ಕಥೆಗಳಿವೆ. ಅನುವಾದ : ಶಾ. ಬಾಲುರಾವ್

ಮೊದಲನೆಯದಾಗಿ ಐರ್‌ಲೆಂಡಿನ ಕಥೆಗಳಲ್ಲಿ ಜಾರ್ಜ್‌ಮೂರ್ ಅವರ "ಜೂಲಿಯಾಳ ಶಾಪ" ಒಂದು. ಒಬ್ಬ ಪಾದ್ರಿ ತನ್ನ ಕುಟಿಲತೆಯಿಂದ ಮುಗ್ಧ ಜನರನ್ನು ದೇವರು–ದೆವ್ವದ ಹೆಸರಿನಲ್ಲಿ ಹೆದರಿಸುವುದೂ ಚೆಲುವೆ ಜೂಲಿಯೂ ಕ್ಯಾಹಿಲ್ ಪಾದ್ರಿಯ ಆಗ್ರಹಕ್ಕೆ ತುತ್ತಾಗಿ ಊರ ಜನರಿಂದ ಕೊನೆಗೆ ತಂದೆಯಿಂದ ದೂರವಾಗಿ ದಾರುಣ ಬಾಳನ್ನು ಬಾಳಿ ಕೊನೆಗೆ ಶಾಪಹಾಕಿ ಸತ್ತ

ದುರಂತ ಕಥೆ. ಲಿಯಾಮ್ ಓ ಫ್ಲಹರ್ಟಿ ಇವರ "ಹೊಂಚು ಸಿಪಾಯಿ" ಐರ್ಲೆಂಡಿನಲ್ಲಿ ರಿಪಬ್ಲಿಕನ್ನರ ಮತ್ತು ಫ್ರೀ ಸ್ಟೇಟರ್ಸ್ ಇವರ ನಡುವೆ ಕದನ ನಡೆಯುವಾಗಿನ ಒಂದು ಘಟನೆ ಕುರಿತಾದದ್ದು. ಎದುರು ಹೊಂಚು ಹಾಕಿದ್ದ ಸಿಪಾಯಿ ಒಬ್ಬನನ್ನು ಮಾಳಿಗೆ ಮೇಲಿನಲ್ಲಿದ್ದ ಸಿಪಾಯಿ ಗುಂಡುಹೊಡೆದು ಉರುಳಿಸುವ. ಅನಂತರ ಸಿಪಾಯಿ ಸತ್ತ ಸಿಪಾಯಿ ಬಳಿ ಬಂದು ನೋಡಿದರೆ ಅವನು ಸಿಪಾಯಿಯ ಸಹೋದರನೇ ಆಗಿರುತ್ತಾನೆ. ಒಡಹುಟ್ಟಿದವನ ಸಾವಿನೊಂದಿಗೇ ಯುದ್ಧದ ಘೋರಸ್ವರೂಪದರ್ಶನ ಆ ಸಿಪಾಯಿಗೆ ಮತ್ತು ಓದುಗರಿಗೆ ಆಗುತ್ತದೆ. ಡಬ್ಲ್ಯು. ಬಿ. ಯೇಟ್ಸ್ ಇವರ "ಹುರಿಯ ಹಾಡು" ಒಂದು ಜಾನಪದ ಕಥೆಯಂತಿದೆ. ಕಥಾನಾಯಕ ಹ್ಯಾನ್‌ರಾಹನ್ ಕವಿ. ಇವನನ್ನು ಕುರಿತು "ಕವಿಗೆ ಪಾದ್ರಿಗಳೂ ಗರತಿ ಹೆಂಗಸರೂ ಅವನ ಬಗ್ಗೆ ಒಳ್ಳೆಯ ಮಾತು ಆಡೋದಿಲ್ಲ" ಎಂದು ಮನೆಯೊಡತಿ ಹೇಳಿದರೂ ಮನೆ ಮಾಲೀಕ ಕವಿ ಹ್ಯಾನರಾಹನ್‌ನನ್ನು ಸ್ವಾಗತಿಸಿ ಸತ್ಕರಿಸುವ. ಮನೆಮಗಳು ಸುಂದರಿ, ಯುವತಿ ಕವಿಯ ಹಾಡಿಗೆ ಮನಸೋಲುವಳು. ಮಗಳನ್ನು ಕವಿಯ ಪ್ರಭಾವದಿಂದ ಮುಕ್ತಗೊಳಿಸಲು ಮನೆಯೊಡತಿ ಉಪಾಯವಾಗಿ ಕವಿಯನ್ನು ಮನೆಯಿಂದ ಹೊರಹಾಕುವಳು. ಕವಿಗಳ ಬಗ್ಗೆ ವಿಶ್ವಾಸವಿಲ್ಲದಿದ್ದರೂ ಅವರಲ್ಲಿ ಐರ್ಲೆಂಡಿನವರ ಭಯ ಶ್ರದ್ಧೆ ಗೌರವ ಮುಂತಾದವು ಕಂಡುಬರುವುವು. ಸ್ಯಾಮ್ಯುಯಲ್ ಬೆಕೆಟ್ ಇವರ "ದಾಂತೆ ಮತ್ತು ಏಡಿ" ಕಥೆಯ ನಾಯಕ ಬೆಲಾಕ್ವನ ದಾಂತೆಯ ಡಿವೈನ ಕಾಮೆಡಿಯಲ್ಲಿನ ಸ್ವರ್ಗಲೋಕ ವಿಭಾಗವನ್ನು ಅಭ್ಯಸಿಸುತ್ತಿರುವ ವಿದ್ಯಾರ್ಥಿ. ಕಲ್ಪನೆಯ ಸ್ವರ್ಗ–ನರಕಗಳ ಮಧ್ಯೆ ಅವನ ನಿಜಜೀವನದ ಸಾಗು, ಇತರರ ಬಗ್ಗೆಯಿದ್ದ ಆತನ ಅನಿಸಿಕೆಗಳು ತನ್ನ ಊಟದ ಬಗ್ಗೆ ಇದ್ದ ಭವ್ಯ ಕಲ್ಪನೆ, ಇವುಗಳೊಂದಿಗೆ ಯಾವ ಗಮನವೂ ಇಲ್ಲದ ಸಹಜವೆನ್ನುವ ಕ್ರೌರ್ಯ, ಮರಳುವ ನೀರಿಗೆ ಜೀವಂತ ಏಡಿಯನ್ನು ಹಾಕುವುದು ಇತ್ಯಾದಿಗಳಿಂದ ಅವನಿಗೆ ಓದಿನ ಕಲ್ಪನೆಗಿಂತ ಎದುರಿಗೇ ಕಂಡದ್ದು ಅತಿ ಅನಿಸಿತು. ಶೀಘ್ರ ಮರಣವೆಂದು ಕೊಂದರೂ ಬೇನೆಯ ಅವಧಿ ಹೆಚ್ಚಾದರೇನು ಕಡಿಮೆಯಾದರೇನು ಕ್ರೌರ್ಯ ಕ್ರೌರ್ಯವೇ. ನೋವು ಸಹಜ ಅಲ್ಲವೆ? ಎಂಬುದನ್ನು ನಮ್ಮ ಗಮನಕ್ಕೆ ತರುತ್ತದೆ ಈ ಕಥೆ.

ಬೈಬಲ್ಲಿಗೆ ಸಂಬಂಧಿಸಿದಂತೆ ಈ ಸಂಕಲನದಲ್ಲಿರುವ ಎರಡು ಕಥೆಗಳಲ್ಲಿ ರೈಸ್ ಡೇವೀಸ್ ಇವರ "ಕ್ಯಾಲೆಬನ ದೋಣಿ" ಒಂದು ಉತ್ತಮ ಕಥೆ. ಜಗತ್ತಿನ ವಾಸ್ತವತೆಯಿಂದ ದೂರವಾಗಿ ಧಾರ್ಮಿಕ ಗ್ರಂಥದಲ್ಲಿ ಪ್ರಪಂಚವನ್ನು ಮರೆತು ನಶ್ವರವಾದ

ವನ್ನು ನೆಟ್ಟ, ಜಗತ್ತಿನ ಪ್ರಳಯದನಂತರ ಹೊಸಭೂಮಿ, ಹೊಸ ಜಗತ್ತಿನ ಕಲ್ಪನೆಯಲ್ಲಿ ಬದುಕಿದ ವಿಚಿತ್ರವ್ಯಕ್ತಿ ಕ್ಯಾಲೆಬ್. ನಡುವಯಸ್ಸಾದರೂ ಮದುವೆ ಯಾಗದೆ ಕೈಹಿಡಿಯಲು ಬಂದ ಹೆಣ್ಣುಗಳ ಕೈಬಿಟ್ಟು ತಾನೊಬ್ಬ ನೋವಾ ನಂತೆ ಪ್ರಪಂಚ ನಾಶದ ಬಳಿಕ ಬದುಕಿ ಉಳಿಯಲು ದೋಣಿ ಕೊಂಡು ಅದರಲ್ಲಿ ಹಂದಿ, ಕೋಳಿ, ಕುಡಿಯುವ ನೀರು ಸಂಗ್ರಹಿಸಿಟ್ಟುಕೊಂಡ ಕ್ಯಾಲೆಬಿನ ಗಂಭೀರ ಹಾಗೂ ಹಾಸ್ಯವ್ಯಕ್ತಿತ್ವದ ಜೊತೆಗೆ ಹಠಗಾತಿ ಮಾರ್ಗರೆಟ್ ಇವನ ಬೆಂಬತ್ತಿ ಬಿರುಗಾಳಿ ಮಳೆಯ ದೆಸೆಯಿಂದಾಗಿ ತನ್ನ ದೋಣಿಯಲ್ಲಿ ನರಳುತ್ತಿದ್ದ ಕ್ಯಾಲೆಬ ನನ್ನು ರಕ್ಷಿಸಿ ಮನೆಗೆ ತಂದು ಮನೆಯಲ್ಲಿ ಒಂದು ಹೆಣ್ಣಿದ್ದರೆ ಎಷ್ಟು ಚಂದವೆಂಬ ಭಾವನೆ ಮೂಡಿಸಿ ಕ್ಯಾಲೆಬಿನ ಕೈಹಿಡಿದು ಅವನಿಗೆ ನಿಜವಾದ ಸುಖ ಶಾಂತಿ ಕೊಟ್ಟ ಹೆಣ್ಣಿನ ಛಲದ ಕಥೆ ಓದುಗರ ಗಮನ ಸೆಳೆಯುತ್ತದೆ. ಜಾರ್ಜ್ ಇವಾರ್ಟ್ ಇವಾನ್ಸ್ ಇವರ 'ನಾಯಿತ್ಯಾಗ' ಒಂದು ಹೊಸಬಗೆಯ ಕಥೆಯೆನ್ನಬಹುದು. ವಿಲ್‌ಫ್ಲಾಗನ್ಸನಿಗೆ ನಾಯಿ ಜೂಜಿನಲ್ಲಿ ಆಸಕ್ತಿ. ಅವನ ಹೆಣ್ಣುನಾಯಿ ಜೈನಿ ಕಂಡರೆ ಅವನಿಗೆ ಬಹಳ ಪ್ರೀತಿ. ಒಮ್ಮೆ ಗುಡ್ಡದ ಮೇಲೆ ಕಂಡ ಜೇಟಿನಾಯಿಯನ್ನು ಹಿಡಿಯಲು ಪ್ರಯತ್ನಿಸಿದ. ಅದು ಸಿಗದಿದ್ದಾಗ ಸ್ನೇಹಿತನ ನಾಯಿ ಟೆರಿಯರ್‌ನ ಸಹಾಯ ಪಡೆದ. ಆಗಲೂ ಸಿಗದ ನಾಯಿ ಯನ್ನು ತನ್ನ ಮನೆಯ ಹತ್ತಿರವೇ ಹಿಡಿಯಲು ಪ್ರಯತ್ನಿಸಿ ಕೈಕಚ್ಚಿಸಿಕೊಂಡ. ಕೊನೆಗೆ ತನ್ನ ಹೆಣ್ಣುನಾಯಿಯನ್ನೇ ಬಲಿಯಾಗಿ ಒಡ್ಡಿ ಅದನ್ನು ಹಿಡಿಯಲು ಪ್ರಯತ್ನಿಸಿ ಸೋತ. ಗರ್ಭಿಣಿಯಾದ ತನ್ನ ಹೆಣ್ಣುನಾಯಿ ಆ ಜೇಟಿನಾಯಿ ಯಂತಹ ಮರಿಗಳನ್ನು ಹಾಕುವುದೆಂದು ಎಣಿಸಿದ್ದವನು ಮರಿಗಳು ಟೆರಿಯರ್ ನಾಯಿಯ ಚಹರೆ ಹೋಲುತ್ತಿದ್ದದ್ದು ಕಂಡು ನಿರಾಶನಾದ. ಡಿಲಾನ್ ಥಾಮಸ್ ಇವರ "ಸಮುದ್ರದ ಮುನ್ನೋಟ" ಈ ಕಥೆಯನ್ನು ಓದಿದಾಗ ಸಂಕಲನದಲ್ಲಿ ಸೇರಿಸದಿದ್ದರೇ ಚೆನ್ನಾಗಿತ್ತು ಎಂದೆನಿಸುವುದು.

ಈ ಸಂಕಲನದಲ್ಲಿ ಸ್ಕಾಟ್‌ಲೆಂಡಿನ ಐದು ಕಥೆಗಳಿವೆ. ಅವುಗಳಲ್ಲಿ ವಾಲ್ಟರ್ ಸ್ಕಾಟ್‌ರವರ "ಜಾನೆಟ್ ಡಾಲ್ರಿಂಪಲಳ ಮದುವೆಯ ಕಥೆ" ಇದು ಒಂದು ಕಥೆಯೇ ಎನ್ನುವಂತಿದೆ. ಶ್ರೀಮಂತ ಹೆಣ್ಣಿನ ಭಗ್ನಪ್ರೇಮದ ನೀರಸ ವರದಿಯಂತಿರುವ ಇದು ಯಾವ ಬಗೆಯಲ್ಲಿ ಜಗತ್ತಿನ ಶ್ರೇಷ್ಠ ಕಥೆ ಎನಿಸಿಕೊಳ್ಳುತ್ತದೆ ಎಂಬುದು ನಮಗೆ ತಿಳಿಯುವುದಿಲ್ಲ. ಲೂಯಿಗ್ರಾಸಿಕ್-ಗಿಬ್ಬನ್ ಇವರ "ಮಣ್ಣು" ಒಂದು ಉತ್ತಮ ಕಥೆ. ರಾಬ್‌ಗಾಲ್ಟ್ ಇತರ ಗಾಲ್ಟರಂತೆ ಆಗದೆ ಸಭ್ಯ ಎನಿಸಿಕೊಂಡ ರೈತ. ತನ್ನ ಹೆಂಡತಿ ಮತ್ತು ಮಗಳನ್ನು ಪ್ರೀತಿಸುವುದಕ್ಕಿಂತ ಹೆಚ್ಚಾಗಿ ತನ್ನ

ಹೊಲವನ್ನು ಪ್ರೀತಿಸುತ್ತಿದ್ದನೆನ್ನಬಹುದು. ಬಂಜರು ಭೂಮಿಯನ್ನೂ ಕೃಷಿಗೆ ಹದ ಮಾಡುವ ಛಲವಾದಿ. ನೇಗಿಲಯೋಗಿ, ತನ್ನ ದೇಹದ ರಕ್ತ ಬಸಿದು ದುಡಿಯುತ್ತಿದ್ದ. ಸ್ತನದ ಕ್ಯಾನ್ಸರಿನಿಂದ ಹೆಂಡತಿ ಸಾಯುತ್ತಾಳೆ. ತನ್ನ ತಾಯಿಯ ಕಡೆ ಹೆಚ್ಚು ಗಮನವೀಯಲಿಲ್ಲವೆಂದು ಮಗಳು ದೂಷಿಸುತ್ತಾಳೆ. ಆದರೆ ಸಾಯುವ ಮೊದಲು ಅವನ ಹೆಂಡತಿ ಹೇಳಿದಂತೆ ಅವನು ದಯಾವಂತ, ಒಳ್ಳೆಯವನು, ಕ್ರೂರಿಯಲ್ಲ. ಸಾವು ನೋವುಗಳ ಬಗ್ಗೆ ನಿರ್ಲಿಪ್ತ. ಮಣ್ಣಿನಿಂದ ಬಂದು ಕೊನೆಗೆ ಎಲ್ಲವೂ ಮಣ್ಣಲ್ಲೇ ಸೇರುವ ಈ ಜಗತ್ತಿನ ರಹಸ್ಯ ಅರಿತಿದ್ದವನು. ತನ್ನ ಕೊನೆಗಾಲದಲ್ಲಿ ಮಗಳನ್ನು ಒಬ್ಬ ಹುಡುಗನ ಕೈಹಿಡಿದು ತನ್ನ ಹೊಲ ನೋಡಿಕೊಳ್ಳುವಂತೆ ಕೇಳಿಕೊಳ್ಳುವ. ತಂದೆಯನ್ನು ವಂಚಿಸಲು ಇಷ್ಟಪಡದ ದಿಟ್ಟ ಹುಡುಗಿ 'ಆಗದು' ಎಂದು ನಿಜ ಹೇಳುತ್ತಾಳೆ. ಅವನು ನಿರಾಶನಾಗಿ ಸಾಯುತ್ತಾನೆ. ವ್ಯಕ್ತಿ ಮತ್ತು ಮಣ್ಣಿನ ಸಂಬಂಧ ಎಂತಹ ಪ್ರಬಲವಾದದ್ದೆಂಬುದು ಈ ಕಥೆಯಲ್ಲಿ ಮೂಡಿಬಂದಿದೆ. ಜೆ.ಜೆ. ಬೆಲ್ ಇವರ "ಕಿನ್ನರ ಕುಮಾರ" ಮತ್ತೊಂದು ಉತ್ತಮ ಕಥೆ. ತಂದೆ ತಾಯಿ ಕಳೆದುಕೊಂಡು ಅತ್ತೆಮಾವನ ಆಶ್ರಯದಲ್ಲಿ ಬೆಳೆಯುತ್ತಿದ್ದ ಪುಟ್ಟ ಜಾನ್‌ನ ಕಥೆ. ಅತ್ತೆಯ ಕೋಳಿಗೂಡಿನಿಂದ ದಿನವೂ ಒಂದೊಂದು ಮೊಟ್ಟೆ ಕದ್ದು ತಂದು ಮೇಡಂನ ಟೇಬಲ್ ಒಳಗೆ ಯಾರಿಗೂ ತಿಳಿಯದಂತೆ ಇಡುತ್ತಿದ್ದ. ಆರು ದಿನಗಳಾದರೂ ಯಾರು ಎಂಬುದು ತಿಳಿಯದೆ ಮೇಡಂ ತರಗತಿಯಲ್ಲಿ ಆ ಕಿನ್ನರ ಕುಮಾರನಿಗೆ ನನ್ನ ವಂದನೆ ತಿಳಿಸಬೇಕು ಆತ ಯಾರೂ ಕಾಣದಂತೆ ಬೇಕಾದರೆ ಬಂದು ನನ್ನ ಕಾಣಲಿ ಎಂದಾಗ ಜಾನ್ ಪುಳಕಿತನಾಗುವ. ಒಮ್ಮೆ ಅತ್ತೆಯ ಕೈಗೆ ಸಿಕ್ಕಿಬಿದ್ದು ಶಿಕ್ಷೆ ಅನುಭವಿಸುವ. ಅತ್ತೆ ಮಾವ ಇಬ್ಬರೂ ಎಂತಹ ಸಹೃದಯಿಗಳೆಂಬುದು ಈ ಸಂದರ್ಭದಲ್ಲಿ ನಮಗೆ ತಿಳಿದುಬರುವುದು. ಜಾನ್‌ನನ್ನು ನೋಯಿಸುವುದು ಅವರಿಗೆ ಬೇಕಾಗಿರುವುದಿಲ್ಲ. ಆದರೆ ಶಿಕ್ಷೆ ಮಾತ್ರ ಆಗಲೇಬೇಕೆಂಬುದು ಅತ್ತೆಯ ವಾದ. ಕೊನೆಯಲ್ಲಿ ರೈಲಿನಲ್ಲಿ ಹೊರಟಿದ್ದ ಮೇಡಂಗೆ ಜಾನ್ ಓಡಿಬಂದು ಆ ಕಿನ್ನರ ಕುಮಾರ ತಾನೆಂದು ಹೆಮ್ಮೆಯಿಂದ ಹೇಳಿಕೊಳ್ಳುವ. ನೀಲ್ ಎಮ್. ಗನ್ ಇವರ "ಕಡಲು" ಕಥೆ ಮೀನು ಹಿಡಿಯಲು ಸಮುದ್ರಕ್ಕೆ ಹೋಗಿದ್ದ ತನ್ನ ಪತಿ ಮತ್ತು ದೊಡ್ಡಮಗನನ್ನು ಕುರಿತು ಚಿಂತಿಸುವ ತಾಯಿಯೊಬ್ಬಳ ಮಾನಸಿಕ ತೊಳಲಾಟ, ಕಿರಿಯ ಮಗನನ್ನು ಮಳೆ ಮತ್ತು ಬಿರುಗಾಳಿಗೆ ಸಿಕ್ಕಿರುವ ತಂದೆ, ಅಣ್ಣ ಇವರನ್ನು ನೋಡಲು ಕಳುಹಿಸುತ್ತಾಳೆ. ಕೊನೆಯಲ್ಲಿ ಅವರೆಲ್ಲ ಸುರಕ್ಷಿತವಾಗಿ ಮನೆಗೆ ಹಿಂದಿರುಗುತ್ತಾರೆ. ಕಡಲಿನ ಭಯಂಕರ ಪೇಳಿತ ಅಲೆಗಳ ರುದ್ರ ನರ್ತನದ

ವರ್ಣನೆ ಕಡಲ ಅಬ್ಬರ, ಅವರ ಹಿಂದಿನ ದುರಂತ, ಹೆದರಿಕೆ ಇವೆಲ್ಲ ಕಥೆಯಲ್ಲಿದ್ದು ಓದುಗರ ಆಸಕ್ತಿಯನ್ನು ಸೆರೆಹಿಡಿಯುತ್ತವೆ. ಈ ಸಂಕಲನದ ಕೊನೆಯ ಕಥೆ ಫ್ರೆಡ್ ಉರ್ಕುಹಾರ್ಟ್ ಇವರ "ಮ್ಯಾಟಿನಿ" ಕಥೆಯೇ ಅಲ್ಲವೆಂಬುದು ನಮ್ಮ ಎಣಿಕೆ. ಒಬ್ಬ ಹುಡುಗ ಒಂದು ಮ್ಯಾಟಿನಿ ಸಿನಿಮಾಕ್ಕೆ ತಮ್ಮನ ಜೊತೆ ಹೋಗಿಬರುವುದನ್ನೇ ಒಂದು ಕಥೆ ಎಂದು ಪರಿಗಣಿಸುವುದು ಅದನ್ನು ಜಗತ್ತಿನ ಶ್ರೇಷ್ಠ ಕಥೆ ಎಂದೆನ್ನುವುದು—ಆಯ್ಕೆದಾರರ ಅಭಿಪ್ರಾಯ ಮಾತ್ರವೆನ್ನಬಹುದು.

ಶಾ. ಬಾಲುರಾವ್ ಅವರ ಅನುವಾದ ಸರಳ ಮತ್ತು ಉತ್ತಮವಾಗಿದೆ. ಎಂದಿನಂತೆ ಪ್ರಧಾನ ಸಂಪಾದಕ ನಿರಂಜನರ ಪ್ರಸ್ತಾವನೆ ಬಹು ಉಪಯುಕ್ತವಾಗಿದ್ದು ಐರ್‌ಲೆಂಡ್, ವೇಲ್ಸ್ ಮತ್ತು ಸ್ಕಾಟ್‌ಲೆಂಡಿನ ಇತಿಹಾಸ, ಸಾಹಿತ್ಯದ ಬೆಳವಣಿಗೆ ಬಗ್ಗೆ ಓದುಗರಿಗೆ ಒಂದು ಕಿಟಕಿಯಂತಿದೆ.

ಬಿ. ಶಾಮಸುಂದರ

* * *

ಮಿಲನ ಮಹೋತ್ಸವ : ಲೇಖಕರು : ಸದ್ಯೋಜಾತಮೂರ್ತಿ, ಪ್ರಕಾಶಕರು : ಗ್ರಂಥ ಗಂಗೋತ್ರಿ ಪ್ರಕಾಶನ, ಶ್ರೀರಂಗಪಟ್ಟಣ. ಪುಟ : ೪೭, ಬೆಲೆ : ರೂ. ೪, ಪ್ರಥಮ ಮುದ್ರಣ ೧೯೮೧.

ಕನ್ನಡಕಾವ್ಯ ಹೊಸ ದಿಕ್ಕುಗಳ ಹುಡುಕಾಟದಲ್ಲಿ ಗಂಭೀರವಾಗಿ ತೊಡಗಿರುವ ಈ ಹೊತ್ತಿನಲ್ಲಿ ಸದ್ಯೋಜಾತಮೂರ್ತಿಯಂಥವರು ಕವನಗಳನ್ನು ಹೊಸೆಯುತ್ತಲೇ ಇದ್ದಾರೆ. ಒಂದು ಕವನವನ್ನು ಓದಿದಾಗ ಅದು ನಮ್ಮನ್ನು ಗಾಢ ಚಿಂತನೆಗೆ ತೊಡಗಿಸುವುದು ಬೇಡ; ಕಡೆಯ ಪಕ್ಷ ಆ ಕ್ಷಣಕ್ಕಾದರೂ ಖುಷಿ ಕೊಡುವಂತಿರಬೇಕು. ಒಬ್ಬ ಸಾಮಾನ್ಯ ಓದುಗ ಕವಿಯಿಂದ ನಿರೀಕ್ಷಿಸುವುದು ಇವನ್ನೇ. ಆದರೆ ಈ ಸಂಕಲನದಲ್ಲಿರುವ ೩೩ ಕವನಗಳಲ್ಲಿ ಒಂದು, ಕೇವಲ ಒಂದೇ ಒಂದು ಅಂಥ ಖುಷಿ ಕೊಡುವುದಿಲ್ಲ. ಬರೆಯುವುದು ಕೇವಲ ಚಟವಾದಾಗ ಈ ಬಗೆಯ ಸಾಹಿತ್ಯ ಸೃಷ್ಟಿಯಾಗುತ್ತದೆ. ಸದ್ಯೋಜಾತಮೂರ್ತಿ ಅವರ ಕಾವ್ಯಪ್ರತಿಭೆಗೆ ಒಂದು ಉದಾಹರಣೆ 'ಗಂಧ ತೀಡಿದಂತೆ' ಎಂಬ ಕವನ:

ಎನ್ನ ಒಲವಿನ ನಿಧಿ
ಗೌರಾಂಬೆ
ಚೆಲ್ವ ಸಾದರ
ಆನಂದದಾಗರ

ಆವಳೊಡನೆ
ಸರಸವಿರಸವೆರಸಲು
ಗಂಧ ತೀಡಿದಂತೆ
ಜೀವನವು ರಸಮಯ.

ಈ ಮೇಲಿನ ಮಾತುಗಳನ್ನು ಕವನ ಎಂದು ಕರೆಯಬಹುದಾದರೆ ಇದನು ಬರೆದವರನ್ನು 'ಕವಿ' ಎಂದು ಒಪ್ಪಬಹುದು. ಬರೀ ತೆವಲು ಏನನ್ನೂ ಗಟ್ಟಿಯಾದದ್ದನ್ನು ಸೃಷ್ಟಿಸದು. ಜೀವನದ ದಟ್ಟ ಅನುಭವಗಳೇ ಇಲ್ಲದೆ ಬರೆಯಲು ಹೋದರೆ ಅದು ಹೀಗೆ ಆಭಾಸವಾಗುತ್ತದೆ. ಇಲ್ಲಿರುವ ಕವನಗಳಲ್ಲಿ ಕಲ್ಪನೆಯಲ್ಲಾಗಲಿ, ಭಾಷೆಯಲ್ಲಾಗಲಿ, ಅಭಿವ್ಯಕ್ತಿಯಲ್ಲಾಗಲಿ ಒಂದು ಹೊಸತನ, ಸ್ವಂತಿಕೆ ಕಾಣುವುದಿಲ್ಲ. ನಮ್ಮ ಈ ಕವಿ ಎಂಥ ಭಾಷಾವಿದಗ್ಧರು ಎಂದರೆ ರಸಿಕ ಎಂಬ ಪದ ಪುಲ್ಲಿಂಗ ತಾನೆ? ಹಾಗಾದರೆ ಅದರ ಸ್ತ್ರೀಲಿಂಗ ರೂಪ 'ರಸಿಕೆ' ಇರಬೇಕು ಎಂದು ಹೊಸ ಪದವೊಂದನ್ನು ಸೃಷ್ಟಿಸಿದ್ದಾರೆ! ಇವರ ಬಾಲಿಶ ಕಲ್ಪನೆಗಳಿಗೆ ಇನ್ನೂ ಕೆಲವು ಉದಾಹರಣೆಗಳು :

ಉಬ್ಬಿದೆಯ ತೆರವುಮಾಡು
ಕರೆಯುವೆ ಸ್ವಾತಿಹನಿಯ (ಸ್ವಾತಿಹನಿ)

ಮುಗುದೆ ನೀನು ನನಗೆ ಮುಡಿಪು
ಬಾರೈ
ಕಾಮಕೋಣದಲೀಜಾಡುವ (ಕೋಣ)

ನನ್ನವಳು ಎಚ್ಚರಿಸಿ
"ಸಾಕು ನಿಮ್ಮ ಕನವರಿಕೆ
ಎಚ್ಚೆತ್ತಪ್ಪಿರಿ
ಮುತ್ತಿನಿಂ ಮುತ್ತಿರಿ" ಎಂದಳು (ಮಾಘಸ್ನಾನ)

ಈ ಕವನ ಸಂಕಲನದ ಹಿಂಬದಿಯ ಮುಖಪುಟದಲ್ಲಿ ಒಂದು ಮಾತಿದೆ: "ಸದ್ಯೋಜಾತಮೂರ್ತಿಯವರ ಬಹುತೇಕ ಕವನಗಳು ಆಳವಾದ ಅಧ್ಯಯನದಿಂದ ಮೂಡಿಬಂದಿರುವ ಕಾರಣ ಅವುಗಳಲ್ಲಿನ ಸೂಕ್ಷ್ಮತೆ ನಮ್ಮನ್ನು ಮನಸ್ಸಿನಾಳಕ್ಕೆ ಕೊಂಡೊಯ್ಯುತ್ತವೆ". ನಿಜ, ಇವರ ಕವನಗಳು ಮೂಡಿ ಬಂದಿರುವುದು ಅಧ್ಯಯನದಿಂದ; ಅನುಭವದಿಂದಲ್ಲ. ಹಾಗಾಗಿಯೇ ಅವುಗಳನ್ನು ಓದಿದ ಸಹೃದಯನಿಗೆ ಇಂಥ ಕವನಗಳನ್ನು ಓದಬೇಕಾಗಿ ಬಂತಲ್ಲ ಎಂಬ ವ್ಯಥೆಯ ಅನುಭವವುಂಟಾದರೆ ಅದೇನು ಆಶ್ಚರ್ಯಕರ ಸಂಗತಿಯಲ್ಲ.

ಕೃಷ್ಣ ಹಾಸನ

ಪುಸ್ತಕ ಪ್ರಪಂಚ

(ಮಾಸ ಪತ್ರಿಕೆ)

ಕ್ರೌನ್ ಅಷ್ಟದಳ ೬೪ ಪುಟಗಳು

ಬಿಡಿ ಪ್ರತಿ: ಒಂದು ರೂಪಾಯಿ

ವಾರ್ಷಿಕ ಚಂದಾ: ೧೦ ರೂಪಾಯಿ

ಸಾರ್ವಜನಿಕ ವಿದ್ಯಾವಂತರ ಉಪಯೋಗಕ್ಕಾಗಿ, ಮುಖ್ಯವಾಗಿ ಗ್ರಾಮಸ್ಥರ ಮತ್ತು ಗ್ರಾಮ ಪುಸ್ತಕ ಭಂಡಾರಗಳ ಅಧಿಕಾರಿಗಳ ಉಪಯೋಗಕ್ಕಾಗಿ ಈ ಪತ್ರಿಕೆ ಪ್ರಕಟವಾಗುತ್ತಿದೆ.

(ಅ) ಕನ್ನಡೇತರ ಭಾಷೆಗಳಲ್ಲಿ ಪ್ರಕಟವಾದ ಪುಸ್ತಕಗಳ ಮತ್ತು ಲೇಖನಗಳ ಸಾರಾಂಶಗಳನ್ನು ಪ್ರಕಟಿಸಿ ಅವುಗಳ ಪರಿಚಯವನ್ನು ಮಾಡಿಕೊಡುವುದು

(ಆ) ಆಯಾ ತಿಂಗಳಲ್ಲಿ ಪ್ರಕಟವಾದ ಎಲ್ಲ ಕನ್ನಡ ಪುಸ್ತಕಗಳ ಮತ್ತು ಮುಖ್ಯ ಕನ್ನಡ ಲೇಖನಗಳನ್ನು ಪ್ರಕಟಿಸುವುದು.

(ಇ) ಕನ್ನಡದಲ್ಲಿ ಪ್ರಕಟವಾಗಿರುವ ಉತ್ತಮ ಪುಸ್ತಕಗಳ ಬಗ್ಗೆ ವಿಮರ್ಶಾತ್ಮಕ ಲೇಖನಗಳನ್ನು ಪ್ರಕಟಿಸುವುದು.

(ಈ) ಪುಸ್ತಕ ಭಂಡಾರ ವ್ಯವಸ್ಥೆ ವಿಚಾರವಾಗಿ ಲೇಖನಗಳನ್ನು ಪ್ರಕಟಿಸುವುದು.

(ಉ) ಒಬ್ಬ ಲೇಖಕರ ಎಲ್ಲ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು. ಒಂದು ವಿಷಯದ ಮೇಲೆ ಬರೆದಿರುವ ಅನೇಕ ಪುಸ್ತಕಗಳನ್ನು ವಿಮರ್ಶಾತ್ಮಕ ಲೇಖನದ ಮೂಲಕ ಪರಿಚಯ ಮಾಡಿಕೊಡುವುದು.

(ಊ) ಗ್ರಾಮ ಜೀವನಕ್ಕೆ ಸಂಬಂಧಪಟ್ಟ ಕಥೆಗಳು, ಕವಿತೆಗಳು, ಪ್ರಬಂಧಗಳ ಮತ್ತು ವ್ಯಕ್ತಿ ಚಿತ್ರಗಳನ್ನು ಪ್ರಕಟಿಸುವುದು.

(ಋ) ಕಲಾಚಿತ್ರಗಳನ್ನು ಅಚ್ಚು ಮಾಡುವುದು.

(ೠ) ಕನ್ನಡದಲ್ಲಿ ಪ್ರಕಟವಾದ ಅತಿ ಮುಖ್ಯ ಲೇಖನದ ಸಾರಾಂಶವನ್ನು ಪ್ರಕಟಿಸುವುದು.

(ಎ) ಗ್ರಾಮಸ್ಥರಿಗೆ ರುಚಿಸುವ ವಿಷಯಗಳ ಮೇಲೆ ಸುಲಭ ಶೈಲಿಯಲ್ಲಿ ಲೇಖನಗಳನ್ನು ಪ್ರಕಟಿಸುವುದು.

ಪ್ರಧಾನ ಕಾರ್ಯನಿರ್ವಹಣಾಧಿಕಾರಿ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಕೃಷ್ಣಮೂರ್ತಿಪುರಂ : : ಮೈಸೂರು - ೪

Reg. No. KRNN. 29 / WPP 6
LICENSE No. 21
LICENSED TO POST WITHOUT PREPAYMEN

ನೀವು ಓದಲೇಬೇಕಾದ ಪುಸ್ತಕಗಳು.....

ಜನಪ್ರಿಯ ವಾಲ್ಮೀಕಿ ರಾಮಾಯಣ

ಶರಣ ಚರಿತಾಮೃತ

ನನ್ನೂರು

ಗೋಕುಲ

ಭಗತ್‌ಸಿಂಗ್

ಸಿ. ವಿ. ರಾಮನ್

ವಚನ ಭಾಗವತ

ವಿದ್ಯಾಪೀಠಗಳು

ಶ್ರೀ ಶಂಕರಾಚಾರ್ಯ

ಆಂಡರ್‌ಸನ್ ಮತ್ತು ಇತರ ಕತೆಗಳು

ನಳಚರಿತ್ರೆಯ ಸಂಗ್ರಹ

ಗ್ರಾಂಟ್ವಿಗ್

ಇನ್ನೂ ಅನೇಕ ಉಪಯುಕ್ತ ಪುಸ್ತಕಗಳನ್ನು
ತರಿಸಿ ಓದಿರಿ

Edited by R. Boraiah, Printed by H. G. Ramaswamy Iyeng aanager at Karnataka State Adult Education Council Pre Mnd Published by Karnataka State Adult Education Coun Mysore city (India)